ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 22 ಗುರುವಾರ 2024

ಸಂಪುಟ: 44 | ಸಂಚಿಕೆ: 305 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ

ವಿಧಾನಸಭೆಯಲ್ಲಿ ಅಂಗೀಕಾರ

● ಮೈಸೂರಿಗರ ಬಹು ದಿನಗಳ ಬೇಡಿಕೆಗೆ ಸರ್ಕಾರದ ಮನ್ನಣೆ ● ಮುಖ್ಯಮಂತ್ರಿಗಳೇ ಪ್ರಾಧಿಕಾರದ ಪದನಿಮಿತ್ತ ಅಧ್ಯಕ್ಷರು ● ಮೂವರು ಸಚಿವರು, ಉಪಾಧ್ಯಕ್ಷರು; ಐವರ ನಾಮನಿರ್ದೇಶನ ಸೇರಿ 15 ಮಂದಿ ಸದಸ್ಯರು; ರಾಜಮನೆತನದವರು ಶಾಶ್ವತ ಸದಸ್ಯರು; ದೇವಸ್ಥಾನದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸದಸ್ಯ ಕಾರ್ಯದರ್ಶಿ



ಈ ಹಿಂದೆಯೇ ಪ್ರಸ್ತಾಪ ಸಲ್ಲಿಸಲಾಗಿತ್ತು!

ಮೈಸೂರು, ಫೆ.21–ಸಾಂಸ್ಕೃತಿಕ ನಗರಿ ಮೈಸೂರಿಗೆ ಮುಕುಟಪ್ರಾಯವಾಗಿರುವ ಪ್ರಕೃತಿದತ್ತ ಚಾಮುಂಡಿಬೆಟ್ಟದ ಸಂರಕ್ಷಣೆಗಾಗಿ ಮೈಸೂರಿನ ವಿವಿಧ ಕ್ಷೇತ್ರದ ತಜ್ಞರು, ಜನಪ್ರತಿನಿಧಿಗಳು, ಮೈಸೂರು ಕಳಕಳಿಯುಳ್ಳ ನಾಗರಿಕ ಮುಖಂಡರು ಒಂದೆಡೆ ಸೇರಿ ಹಲವಾರು ಸಭೆಗಳನ್ನು ನಡೆಸಿ ಸುದೀರ್ಘ ಚರ್ಚೆಯ ನಂತರ 'ಚಾಮುಂಡೇಶ್ವರಿ ಶ್ರೀ ಕ್ಷೇತ್ರ ಪ್ರಾಧಿಕಾರ ಕಾಯ್ದೆ–2022' ಕರಡನ್ನು ರೂಪಿಸಿ ರಾಜ್ಯದ ಹಿಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಲ್ಲಿಸಿ, ಚಾಮುಂಡೇಶ್ವರಿ ಶ್ರೀ ಕ್ಷೇತ್ರ ಪ್ರಾಧಿಕಾರ ರಚನೆಗಾಗಿ ಒತ್ತಾಯಿಸಿದ್ದರು. ಈ ಗಣ್ಯರು ಚಾಮುಂಡಿಬೆಟ್ಟ ರಕ್ಷಣೆ ಬಗ್ಗೆ ವೈಜ್ಞಾನಿಕ ಹಾಗೂ ಧಾರ್ಮಿಕವಾಗಿ ಸುದೀರ್ಘ ಚರ್ಚೆ ನಡೆಸಿದ ನಂತರ ಪ್ರಮುಖವಾದ 37 ಅಂಶಗಳುಳ್ಳ ಕರಡನ್ನು ಸಿದ್ಧಪಡಿಸಿ ಅಂದಿನ ಮುಖ್ಯಮಂತ್ರಿಗಳಿಗೆ ಸಲ್ಲಿಸಿದ್ದರು. ಚಾಮುಂಡಿಬೆಟ್ಟ ಸಹಜ ಸಂರಕ್ಷಣೆ ಪರ ಚಿಂತಕರ ತಂಡವು ಎನ್‌ಜಿಓ ಮೇಜರ್ ಜನರಲ್ ಎಸ್.ಜಿ.ಒಂಬತ್ಕೆರೆ, ಮೈಸೂರು ಗ್ರಾಹಕರ ಪರಿಷತ್‌ನ ಭಾಮಿ ವಿ.ಶೆಣೈ, ಚಂದ್ರಪ್ರಕಾಶ್,

● 6ನೇ ಪುಟಕ್ಕೆ



ಬೆಂಗಳೂರು, ಫೆ.21–ಮೈಸೂರಿಗರ ಬಹು ದಿನಗಳ ಬೇಡಿಕೆಯಾಗಿರುವ 'ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ' ವಿಧೇಯಕಕ್ಕೆ ರಾಜ್ಯ ವಿಧಾನಸಭೆ ಒಪ್ಪಿಗೆ ಸೂಚಿಸಿದೆ.

ಚಾಮುಂಡಿಬೆಟ್ಟದ ರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಪ್ರತ್ಯೇಕ ಪ್ರಾಧಿಕಾರ ರಚಿಸಬೇಕು ಎಂಬುದು ಮೈಸೂರಿನ ಕಳಕಳಿಯುಳ್ಳ ನಾಗರಿಕರ ಬಹು ದಿನಗಳ ಬೇಡಿಕೆಯಾಗಿತ್ತು. ಈ ಸಂಬಂಧ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ಅಧಿಕೃತವಾಗಿ ಯೋಜನಾ ಕರಡಿನೊಂದಿಗೆ ಮನವಿಯನ್ನೂ ಸಲ್ಲಿಸಲಾಗಿತ್ತು.


ಮೈಸೂರಿನವರೇ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇತ್ತೀಚೆಗೆ ಮಂಡಿಸಿದ ಬಜೆಟ್‌ನಲ್ಲಿ ಶ್ರೀ ಚಾಮುಂಡೇಶ್ವರಿ ಕ್ಷೇತ್ರದ ಅಭಿವೃದ್ಧಿ ಮತ್ತು ನಿರ್ವಹಣಾ ಕಾಮಗಾರಿಯನ್ನು ಕೈಗೊಳ್ಳಲು ಸ್ವತಂತ್ರ ಶಾಸನಬದ್ಧ ಪ್ರಾಧಿಕಾರ ರಚನೆ ಬಗ್ಗೆ ಉಲ್ಲೇಖಿಸಿದ್ದರು. ಈ ಹಿನ್ನೆಲೆಯಲ್ಲಿ ಮುಜರಾಯಿ ಇಲಾಖೆ ಸಚಿವ ರಾಮಲಿಂಗಾರೆಡ್ಡಿ ಅವರು, ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕ್ಷೇತ್ರಕ್ಕೆ ಸಂಬಂಧಿಸಿದ ಸಚಿವರು, ಸಂಸತ್ ಸದಸ್ಯರು, ಸರ್ಕಾರೇತರ ವ್ಯಕ್ತಿಗಳು, ಸರ್ಕಾರಿ ಅಧಿಕಾರಿಗಳನ್ನೊಳಗೊಂಡ ಪ್ರಾಧಿಕಾರ ರಚನೆ ಬಗ್ಗೆ ವಿಧೇಯಕವನ್ನು ವಿಧಾನಸಭೆಯಲ್ಲಿ ಮಂಡಿಸಿದ್ದು, ಈ ವಿಧೇಯಕಕ್ಕೆ ವಿಧಾನಸಭೆ ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದೆ.

ಮುಖ್ಯಮಂತ್ರಿಗಳೇ ಪದನಿಮಿತ್ತ ಅಧ್ಯಕ್ಷರು: ಪ್ರಾಧಿಕಾರಕ್ಕೆ 'ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ' ಎಂದು ಹೆಸರಿಡಲಾಗಿದೆ. ಮುಖ್ಯಮಂತ್ರಿಗಳು ಈ ಪ್ರಾಧಿಕಾರದ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ಮೂವರು ಚುನಾಯಿತ ಪ್ರತಿನಿಧಿಗಳನ್ನು ಉಪಾಧ್ಯಕ್ಷರಾಗಿ, ಐವರು ನಾಮನಿರ್ದೇಶನ ಸದಸ್ಯರೂ ಸೇರಿದಂತೆ ಒಟ್ಟು 15 ಮಂದಿ ಸದಸ್ಯರು, ಪದನಿಮಿತ್ತ ಕಾರ್ಯದರ್ಶಿ ಒಳಗೊಂಡಿರುವ ಪ್ರಾಧಿಕಾರದಲ್ಲಿ ಮೈಸೂರು ಮಹಾರಾಜರ ರಾಜವಂಶದ ಕಾನೂನುಬದ್ಧ ವಂಶಸ್ಥರು ಅಥವಾ ಅವರ ಪ್ರತಿನಿಧಿ ಶಾಶ್ವತ

● 6ನೇ ಪುಟಕ್ಕೆ

ಕೇಂದ್ರ ಗೃಹ ಸಚಿವ ಅಮಿತ್ ಷಾ–ಮಾಜಿ ಸಿಎಂ ಕುಮಾರಸ್ವಾಮಿ ಮಹತ್ವದ ಮಾತುಕತೆ

ರಾಜ್ಯಸಭೆ ಚುನಾವಣೆಯಲ್ಲಿ ಮೈತ್ರಿ ಅಭ್ಯರ್ಥಿಗಳ ಗೆಲುವಿನ ಕಾರ್ಯತಂತ್ರ; ಕಾಂಗ್ರೆಸ್ ಮಣಿಸುವ ಬಗ್ಗೆ ಗಂಭೀರ ಚರ್ಚೆ





ಬೆಂಗಳೂರು, ಫೆ.21–(ಕೆಎಂಶಿ) ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಪರಾಭವಗೊಳಿಸಿ ಎನ್‌ಡಿಎ ಕೂಟದ ಎರಡನೇ ಅಭ್ಯರ್ಥಿ ಗೆಲುವಿಗೆ ತಂತ್ರಗಾರಿಕೆ ರೂಪಿಸುವ ಸಂಬಂಧ ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷರಾದ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಚರ್ಚೆ ಮಾಡಿದ್ದಾರೆ.

ಕೇಂದ್ರ ಗೃಹ ಸಚಿವರ ತುರ್ತು ಕರೆಯ ಮೇರೆಗೆ ಇಂದು ಸಂಜೆ ತಮ್ಮ ಪುತ್ರ ನಿಖಿಲ್ ಕುಮಾರಸ್ವಾಮಿ ಹಾಗೂ ರಾಜ್ಯಸಭೆಯ ಎನ್‌ಡಿಎ ಅಭ್ಯರ್ಥಿ ಕುಪೇಂದ್ರರೆಡ್ಡಿ ಅವರೊಂದಿಗೆ ದೆಹಲಿಗೆ ತೆರಳಿದ್ದಾರೆ.

ಮುಂಬರುವ ಲೋಕಸಭೆ ಚುನಾವಣೆ, ಜೆಡಿಎಸ್–ಬಿಜೆಪಿ ಮೈತ್ರಿ, ಎನ್‌ಡಿಎ ಕೂಟದ ರಾಜ್ಯದ ಅಭ್ಯರ್ಥಿಗಳ ಆಯ್ಕೆ ಅಷ್ಟೇ ಅಲ್ಲದೆ, ಎಲ್ಲದಕ್ಕೂ ಮಿಗಿಲಾಗಿ ಕಾಂಗ್ರೆಸ್ ಚುನಾವಣಾ ಸಿದ್ಧತೆ ಬಗ್ಗೆ ಚರ್ಚೆ ನಡೆಸಿದ್ದಾರೆ.

ಚುನಾವಣಾ ಪೂರ್ವ ಸಮೀಕ್ಷಾ ವರದಿ ಆದರಿಸಿ ಲೋಕಸಭಾ ಕ್ಷೇತ್ರ ಹಂಚಿಕೆ ಹಾಗೂ ಅಭ್ಯರ್ಥಿಗಳ ಆಯ್ಕೆ ಅಂತಿಮಗೊಳಿಸಿಕೊಂಡಿದ್ದು, ಅಧಿಕೃತ ಪ್ರಕಟಣೆ ಮಾತ್ರ ಬಾಕಿ ಉಳಿಸಿಕೊಂಡಿದ್ದಾರೆ. ಲೋಕಸಭಾ ಚುನಾವಣಾ ಹೊಸ್ತಿಲಲ್ಲಿ ಎನ್‌ಡಿಎ ಎರಡನೇ ಅಭ್ಯರ್ಥಿಯನ್ನು ರಾಜ್ಯಸಭೆಗೆ ಚುನಾಯಿತರಾಗುವಂತೆ ಮಾಡಿದರೆ, ಕಾಂಗ್ರೆಸ್‌ನ ನೈತಿಕ ಶಕ್ತಿ ಕುಗ್ಗಲಿದೆ. ಜತೆಗೆ ಆ ಪಕ್ಷದ ಶಾಸಕರು ಮುಂದಿನ ರಾಜಕೀಯ

● 2ನೇ ಪುಟಕ್ಕೆ

ಮಂಡ್ಯ ಬಿಟ್ಟು ಬೇರೆಲ್ಲೂ ಹೋಗಲ್ಲ

ಸಂಸದೆ ಸುಮಲತಾ ಅಂಬರೀಶ್ ಸ್ಪಷ್ಟ ನುಡಿ



ಮಂಡ್ಯ,ಫೆ.21– ಮಂಡ್ಯ ಜಿಲ್ಲೆಯಲ್ಲಿ ಬಿಜೆಪಿ ಸಂಘಟನೆ ಚೆನ್ನಾಗಿದೆ. ಈ ಬಾರಿ ವಿಧಾನಸಭೆಯಲ್ಲಿ ಉತ್ತಮ ಮತ ಬಂದಿದ್ದು, ಮಂಡ್ಯ ಉಳಿಸಿಕೊಂಡರೆ ಪಕ್ಷ ಕಟ್ಟಲು ಸಹಕಾರಿಯಾಗಲಿದೆ. ನಾನಂತೂ ಮಂಡ್ಯ ಬಿಟ್ಟು ಬೇರೆಡೆ ಹೋಗುವುದಿಲ್ಲ ಎಂದು ಸಂಸದೆ ಸುಮಲತಾ ಅಂಬರೀಶ್ ಸ್ಪಷ್ಟಪಡಿಸಿದ್ದಾರೆ.

ನಾನು ಯಾವತ್ತು ನನಗಾಗಿ ಟಿಕೆಟ್ ಕೊಡಿ ಎಂದು ಲಾಬಿ ಮಾಡಿಲ್ಲ. ಪಕ್ಷ ಸೇರ್ಪಡೆಗೆ ತಾಂತ್ರಿಕವಾಗಿ ಅಡ್ಡಿಯಾಗಿದೆ. ಆ ಕಾರಣಕ್ಕೆ ನಾನು ಬಾಹ್ಯ ಬೆಂಬಲ ನೀಡಿದ್ದೇನೆ ಎಂದು ಸುದ್ದಿಗಾರರೊಂದಿಗೆ ಮಾತನಾಡುತ್ತಾ ತಿಳಿಸಿದರು.

ಟಿಕೆಟ್ ವಿಚಾರವಾಗಿ ರಾಷ್ಟ್ರೀಯ ನಾಯಕರು ನನ್ನೊಂದಿಗೆ ಮಾತನಾಡಿದ್ದಾರೆ. ಇದಲ್ಲದೇ ನಾನು ಸ್ಥಳೀಯ ಬಿಜೆಪಿಗರ ವಿಶ್ವಾಸದಲ್ಲಿಲ್ಲ ಎಂಬುದು ಸುಳ್ಳು. ನಾನು ಪಕ್ಷ ಸೇರುವವರೆಗೂ ಸಭೆಗಳಿಗೆ ನಾನಾಗೆ ಹೋಗಲು ಆಗಲ್ಲ. ಪಕ್ಷದ ವತಿಯಿಂದ ಆಹ್ವಾನ ಬರುವುದು ಪದ್ಧತಿ. ಈಗಲೂ ಬಿಜೆಪಿ ಜಿಲ್ಲಾ ನಾಯಕರು ನನ್ನ ಜೊತೆ ಸಂಪರ್ಕದಲ್ಲಿದ್ದಾರೆ. ನಮ್ಮಲ್ಲಿ, ಅವರಲ್ಲಿ ಯಾವುದೇ ಗೊಂದಲ ಇಲ್ಲ ಎಂದು ಸ್ಪಷ್ಟಪಡಿಸಿದರು.

ಸುಮಲತಾ ಕಾಂಗ್ರೆಸ್‌ಗೆ ಬರಲಿ ಎಂದು ಯಾರು ಆಹ್ವಾನ ಕೊಟ್ಟರು ಹೇಳಲಿ ಎಂದು ಚಲುವರಾಯಸ್ವಾಮಿ ಹೇಳಿಕೆ ವಿಚಾರದ ಬಗ್ಗೆ ಮಾತನಾಡಿ, ಕಾಂಗ್ರೆಸ್‌ನಲ್ಲಿ 25 ವರ್ಷ ಅಂಬರೀಶ್ ಇದ್ದರು. ಪರಿಚಯಸ್ಥರು

● 6ನೇ ಪುಟಕ್ಕೆ

ಲೋಕಸಭಾ ಚುನಾವಣೆ ಸ್ಪರ್ಧೆ ಬಗ್ಗೆ ಯೋಚನೆ ಮಾಡಿ ಹೇಳ್ತೀನಿ



ಮಂಡ್ಯ: ಜನರು ನಾನು ಲೋಕಸಭಾ ಚುನಾವಣೆ ಸ್ಪರ್ಧೆ ಬಗ್ಗೆ ಮಾತನಾಡುತ್ತಾ ಇದ್ದಾರೆ. ಇನ್ನೂ ಅದರ ಬಗ್ಗೆ ನಾನು ತೀರ್ಮಾನ ಮಾಡಿಲ್ಲ ಎಂದು ಜಯದೇವ ಹೃದ್ರೋಗ ಆಸ್ಪತ್ರೆಯ ನಿವೃತ್ತ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಹೇಳಿದ್ದಾರೆ.

ಲೋಕಸಭಾ ಚುನಾವಣೆ ಸ್ಪರ್ಧೆ ಬಗ್ಗೆ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ರಾಜಕೀಯಕ್ಕೆ ಬರಬೇಕಾ?, ಲೋಕಸಭಾಗೆ ನಿಲ್ಲಬೇಕೆಂದು ನಿರ್ಧಾರ ಮಾಡಿಲ್ಲ. ಹಲವು ಕಡೆ ಜನರು ಒತ್ತಡ ಹಾಕುತ್ತಾ ಇದ್ದಾರೆ. ರಾಜ್ಯಮಟ್ಟದಲ್ಲಿ ಹೃದ್ರೋಗ

● 6ನೇ ಪುಟಕ್ಕೆ

ಶಾಲೆಗಳಿಂದ 100 ಮೀ. ವ್ಯಾಪ್ತಿಯಲ್ಲಿ ಸಿಗರೇಟ್ ನಿಷೇಧ

● ಉಲ್ಲಂಘನೆಗೆ ದಂಡ ಹೆಚ್ಚಳ: ಮಸೂದೆ ಅಂಗೀಕಾರ ● 21 ವರ್ಷ ಒಳಪಟ್ಟವರಿಗೆ ಸಿಗರೇಟ್ ಮಾರುವಂತಿಲ್ಲ ● ಎಲ್ಲೆಡೆ ಹುಕ್ಕಾ ಬಾರ್ ನಿಷೇಧ



ಬೆಂಗಳೂರು, ಫೆ 21–ಸಿಗರೇಟ್ ಮತ್ತು ಇತರೆ ತಂಬಾಕು ಉತ್ಪನ್ನಗಳ (ಜಾಹೀರಾತು ನಿಷೇಧ ಮತ್ತು ವ್ಯಾಪಾರ ಮತ್ತು ವಾಣಿಜ್ಯ, ಉತ್ಪಾದನೆ, ಸರಬರಾಜು ಮತ್ತು ವಿತರಣೆಯ ವಿನಿಮಯ) (ಕರ್ನಾಟಕ ತಿದ್ದುಪಡಿ) ವಿಧೇಯಕ ಇಂದು (ಫೆ.21) ವಿಧಾನಸಭೆಯಲ್ಲಿ ಅಂಗೀಕಾರವಾಗಿದೆ. ಈ ಹಿನ್ನೆಲೆಯಲ್ಲಿ ಶಾಲೆಗಳಿಂದ ನೂರು ಮೀಟರ್ ವ್ಯಾಪ್ತಿಯಲ್ಲಿ ಸಿಗರೇಟ್ ಮಾರಾಟ ನಿಷೇಧಿಸಲಾಗಿದೆ. ಒಂದು ವೇಳೆ ನಿಯಮ ಉಲ್ಲಂಘಿಸಿದವರ ವಿರುದ್ಧ ದಂಡದ ಪ್ರಮಾಣ 100 ರೂ. ರಿಂದ 1000 ರೂ.ಗೆ ಏರಿಕೆ ಮಾಡಲಾಗಿದೆ. ಇನ್ನು ಸಿಗರೇಟು ಮಾರಾಟದ ವಯೋಮಿತಿ 18 ವರ್ಷದಿಂದ 21 ವರ್ಷಕ್ಕೆ ಏರಿಕೆ ಮಾಡಲಾಗಿದೆ. ಯಾವುದೇ ಬಾರ್ ರೆಸ್ಟೋರೆಂಟ್ ಹಾಗೂ ಇತರೆ ಕಡೆಗಳಲ್ಲಿ ಹುಕ್ಕಾ ಬಾರ್ ನಿಷೇಧಿಸಲಾಗಿದೆ. ಹುಕ್ಕಾ ಬಾರ್ ಅನಧಿಕೃತವಾಗಿ ನಡೆಸಿದರೆ ಒಂದು ವರ್ಷಕ್ಕೆ ಕಡಿಮೆ ಇಲ್ಲದಂತೆ

● 6ನೇ ಪುಟಕ್ಕೆ

ರಾಜ್ಯದ ಎಲ್ಲಾ ಶಾಲೆಗಳಲ್ಲಿ ಮೊದಲು ನಾಡಗೀತೆ ಹಾಡಬೇಕು

ಸರ್ಕಾರದ ಕಟ್ಟಾದೇಶ

ಬೆಂಗಳೂರು, ಫೆ.21(ಕೆಎಂಶಿ)– ರಾಜ್ಯದ ಎಲ್ಲಾ ಶಾಲೆಗಳಲ್ಲಿ ನಾಡಗೀತೆಯನ್ನು ದೈನಂದಿನ ಚಟುವಟಿಕೆಗಳು ಆರಂಭವಾಗುವುದಕ್ಕೂ ಮುನ್ನ ಹಾಡುವುದನ್ನು ಸರ್ಕಾರ ಕಡ್ಡಾಯಗೊಳಿಸಿದೆ.

ನಾಡಗೀತೆ ವಿಷಯದಲ್ಲಿ ಉಂಟಾಗಿದ್ದ ಲೋಪ ಸರಿಪಡಿಸಿ ಆದೇಶ ಮಾಡಿರುವ ಸರ್ಕಾರ, ಖಾಸಗಿ ಸೇರಿದಂತೆ ಎಲ್ಲಾ ತೆರನಾದ ಶಾಲೆಗಳಲ್ಲೂ ನಾಡಗೀತೆ ಹಾಡುವುದು ಕಡ್ಡಾಯ. ರಾಷ್ಟ್ರಕವಿ ಕುವೆಂಪು ಬರೆದಿರುವ 'ಜಯ ಭಾರತ ಜನನಿಯ ತನುಜಾತೆ' ಕವನವನ್ನು 'ನಾಡಗೀತೆ'ಯಾಗಿ ಘೋಷಿಸಿದ್ದು, ಈ ಗೀತೆಯನ್ನೇ ಹಾಡಬೇಕು.

ಶಾಲೆಗಳಷ್ಟೇ ಅಲ್ಲದೆ, ನಿಗಮ, ಮಂಡಳಿ, ಪ್ರಾಧಿಕಾರ ಮುಂತಾದ ಅರೆ ಸರ್ಕಾರಿ ಸಂಸ್ಥೆಗಳ ಅಧಿಕೃತ ಕಾರ್ಯಕ್ರಮಗಳ ಪ್ರಾರಂಭದಲ್ಲಿ ನಾಡಗೀತೆ ಹಾಡುವುದು ಕಡ್ಡಾಯ ಮಾಡಲಾಗಿದೆ.

ಈ ಸಂಬಂಧ ಹೇಳಿಕೆ ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಮೊದಲು ಹೊರಡಿಸಿದ್ದ ಸುತ್ತೋಲೆಯಲ್ಲಿ ಪ್ರಿಂಟ್ ಮಿಸ್ಟೇಕ್‌ನಿಂದ ತಪ್ಪು ಆಗಿದೆ. ಇಂದೇ ಶೀಘ್ರವೇ ಪ್ರಿಂಟ್ ಮಿಸ್ಟೇಕ್ ಸರಿ ಮಾಡಲಾಗುವುದು. ರಾಜ್ಯದ ಎಲ್ಲಾ ಶಾಲೆಗಳಲ್ಲಿ ನಾಡಗೀತೆ ಹಾಡುವುದು ಕಡ್ಡಾಯ ಎಂದರು.

ನಮಗೆ ಎಲ್ಲಾ ಶಾಲೆಗಳು ಒಂದೇ. ಆದೇಶ ಮಾಡಬೇಕಾದರೆ ಸರ್ಕಾರಿ ಶಾಲೆ, ಅನುದಾನಿತ ಶಾಲೆ ಅಂತಾ ಹಾಕಿದ್ದಾರೆ. ಎಲ್ಲಾ ಶಾಲೆಗಳು ಅಂತಾ ಹಾಕಿಸುತ್ತೇವೆ, ಸರ್ಕಾರಕ್ಕೆ ಕನ್ನಡದ ಬಗ್ಗೆ ಕಾಳಜಿ ಇದೆ, ಸಹಜವಾಗಿ ನೋಟ್ ಶೀಟ್ ಒಳಗಡೆ ಸಣ್ಣಪುಟ್ಟ ಸಮಸ್ಯೆ ಆಗಿದೆ ಎಂದು ತಪ್ಪು ಒಪ್ಪಿಕೊಂಡರು.

ಪೇಪರ್ ಖಾತಾ ಆಧಾರದಲ್ಲಿ ನೋಂದಣಿ ರದ್ದು

ಇನ್ನು ನೋಂದಣಿಗೆ ಇ–ಆಸ್ತಿ ಕಡ್ಡಾಯ



ಬೆಂಗಳೂರು, ಫೆ. 21– ವಿಧಾನಸಭೆಯಲ್ಲಿ ಇಂದು ನೋಂದಣಿ (ತಿದ್ದುಪಡಿ) ವಿಧೇಯಕ ಅಂಗೀಕಾರವಾಗಿದೆ. ಆ ಮೂಲಕ ಈಗ ಪೇಪರ್ ಖಾತಾ ಆಧಾರದಲ್ಲಿ ನೋಂದಣಿ ಮಾಡುವುದು ರದ್ದಾಗಿದ್ದು, ಇನ್ನು ಮುಂದೆ ನೋಂದಣಿಗೆ ಇ–ಆಸ್ತಿ (E-property registration) ಕಡ್ಡಾಯ ಮಾಡಲಾಗಿದೆ. ಕಾವೇರಿ ತಂತ್ರಾಂಶದಲ್ಲಿ ಅಟೋಮ್ಯಾಟಿಕ್ ಆಗಿ ನಗರಸಭೆ ವ್ಯಾಪ್ತಿಯ ಡೇಟಾ ಬೇಸ್ ಚೆಕ್ ಪರಿಶೀಲನೆಯಾಗಿ ಖಾತೆ ಆಗಿದ್ದರೆ ಮಾತ್ರ ನೋಂದಣಿ ಆಗಲಿದೆ. ಹಾಗಾಗಿ ಇನ್ನು ಮುಂದೆ ಪೇಪರ್ ಖಾತೆ ಆಧಾರದಲ್ಲಿ ನೋಂದಣಿ ಆಗುವುದಿಲ್ಲ. ಕಾನೂನು ಬಾಹಿರ ನೋಂದಣಿಗೆ ಕಡಿವಾಣ ಹಾಕಲು ಕಾನೂನು ತಿದ್ದುಪಡಿ ಮಾಡಲಾಗಿದೆ. ಬಜೆಟ್‌ನಲ್ಲಿ ಘೋಷಣೆಯಂತೆ ತಿದ್ದುಪಡಿ ವಿಧೇಯಕ ಅಂಗೀಕರಿಸಲಾಗಿದೆ.

ಕಡ್ಡಾಯವಾಗಿ ನೋಂದಾಯಿಸಲಾಗುವ ಆಯ್ದ ದಾಖಲೆಗಳ ಇ–ನೋಂದಣಿಯನ್ನು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಎರಡು ಪಕ್ಷಗಳು ಇಲ್ಲದೇ ನೋಂದಾವಣಿ ಮಾಡಲಾಗುವುದು. ಪೇಪರ್ ಖಾತೆ ಆಧಾರದಲ್ಲಿ ನೋಂದಣಿ ನಡೆಯುತ್ತಿರುವುದರಿಂದ ಸರ್ಕಾರಕ್ಕೆ ನಷ್ಟ ಆಗುತ್ತಿರುವ ಬಗ್ಗೆ ಹಣಕಾಸು ಇಲಾಖೆ ಆಕ್ಷೇಪಿಸಿತ್ತು. ಖಾತಾ ಮಾಡುವ ವೇಳೆ ಗ್ರಾಮೀಣ ಪ್ರದೇಶಕ್ಕೆ ನೀಡಲಾಗಿದ್ದ ಇ–ಸ್ವತ್ತು, ನಗರ ಪ್ರದೇಶಗಳಿಗೆ ನೀಡಲಾಗಿದ್ದ ಇ– ಆಸ್ತಿ ನೋಂದಣಿ ಮಾಡುವಾಗ ಪಂಚಾಯತಿ ವ್ಯಾಪ್ತಿಯಲ್ಲಿ ಇ–ಖಾತೆ ಇದೆಯಾ ಎಂದು ಆಟೋಮ್ಯಾಟಿಕ್ ಆಗಿ ಪರಿಶೀಲನೆ ಮಾಡಲಾಗುವುದು. ನಗರ ಪ್ರದೇಶಗಳಲ್ಲಿ ನೋಂದಣಿಗೆ ಪೇಪರ್ ಖಾತಾದ ಮೇಲೆ ನೋಂದಣಿ ನಡೆಯುತ್ತಿತ್ತು.

ಸರ್ಕಾರವು ಇ–ಆಸ್ತಿ ನೋಂದಣಿಗೆ ಕಾವೇರಿ ತಂತ್ರಾಂಶದೊಂದಿಗೆ ಇತ್ತೀಚೆಗೆ ಜೋಡಣೆ ಮಾಡಲಾಗಿದೆ. ಆ ಮೂಲಕ ಆಸ್ತಿಗಳ ನೋಂದಣಿ ವೇಳೆ ನಡೆಯುತ್ತಿದ್ದ ಅಕ್ರಮಗಳಿಗೆ ಕಡಿವಾಣ ಹಾಕಲಾಗುತ್ತಿದೆ. ಸಾರ್ವಜನಿಕರು ವಿಳಂಬವಿಲ್ಲದೆ ತಮ್ಮ ದಸ್ತಾವೇಜುಗಳನ್ನು ನೋಂದಣಿ

● 6ನೇ ಪುಟಕ್ಕೆ

ಕಾವೇರಿ 2.0 ಸರ್ವರ್ ವೈಫಲ್ಯ

ಉಪನೋಂದಣಾಧಿಕಾರಿ ಕಚೇರಿಗಳಲ್ಲಿ ಜನರ ಪರದಾಟ





ಸರ್ವರ್ ವೈಫಲ್ಯದ ಕಾರಣ ಮೈಸೂರಿನ ನಜರ್‌ಬಾದ್‌ನಲ್ಲಿರುವ ಮಿನಿ ವಿಧಾನಸೌಧದ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಸಿಬ್ಬಂದಿ ಕಾರ್ಯ ಸ್ಥಗಿತಗೊಳಿಸಿದ್ದರಿಂದ ಟೇಬಲ್, ಕುರ್ಚಿ ಖಾಲಿ ಇರುವುದು (ಎಡಚಿತ್ರ). ಕಾದು ಕುಳಿತಿರುವ ಸಾರ್ವಜನಿಕರನ್ನು ಕಾಣಬಹುದು.

ಮೈಸೂರು, ಫೆ.21(ಆರ್‌ಕೆ)–ಕಾವೇರಿ 2.0 ಆನ್‌ಲೈನ್ ಸರ್ವೀಸ್ ಪೋರ್ಟಲ್‌ನಲ್ಲಿ ತಾಂತ್ರಿಕ ದೋಷದಿಂದಾಗಿ ಸರ್ವರ್ ಕೈಕೊಟ್ಟ ಹಿನ್ನೆಲೆಯಲ್ಲಿ ಮೈಸೂರು ನಗರ ಮತ್ತು ಜಿಲ್ಲೆ ಸೇರಿದಂತೆ ರಾಜ್ಯದ ಎಲ್ಲಾ ಉಪನೋಂದಣಾಧಿಕಾರಿ ಕಚೇರಿಗಳಲ್ಲಿ ಇಂದು ಆಸ್ತಿಗಳ ನೋಂದಣಿ ಪ್ರಕ್ರಿಯೆ ಸಂಪೂರ್ಣವಾಗಿ ಸ್ಥಗಿತಗೊಂಡಿತ್ತು.

ಬೆಳಗ್ಗೆ 10 ಗಂಟೆಗೆ ಕಚೇರಿಗೆ ಬಂದು ಸಿಸ್ಟಂ ಆನ್ ಮಾಡುತ್ತಿದ್ದಂತೆಯೇ ನೋಂದಣಿಗಾಗಿ ಅಭಿವೃದ್ಧಿಗೊಳಿಸಿರುವ ಕಾವೇರಿ 2.0 ಆನ್‌ಲೈನ್ ಸರ್ವೀಸ್ ಪೋರ್ಟಲ್ ಓಪನ್ ಆಗಲಿಲ್ಲ. ಆಸ್ತಿಗಳ ಕ್ರಯ, ಗುತ್ತಿಗೆ ಕರಾರು, ದಾನಪತ್ರ ಸೇರಿದಂತೆ ವಿವಿಧ ಬಗೆಯ ನೋಂದಣಿಗಾಗಿ ಪೂರಕ ದಾಖಲೆ ಪತ್ರ ಸಲ್ಲಿಸಿ ಟೋಕನ್ ಪಡೆದಿದ್ದ ಸಾರ್ವಜನಿಕರು ಕೆ.2 ಚಲನ್ ಮೂಲಕ ಹಣ ಪಾವತಿಸಲು ಮುಂದಾದರೂ, ಆನ್‌ಲೈನ್ ಪೋರ್ಟಲ್ ಓಪನ್ ಆಗಲೇ ಇಲ್ಲ. ನೋಂದಣಿ ಶುಲ್ಕ, ಸ್ಟ್ಯಾಂಪ್ ಡ್ಯೂಟಿಯನ್ನು ಆನ್‌ಲೈನ್‌ನಲ್ಲಿ ಪಾವತಿಸಲೂ ಸಾಧ್ಯವಾಗದೇ, ಸರ್ವರ್ ಸಮಸ್ಯೆ ಬಗೆಹರಿಯಬಹುದೆಂದು ಕಾದು ಕುಳಿತಿದ್ದ ಸಾರ್ವಜನಿಕರು ಸಂಜೆಯಾದರೂ ತಾಂತ್ರಿಕ ದೋಷ ಮುಂದುವರಿದ ಕಾರಣ ನಿರಾಶೆಯಿಂದ ಹಿಂದಿರುಗಬೇಕಾಯಿತು. ರಿಜಿಸ್ಟ್ರೇಷನ್ ಫೀ, ಸ್ಟ್ಯಾಂಪ್ ಡ್ಯೂಟಿ, ವಿವಾಹ ನೋಂದಣಿ ಶುಲ್ಕ, ಎನ್‌ಕಂಬರೆನ್ಸ್ ಸರ್ಟಿಫಿಕೇಟ್ ಫೀ,

● 6ನೇ ಪುಟಕ್ಕೆ

ವೃತ್ತಿಪರ ಕೋರ್ಸ್ ಮುಗಿಸಿದವರಿಗೆ ಉದ್ಯೋಗಾವಕಾಶ ಕಲ್ಪಿಸಲು

ಫೆ.26, 27ರಂದು ಬೆಂಗಳೂರು ಅರಮನೆ ಮೈದಾನದಲ್ಲಿ

ಬೃಹತ್ ಯುವ ಸಮೃದ್ಧಿ ಸಮ್ಮೇಳನ



ಜಂಟಿ ಸುದ್ದಿಗೋಷ್ಠಿಯಲ್ಲಿ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ಹಾಗೂ ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ.

ಬೆಂಗಳೂರು, ಫೆ.21(ಕೆಎಂಶಿ)– ಪದವಿ, ಇಂಜಿನಿಯರಿಂಗ್, ಡಿಪ್ಲೊಮಾ ಹಾಗೂ ಇನ್ನಿತರ ವೃತ್ತಿಪರ ಕೋರ್ಸ್‌ಗಳನ್ನು ಪೂರ್ಣಗೊಳಿಸಿದವರಿಗೆ ಉದ್ಯೋಗಾವಕಾಶ ಕಲ್ಪಿಸುವ ಬೃಹತ್ ಯುವಸಮೃದ್ಧಿ ಸಮ್ಮೇಳನ ಇದೇ 26 ಮತ್ತು 27ರಂದು ನಗರದ ಅರಮನೆ ಮೈದಾನದಲ್ಲಿ ನಡೆಯಲಿದೆ.

ಜಂಟಿ ಸುದ್ದಿಗೋಷ್ಠಿಯಲ್ಲಿಂದು ಈ ವಿಷಯ ತಿಳಿಸಿದ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್ ಹಾಗೂ ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಕೌಶಲ್ಯಾಭಿವೃದ್ಧಿ ಹಾಗೂ ಜೀವನೋಪಾಯ ಇಲಾಖೆ ಸಹಭಾಗಿತ್ವದಲ್ಲಿ ಯುವಸಮೃದ್ಧಿ ಸಮ್ಮೇಳನ ಆಯೋಜಿಸಲಾಗಿದೆ, ರಾಜ್ಯಾದ್ಯಂತ 31 ಸಾವಿರ ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಹೆಸರು ನೋಂದಣಿ ಮಾಡಿಕೊಂಡಿದ್ದಾರೆ ಎಂದರು.

ಉದ್ಯೋಗ ಮೇಳದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಹೆಸರಾಂತ 500ಕ್ಕೂ ಹೆಚ್ಚು ಕಂಪನಿಗಳು ಪಾಲ್ಗೊಳ್ಳಲಿವೆ, ಅಂದಾಜು ಒಂದು ಲಕ್ಷ ಹುದ್ದೆಗಳು ಲಭ್ಯವಿದ್ದು, ಶೈಕ್ಷಣಿಕ ಅರ್ಹತೆಗೆ ತಕ್ಕಂತೆ ಉದ್ಯೋಗ ಒದಗಿಸಲು ಇದು ವೇದಿಕೆಯಾಗಲಿದೆ. ಉದ್ಯೋಗ ಮೇಳದಲ್ಲಿ 600ಕ್ಕೂ ಹೆಚ್ಚು ಸ್ಟಾಲ್‌ಗಳನ್ನು ಹಾಕಲಾಗಿದೆ, ಅಭ್ಯರ್ಥಿಗಳು ಪ್ರತಿಯೊಂದು ಸ್ಟಾಲ್‌ಗೂ ಭೇಟಿ ನೀಡಿ, ತಮ್ಮ ಶೈಕ್ಷಣಿಕ ಅರ್ಹತೆಗೆ ಅನುಗುಣವಾಗಿ ಎಲ್ಲಿ, ಯಾವ ಹುದ್ದೆಗಳು ಖಾಲಿ ಇವೆ ಎಂಬ ಮಾಹಿತಿ ಪಡೆಯಬಹುದಾಗಿದೆ, ಉದ್ಯೋಗ ಅರಸಿ ಬರುವವರಿಗೆ ಆಯಾ ಕಂಪನಿಗಳ ನುರಿತ ತಜ್ಞರು, ಪರಿಣತರು ಸಂಪೂರ್ಣ ಮಾಹಿತಿ ನೀಡಲಿದ್ದಾರೆ ಎಂದರು. ಉದ್ಯೋಗ ಮೇಳದಲ್ಲಿ ಕೆಲಸ ಸಿಗದವರಿಗೆ ತರಬೇತಿ ನೀಡುವ ಉದ್ದೇಶ ಹೊಂದಿದ್ದು, ತರಬೇತಿ ನಂತರ ಮುಂದಿನ ದಿನಗಳಲ್ಲಿ ಉದ್ಯೋಗ ಪಡೆಯಬಹುದಾಗಿದೆ.

ಉದ್ಯೋಗ ಮೇಳದಲ್ಲಿ ಹೆಸರು ನೋಂದಣಿ ಮಾಡಿಕೊಂಡವರಿಗೆ ಸ್ಟಾಲ್‌ಗಳ ಮಾಹಿತಿ ಕುರಿತು ಮೆಸೇಜ್ ಕಳಿಸಲಾಗುವುದು.



ಇದು ಕೇವಲ ಉದ್ಯೋಗ ಮಾತ್ರ ಕೊಡುವುದಲ್ಲ, ಸ್ಕಿಲ್ ಗ್ಯಾಪ್ ಸರಿಪಡಿಸುವ ಕೇಂದ್ರಗಳನ್ನು ತೆರೆಯಲಾಗಿದೆ, ನೋಂದಣಿಯಾದವರನ್ನು ಗುರುತಿಸಿ ಉದ್ಯೋಗ ಕೊಡಿಸುವ ಪ್ರಯತ್ನ ಮಾಡಲಾಗುವುದು.

ಯುವಸಮೃದ್ಧಿ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉದ್ಘಾಟಿಸಲಿದ್ದು, ಸಮ್ಮೇಳನಕ್ಕೆ ಬರುವವರಿಗೆ ಉಚಿತ ಊಟದ ವ್ಯವಸ್ಥೆ ಹಾಗೂ ಮೆಜೆಸ್ಟಿಕ್‌ನ ರೈಲ್ವೆ ಹಾಗೂ ಬಸ್ ನಿಲ್ದಾಣಗಳಿಂದ ಮತ್ತು ಶಾಂತಿನಗರ ಬಸ್ ನಿಲ್ದಾಣದಿಂದ ಉಚಿತ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

ಇಂದಿನಿಂದ ಶ್ರೀ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ಜಾತ್ರಾ ಮಹೋತ್ಸವ

ಮೈಸೂರು,ಫೆ.21(ಆರ್‌ಕೆ)– ಮೈಸೂರಿನ ಮಂಡಿ ಮೊಹಲ್ಲಾದಲ್ಲಿ ನಾಳೆ (ಫೆ.22)ಯಿಂದ ಫೆ.26 ರವರೆಗೆ ಶ್ರೀ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ಜಾತ್ರಾ ಮಹೋತ್ಸವ ನಡೆಯಲಿದೆ.



ಶ್ರೀ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ಧರ್ಮ ಸಂಸ್ಥೆ ಟ್ರಸ್ಟ್ ವತಿಯಿಂದ ಆಯೋಜಿಸಿರುವ 77ನೇ ವರ್ಷದ ಜಾತ್ರಾ ಮಹೋತ್ಸವದಲ್ಲಿ ಗುರುವಾರ ಮುಂಜಾನೆ ಪುಣ್ಯಾಹ, ಕಲಶ ಸ್ಥಾಪನೆ, ಗಣಪತಿ, ಪರಶುರಾಮ ಮತ್ತು ಶ್ರೀ ದೇವಿಯವರಿಗೆ ಪಂಚಾಮೃತ ಅಭಿಷೇಕ, ಕಲ್ಲೋಕ್ತಿ ಪೂಜೆ, ಮಹಾಮಂಗಳಾರತಿ ನಡೆಯಲಿದೆ.

ಫೆಬ್ರವರಿ 23ರಂದು ಹೋಮ, ಹವನಾದಿ ಕೈಂಕರ್ಯ, ಫೆಬ್ರವರಿ 24ರಂದು ಗಣಪತಿಗೆ ನವನೀತಾಲಂಕಾರ, ಅಷ್ಟೋತ್ತರ, ಸಂಜೆ 6 ಗಂಟೆಗೆ ಶ್ರೀ ದೇವಿಯವರ ಉತ್ಸವ, ರಾತ್ರಿ 8 ಗಂಟೆಗೆ ದೇವಸ್ಥಾನದಲ್ಲಿ ಉಯ್ಯಾಲೋತ್ಸವ, ಫೆ. 25 ರಂದು ಬೆಳಗ್ಗೆ 10 ಗಂಟೆಗೆ ಶ್ರೀ ಸತ್ಯನಾರಾಯಣಸ್ವಾಮಿ ಪೂಜೆ ಹಾಗೂ ಫೆ.26 ರಂದು ರಾತ್ರಿ 7 ಗಂಟೆಗೆ ಶ್ರೀ ದೇವಿಯವರನ್ನು ಉಯ್ಯಾಲೆಯಿಂದ ಇಳಿಸಿ ನಂತರ ಮಹಾಮಂಗಳಾರತಿ, ಪ್ರಸಾದ ವಿನಿಯೋಗವಾಗಲಿದೆ.

ಈ ಧಾರ್ಮಿಕ ಕೈಂಕರ್ಯದಲ್ಲಿ ಪಾಲ್ಗೊಂಡು ಭಕ್ತಾದಿಗಳು ದೇವರ ಕೃಪೆಗೆ ಪಾತ್ರರಾಗಬೇಕೆಂದು ದೇವಸ್ಥಾನದ ಪ್ರಧಾನ ಅರ್ಚಕ ಹೆಚ್.ಎಸ್.ಸುಬ್ರಹ್ಮಣ್ಯ ಶಾಸ್ತ್ರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂಡೋ–ಗಲ್ಫ್ ಇಂಟರ್‌ನ್ಯಾಷನಲ್ ಮಹಿಳಾ ಥ್ರೋಬಾಲ್ ಚಾಂಪಿಯನ್‌ಶಿಪ್ ವ್ಯವಸ್ಥಾಪಕರಾಗಿ ಎನ್.ಎಸ್.ಸುಬ್ರಮಣ್ಯ ನೇಮಕ

ಮೈಸೂರು,ಫೆ.21–ಬೆಹರಾನ್‌ನ ಥ್ರೋಬಾಲ್ ಫೆಡರೇಷನ್ ಫೆ.23ರಿಂದ 26ರವರೆಗೆ ನಡೆಸುತ್ತಿರುವ ಇಂಡೋ–ಗಲ್ಫ್ ಇಂಟರ್‌ನ್ಯಾಷನಲ್ ಮಹಿಳಾ ಥ್ರೋಬಾಲ್ ಚಾಂಪಿಯನ್‌ಶಿಪ್‌ಗೆ ಸೋಮಾನಿ ಬಿ.ಎಡ್. ಕಾಲೇಜು ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ಎನ್.ಎಸ್.ಸುಬ್ರಮಣ್ಯ ಅವರನ್ನು ಥ್ರೋಬಾಲ್ ಫೆಡರೇಷನ್ ಆಫ್ ಇಂಡಿಯಾದವರು ವ್ಯವಸ್ಥಾಪಕರನ್ನಾಗಿ ನೇಮಿಸಿದ್ದಾರೆ. ಮೈಸೂರು ಜಿಲ್ಲಾ ಥ್ರೋಬಾಲ್ ಅಸೋಸಿಯೇಷನ್‌ನ ಪದಾಧಿಕಾರಿಗಳಾಗಿರುವ ಎನ್.ಎಸ್.ಸುಬ್ರಮಣ್ಯ ಅವರು ಇಂಡೋ–ಗಲ್ಫ್ ಇಂಟರ್‌ನ್ಯಾಷನಲ್ ಮಹಿಳಾ ಥ್ರೋಬಾಲ್ ಚಾಂಪಿಯನ್‌ಶಿಪ್‌ಗೆ ವ್ಯವಸ್ಥಾಪಕರಾಗಿ ನೇಮಕವಾಗಿರುವುದಕ್ಕೆ ಮೈಸೂರು ಜಿಲ್ಲಾ ಅಮೆಚೂರ್ ಥ್ರೋಬಾಲ್ ಅಸೋಸಿಯೇಷನ್ ಪದಾಧಿಕಾರಿಗಳು ಸಂತಸ ವ್ಯಕ್ತಪಡಿಸಿ, ಶುಭ ಕೋರಿದ್ದಾರೆ.



ಎನ್.ಎಸ್.ಸುಬ್ರಮಣ್ಯ



ಮೈಸೂರು ತಾಲೂಕಿನ ಜಯಪುರ ಹೋಬಳಿ ದೊಡ್ಡಹುಂಡಿ ಅಂಗನವಾಡಿ ಕೇಂದ್ರಕ್ಕೆ ಸಮಾಜ ಸೇವಕ ಎಸ್.ಶ್ರೀಕಾಂತ್ 25 ಸಾವಿರ ಮೌಲ್ಯದ 10 ಟೇಬಲ್, 10 ಡೆಸ್ಕ್‌ಗಳನ್ನು ಕೊಡುಗೆಯಾಗಿ ನೀಡಿದರು. ಅಂಗನವಾಡಿ ಕಾರ್ಯಕರ್ತೆ, ಸಿಬ್ಬಂದಿ ಇದ್ದರು.

ಎ.ಎಂ.ನಾಗಯ್ಯಗೆ ರಾಜ್ಯಮಟ್ಟದ ಕನ್ನಡದ ಕಣ್ಮಣಿ ಪ್ರಶಸ್ತಿ

ಮೈಸೂರು, ಫೆ.21– ನಗರದ ಜನತಾನಗರ ವೃತ್ತದಲ್ಲಿರುವ ತರಳಬಾಳು ಶಿಕ್ಷಣ ಸಂಸ್ಥೆಯ ಕನ್ನಡ ಉಪನ್ಯಾಸಕ ಎ.ಎಂ.ನಾಗಯ್ಯ ಅವರಿಗೆ 2023ನೇ ಸಾಲಿನಲ್ಲಿ ಚಿತ್ರದುರ್ಗದ ತಾರಾಮಂಡಲ ಸಿರಿಗನ್ನಡ ಬಳಗ ಆಯೋಜಿಸಿದ್ದ ಕನ್ನಡ ಪ್ರತಿಭಾ ಪರೀಕ್ಷೆಯಲ್ಲಿ ಅತ್ಯುತ್ತಮ ರಾಜ್ಯಮಟ್ಟದ ಉತ್ತಮ ಸಂಘಟಕರು ಹಾಗೂ ಕನ್ನಡದ ಕಣ್ಮಣಿ ಪ್ರಶಸ್ತಿ ಪುರಸ್ಕಾರಕ್ಕೆ ಪಾತ್ರರಾಗಿದ್ದಾರೆ. ಎ.ಎಂ.ನಾಗಯ್ಯ, ವಿಜಯನಗರ ಜಿಲ್ಲೆ ಕೊಟ್ಟೂರು ಗ್ರಾಮದವರು. ಕಳೆದ 15 ವರ್ಷಗಳಿಂದ ತರಳಬಾಳು ಶಿಕ್ಷಣ ಸಂಸ್ಥೆಯಲ್ಲಿ ಕನ್ನಡ ಉಪನ್ಯಾಸಕರಾಗಿ, ಜಾನಪದ ಗಾಯಕರಾಗಿ, ಚಿತ್ರಕಲೆ ಹಾಗೂ ಬರವಣಿಗೆಯ ಕೌಶಲ್ಯದಲ್ಲಿ ಅತ್ಯುತ್ತಮ ಪ್ರಶಸ್ತಿ ಹಾಗೂ ಪುರಸ್ಕಾರವನ್ನು ಪಡೆದಿದ್ದಾರೆ.



ಇಂದು ಡಿಜಿಟಲ್ ಶ್ರವಣ ಸಾಧನ ವಿತರಣೆ

ಮೈಸೂರು,ಫೆ.21–ವಿಶ್ವ ಶ್ರವಣ ದಿನದ ಅಂಗವಾಗಿ ಬಡತನ ರೇಖೆಗಿಂತ ಕೆಳಗಿರುವ ಅರ್ಹ ಫಲಾನುಭವಿಗಳಿಗೆ ಡಿಜಿಟಲ್ ಶ್ರವಣ ಸಾಧನಗಳನ್ನು ವಿತರಿಸುವ ಕಾರ್ಯಕ್ರಮವನ್ನು ನಾಳೆ (ಫೆ. 22) ಬೆಳಗ್ಗೆ 10.30 ಗಂಟೆಗೆ ಆಯೋಜಿಸಲಾಗಿದೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ಕಂಟ್ರಿ ಹೆಡ್ ಫೌಷರ್‌ಗ್ರೂಪ್‌ನ ಅಲೋಕ್ ಸಿನ್ಹಾ ಆಗಮಿಸಲಿದ್ದಾರೆ. ಸಂಸ್ಥೆಯ ನಿರ್ದೇಶಕಿ ಪ್ರೊ.ಎಂ.ಪುಷ್ಪಾವತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮವು ಶ್ರವಣ ಶಕ್ತಿಯ ಸಂರಕ್ಷಣೆ ಮತ್ತು ಆರಂಭಿಕ ಶೀಘ್ರ ಚಿಕಿತ್ಸೆಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ಗುರಿಯನ್ನು ಹೊಂದಿದೆ. ಸೂಕ್ತ ಚಿಕಿತ್ಸೆ ಒದಗಿಸುವುದರ ಜೊತೆ–ಜೊತೆಗೆ ಶ್ರವಣ ಸಾಧನಗಳನ್ನು ನೀಡುವ ಮೂಲಕ ಕೇವಲ ಅವರ ಶ್ರವಣಶಕ್ತಿಯನ್ನು ಬಹುತೇಕ ಯಥಾಸ್ಥಿತಿಗೆ ತರುವುದು ಮಾತ್ರವಲ್ಲದೆ, ಸಂವಹನ ನಡೆಸುವ ಹಾಗೂ ಸಮಾಜದಲ್ಲಿ ತೊಡಗಿಸಿಕೊಳ್ಳುವ ಅವರ ಸಾಮರ್ಥ್ಯವನ್ನು ಸುಧಾರಿಸುತ್ತದೆ.



ನಿಧನ


ಜಿ.ರಾಜಣ್ಣ



ಮೈಸೂರು, ಫೆ. 21–ಮೈಸೂರಿನ ಕುವೆಂಪುನಗರದ ಮನುಜಪಥ ರಸ್ತೆಯ ನಿವಾಸಿ ಜಿ.ರಾಜಣ್ಣ (91) ಬುಧವಾರ ಬೆಳಗ್ಗೆ ನಿಧನರಾದರು.

ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೂವರು ಪುತ್ರರಲ್ಲಿ, ಆರ್.ಆನಂದ್ ಅವರು ಡಿಎವಿ ಪಬ್ಲಿಕ್ ಸ್ಕೂಲ್‌ನ ಕಾರ್ಯದರ್ಶಿ, ಶಾರದಾ ವಿದ್ಯಾ ಮಂದಿರ ಶ್ರೀ ಜಯಚಾಮರಾಜೇಂದ್ರ ಪದವಿಪೂರ್ವ ಕಾಲೇಜಿನ ಕಾರ್ಯದರ್ಶಿ, ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್‌ನ ಅಧ್ಯಕ್ಷರು, ಮೈಸೂರು ಛೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್‌ನ ಉಪಾಧ್ಯಕ್ಷರು ಮತ್ತು ಬಂಡೀಪಾಳ್ಯದ ಮೈಸೂರು ಗ್ರೈನ್ ಮರ್ಚೆಂಟ್ಸ್ ಅಸೋಸಿಯೇಷನ್‌ನ ಕಾರ್ಯದರ್ಶಿಯಾಗಿದ್ದಾರೆ.

ಕೆ.ವಿ.ವೃಷಭೇಂದ್ರಪ್ಪ



ನಂಜನಗೂಡಿನ ಮಹದೇಶ್ವರ ಬಡಾವಣೆ ನಿವಾಸಿ ಕೆ.ವಿ. ವೃಷಭೇಂದ್ರಪ್ಪ (ಪಾಪಣ್ಣ) (88) ಬುಧವಾರ ಬೆಳಗ್ಗೆ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಂಜನಗೂಡಿನ ಕಪಿಲಾ ನದಿ ತಟದಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಕುಮಾರಸ್ವಾಮಿ ಮಹತ್ವದ ಮಾತುಕತೆ

ಭವಿಷ್ಯದ ಬಗ್ಗೆಯೂ ಚಿಂತನೆ ಮಾಡಲಿದ್ದಾರೆ. ಬೆಂಗಳೂರು ಶಿಕ್ಷಕರ ಕ್ಷೇತ್ರದ ಉಪ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿ ಸೋಲನ್ನು ಬಿಜೆಪಿ ವರಿಷ್ಠರು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದಾರೆ. ರಾಜ್ಯಸಭಾ ಚುನಾವಣೆಯಲ್ಲಿ ಇದೇ ಫಲಿತಾಂಶ ಮರುಕಳಿಸಿದರೆ, ಎನ್‌ಡಿಎ ಕೂಟದ ಮೇಲೆ ಪರಿಣಾಮ ಬೀರಲಿದೆ ಎಂಬ ಭಾವನೆ ಬಂದಿದೆ. ಮಾಡು ಇಲ್ಲವೆ ಮಡಿ ಎಂಬಂತೆ ರಾಜ್ಯಸಭೆ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿ ಗೆಲುವಿಗೆ ಶತಾಯ–ಗತಾಯ ಪ್ರಯತ್ನಿಸಬೇಕು. ಈ ನಿಟ್ಟಿನಲ್ಲಿ ಉಭಯ ನಾಯಕರ ನಡುವೆ ಚರ್ಚೆ ನಡೆದಿದೆ. ಅಮಿತ್ ಷಾ ಅವರು ಕುಮಾರಸ್ವಾಮಿ ಅವರಿಂದ ರಾಜಕೀಯ ವಿದ್ಯಮಾನ ಸೇರಿದಂತೆ ರಾಜ್ಯದ ಹಲವು ಮಾಹಿತಿಯನ್ನು ಪಡೆದುಕೊಂಡಿದ್ದಾರೆ. ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಧಾನಿ ಮೋದಿ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಸದನ ಒಳಗೆ ಹಾಗೂ ಹೊರಗೆ ತೀವ್ರ ವಾಗ್ದಾಳಿ ನಡೆಸುತ್ತಿದ್ದಾರೆ. ಅದೇ ಧಾಟಿಯಲ್ಲಿ ಪ್ರತ್ಯುತ್ತರ ನೀಡದ ರಾಜ್ಯ ಬಿಜೆಪಿ ನಾಯಕರ ಬಗ್ಗೆ ಅಸಮಾಧಾನಗೊಂಡಿದ್ದಾರೆ ಎನ್ನಲಾಗಿದೆ. ಬಿಜೆಪಿ ಹಾಗೂ ಜೆಡಿಎಸ್ ನ ಕೆಲವು ಶಾಸಕರನ್ನು ಸೆಳೆಯಲು ನಡೆಸುತ್ತಿರುವ ಯತ್ನ ಮತ್ತು ಅದನ್ನು ವಿಫಲಗೊಳಿಸುವ ವಿಚಾರದ ಬಗ್ಗೆ ಚರ್ಚೆ ನಡೆಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ವಿರುದ್ಧ ಇರುವ ಆಡಳಿತ ಪಕ್ಷದ ಕಾಂಗ್ರೆಸ್‌ನ ಶಾಸಕರ ಪಟ್ಟಿ ಕೇಂದ್ರ ಗೃಹಸಚಿವರ ಬಳಿ ಇದ್ದು, ಅದರ ಬಗ್ಗೆ ಕುಮಾರಸ್ವಾಮಿ ಅವರಿಂದ ವಿವರಣೆ ಪಡೆದುಕೊಂಡಿದ್ದಾರೆ.

ಕೆಆರ್‌ಎಸ್ ಪಕ್ಷದಿಂದ 'ಕರ್ನಾಟಕಕ್ಕಾಗಿ ನಾವು' ಬೈಕ್ ರ್‍ಯಾಲಿ

ಲೋಕಸಭಾ ಚುನಾವಣೆಯಲ್ಲಿ ಭ್ರಷ್ಟಾಚಾರದಲ್ಲಿ ಮುಳುಗಿರುವ ಹಾಲಿ ಮೂರು ಪಕ್ಷಗಳ ದೂರವಿಡಿ.....!

ಮೈಸೂರು,ಫೆ.21(ಎಂಟಿವೈ)–ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಭ್ರಷ್ಟಾಚಾರದ ತಳಹದಿ ಮೇಲೆ ನಿಂತಿರುವ ಪ್ರಮುಖ ಮೂರು ಪಕ್ಷಗಳನ್ನು ತಿರಸ್ಕರಿಸಿ ಕೆಆರ್‌ಎಸ್ ಪಕ್ಷಕ್ಕೆ ಬೆಂಬಲ ನೀಡುವಂತೆ ಪಕ್ಷದ ರಾಜ್ಯಾಧ್ಯಕ್ಷ ರವಿ ಕೃಷ್ಣಾರೆಡ್ಡಿ ನೇತೃತ್ವದಲ್ಲಿ ರಾಜ್ಯಾದ್ಯಂತ ಕೈಗೊಂಡಿರುವ 'ಕರ್ನಾಟಕಕ್ಕಾಗಿ ನಾವು' ಬೈಕ್ ರ್‍ಯಾಲಿ ಬುಧವಾರ ಮೈಸೂರಿಗೆ ಆಗಮಿಸಿತು.

ಎರಡು ದಿನದ ಹಿಂದೆ ಬೆಂಗಳೂರಿನ ದೇವನಹಳ್ಳಿಯಿಂದ ಆರಂಭವಾದ ಬೈಕ್ ರ್‍ಯಾಲಿ ಚಾಮರಾಜನಗರದ ಮೂಲಕ ಮೈಸೂರು ತಲುಪಿತು.

ಮೈಸೂರಿನ ಪುರಭವನದ ಬಳಿ ಕಾರ್ಯಕರ್ತರನ್ನುದ್ದೇಶಿಸಿ ಪಕ್ಷದ ರಾಜ್ಯಾಧ್ಯಕ್ಷ ರವಿ ಕೃಷ್ಣಾರೆಡ್ಡಿ ಮಾತನಾಡಿ, ಭ್ರಷ್ಟ ರಾಜಕಾರಣಿಗಳಿಂದ ರಾಜ್ಯವನ್ನು ರಕ್ಷಿಸಲು ಕೆಆರ್‌ಎಸ್ ಪಕ್ಷ ಜನರಲ್ಲಿ ಜಾಗೃತಿ ಮೂಡಿಸಲು ರಾಜ್ಯದಾದ್ಯಂತ ಬೈಕ್ ರ್‍ಯಾಲಿ ನಡೆಸುತ್ತಿದೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಭ್ರಷ್ಟ ರಾಜಕೀಯ ಪಕ್ಷಗಳನ್ನು ತಿರಸ್ಕರಿಸಿ, ರಾಜ್ಯದ ಜನರ ಹಿತಕಾಯುವ ಏಕೈಕ ಪಕ್ಷ ಕೆಆರ್‌ಎಸ್ ಪಕ್ಷ ಬೆಂಬಲಿಸುವಂತೆ ಬೈಕ್ ರ್‍ಯಾಲಿ ನಡೆಸಲಾಗುತ್ತಿದೆ.

ರಾಜ್ಯದಲ್ಲಿ ಮೂರು ಪಕ್ಷಗಳ 400–500 ಕುಟುಂಬಗಳ ಮೇಲೆ ರಾಜ್ಯದ ರಾಜಕಾರಣ ನಿಂತಿದೆ. ದುಷ್ಟರು, ಭ್ರಷ್ಟಾಚಾರಿಗಳನ್ನು ದೂರವಿಡುವ ಅನಿವಾರ್ಯತೆ ಇದೆ. ಪರಮ ಭ್ರಷ್ಟ ಜೆಡಿಎಸ್, ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷವನ್ನು ತಿರಸ್ಕರಿಸಬೇಕು. ಈ ಮೂರು ಪಕ್ಷಗಳು ಸಾಮಾನ್ಯರು, ಪ್ರಾಮಾಣಿಕರನ್ನು ಬೆಳೆಯಲು ಬಿಡುವುದಿಲ್ಲ. ಕೆಆರ್‌ಎಸ್ ಪಕ್ಷ ಪ್ರಾಮಾಣಿಕರಿಗೆ ವಿವಿಧ ಹಂತದ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡುತ್ತದೆ. ಆ ನಿಟ್ಟಿನಲ್ಲಿ ದುಷ್ಟರಿಗೆ ರಾಜ್ಯವನ್ನು ಬಿಟ್ಟುಕೊಡಬೇಡಿ ಎಂದು ಮನವರಿಕೆ ಮಾಡಿಕೊಡಲು ಬೈಕ್ ರ್‍ಯಾಲಿ ನಡೆಸುತ್ತಿರುವುದಾಗಿ ತಿಳಿಸಿದರು.



ಕರ್ನಾಟಕಕ್ಕಾಗಿ ನಾವು ಬೈಕ್ ರ್‍ಯಾಲಿ ಹಮ್ಮಿಕೊಂಡಿರುವ ಕೆಆರ್‌ಎಸ್ ಪಕ್ಷದ ರಾಜ್ಯಾಧ್ಯಕ್ಷ ರವಿ ಕೃಷ್ಣಾರೆಡ್ಡಿ ಮೈಸೂರಿನ ಪುರಭವನದ ಬಳಿ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು.

ಬಿಜೆಪಿಯಿಂದ ಕುಮಾರಸ್ವಾಮಿ ಮುಖ್ಯಮಂತ್ರಿ ಆಗಬಹುದು: ಜೆಡಿಎಸ್ ನಾಯಕ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಇದೀಗ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡು ತಾನೂ ಒಬ್ಬ ಅವಕಾಶವಾದಿ ಎಂದು ತೋರ್ಪಡಿಸಿದ್ದಾರೆ. ಬಿಜೆಪಿಯ ಭ್ರಷ್ಟಾಚಾರವನ್ನೆಲ್ಲಾ ಒಪ್ಪಿಕೊಂಡು ಸುಮ್ಮನಿದ್ದಾರೆ. ಇದರಿಂದ ಮುಂದಿನ ದಿನಗಳಲ್ಲಿ ಬಿಜೆಪಿಯಿಂದ ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾದರೂ ಅಚ್ಚರಿ ಪಡಬೇಕಾಗಿಲ್ಲ ಎಂದು ರವಿ ಕೃಷ್ಣಾರೆಡ್ಡಿ ಲೇವಡಿ ಮಾಡಿದರು.

ಬಿಎಸ್‌ವೈ ಜೈಲಿಗೆ ಹೋಗಲು ವಿಜಯೇಂದ್ರ ಕಾರಣ: ಈ ಹಿಂದೆ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಯಡಿಯೂರಪ್ಪ ಅವರು ಜೈಲಿಗೆ ಹೋಗಲು ಹಾಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕಾರಣ. ಅಪ್ಪನ ಹೆಸರಲ್ಲಿ ಲೂಟಿ ಮಾಡಿದರು. ಮಿತಿಮೀರಿದ ಭ್ರಷ್ಟಾಚಾರ ನಡೆಸಿದ್ದರಿಂದ ನಾನು ನೀಡಿದ ದೂರಿನ ಮೇರೆಗೆ ಬಿ.ಎಸ್.ಯಡಿಯೂರಪ್ಪ ಹಾಗೂ ಮಾಜಿ ಸಚಿವ ವಿ.ಸೋಮಣ್ಣ ಅವರನ್ನು ಕಟಕಟೆಗೆ ನಿಲ್ಲಿಸಿದೆ ಎಂದು ತಿಳಿಸಿದರು.

ಮೈಸೂರು ಸಂಸದನಿಗೆ ತಕ್ಕಪಾಠ ಕಲಿಸಿ: ಮೈಸೂರಿನ ಸಂಸದ ಪ್ರತಾಪ ಸಿಂಹ ಅವಿವೇಕಿಯಂತೆ ವರ್ತಿಸುತ್ತಿದ್ದಾರೆ. ಉತ್ತರ ಭಾರತಕ್ಕೆ ನಮ್ಮ ಪಾಲಿನ ತೆರಿಗೆ ಹಣ ಹೆಚ್ಚಾಗಿ ನೀಡುತ್ತಿರುವುದಕ್ಕೆ ಸಮರ್ಥನೆ ನೀಡಿದ್ದಾರೆ. ದಕ್ಷಿಣ ಭಾರತದಲ್ಲಿ ಹೆಚ್ಚು ಕೈಗಾರಿಕೆ ಸ್ಥಾಪನೆಯಾಗಿದ್ದು, ಉತ್ತರ ಭಾರತೀಯರು ಬೇಸರಗೊಳ್ಳಬಾರದು ಎಂಬ ಕಾರಣದಿಂದ ನಮ್ಮ ಪಾಲಿನ ತೆರಿಗೆ ಹಣ ಉತ್ತರ ಭಾರತಕ್ಕೆ ನೀಡುತ್ತಿರುವುದಾಗಿ ಹೇಳುವ ಮೂಲಕ ಅನಾರಿಕನಂತೆ ವರ್ತಿಸಿದ್ದಾರೆ, ಮೈಸೂರು–ಕೊಡಗು ಜನ ಸಂಸದನಿಗೆ ತಕ್ಕ ಪಾಠ ಕಲಿಸಬೇಕು. ಮೈಸೂರು ಸಾಮ್ರಾಜ್ಯ ಅಭಿವೃದ್ಧಿಯಾಗಬೇಕಾದರೆ ನಾಲ್ವಡಿ ಕೃಷ್ಣರಾಜ ಒಡೆಯರ್ ನೀಡಿದ ಕೊಡುಗೆ ಅಪಾರ. ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಿ ಮೈಸೂರು ಅಭಿವೃದ್ಧಿಗೆ ಶ್ರಮಿಸಿದರು. ಕುಟುಂಬದ ಸದಸ್ಯರ ಆಭರಣ ಅಡವಿಟ್ಟು ಕೆಆರ್‌ಎಸ್ ಅಣೆಕಟ್ಟು ನಿರ್ಮಾಣ, ವಿಶ್ವೇಶ್ವರಯ್ಯ ಭದ್ರಾವತಿಯಲ್ಲಿ ಪೇಪರ್ ಮಿಲ್ ಸ್ಥಾಪಿಸಿದರು ಎಂದರು.

ಈ ಸಂದರ್ಭದಲ್ಲಿ ಕೆಆರ್‌ಎಸ್ ಪಕ್ಷದ ಮುಖಂಡರಾದ ಲಿಂಗೇಗೌಡ, ರವಿಕುಮಾರ್, ದೀಪಕ್ ಸೇನ್, ರಘು, ಸೋಮಸುಂದರ್, ಎಲ್.ಜೀವನ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಅವಕಾಶವಾದಿ

"ಮುಖ್ಯಮಂತ್ರಿ ಸಿದ್ದರಾಮಯ್ಯ ಮೊದಲ ಬಾರಿಗೆ ಸಿಎಂ ಆದಾಗ ನಾನು ವೈಯಕ್ತಿಕವಾಗಿ ಖುಷಿಪಟ್ಟಿದ್ದೆ. ಇದ್ದ ರಾಜಕಾರಣಿಗಳಲ್ಲಿ ಸಿದ್ದರಾಮಯ್ಯ ಪರವಾಗಿಲ್ಲ ಎನಿಸಿತ್ತು. ಹಿರಿಯ ಸ್ವಾತಂತ್ರ್ಯವಾದಿ ಹೆಚ್.ಎಸ್.ದೊರೆಸ್ವಾಮಿ ಅವರು ಬರೆದ ಪತ್ರದಿಂದ ಕಳಂಕಿತರಾಗಿದ್ದ ಡಿ.ಕೆ.ಶಿವಕುಮಾರ್, ರೋಷನ್ ಬೇಗ್ ಅವರನ್ನು ಸಂಪುಟದಿಂದ ದೂರ ಇಟ್ಟಾಗ ಹಾಗೂ ಕೊನೆ ಚುನಾವಣೆ ಎಂದು ಹೇಳಿದ್ದಾಗ ಇನ್ನಷ್ಟು ಸಂತೋಷ ತಂದಿತ್ತು. ಆದರೆ, ಈಗ ಅವರ ಮೇಲಿದ್ದ ವಿಶ್ವಾಸ ಕಳೆದುಹೋಗಿದೆ. ಜೆಡಿಎಸ್‌ನಿಂದ ಕಾಂಗ್ರೆಸ್‌ಗೆ ಬಂದು ಮುಖ್ಯಮಂತ್ರಿಯಾಗಿದ್ದು, ಅವಕಾಶವಾದಿ ರಾಜಕಾರಣ.

–ರವಿ ಕೃಷ್ಣಾರೆಡ್ಡಿ

ಇಂದು ಶ್ರೀರಾಮಕೃಷ್ಣ ಪರಮಹಂಸರ ಜನ್ಮದಿನೋತ್ಸವ: ಜಾತ್ರಾ ಮಹೋತ್ಸವ

ಮೈಸೂರು, ಫೆ. 21–ಶ್ರೀ ರಾಮಕೃಷ್ಣ ಪರಮಹಂಸರ 188ನೇ ಜನ್ಮದಿನ. ಇಂತಹ ಮಹಾಪುರುಷರ ಜನ್ಮದಿನವನ್ನು ಕಳೆದ ಐದು ವರ್ಷಗಳಿಂದ ಅರ್ಥಪೂರ್ಣವಾಗಿ, ಯಶಸ್ವಿಯಾಗಿ ಆಚರಿಸಿಕೊಂಡು ಬರುತ್ತಿದ್ದೇವೆ.



ಶ್ರೀ ರಾಮಕೃಷ್ಣ ಪರಮಹಂಸರು

ಈ ವರ್ಷವೂ ಫೆ.22ರ ಗುರುವಾರ ಒಂದು ದಿನದ ಜಾತ್ರಾ ಮಹೋತ್ಸವವನ್ನು ಏರ್ಪಡಿಸಲಾಗಿದೆ. ಅಂದು ಬೆಳಗಿನಿಂದ ಸಂಜೆಯ ತನಕ ವಿವಿಧ ಕಾರ್ಯಕ್ರಮಗಳಿರುತ್ತವೆ. ಅಂದು ಬೆಳಗ್ಗೆ 7ಗಂಟೆಗೆ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀ ಮುಕ್ತಿದಾನಂದ ಮಹಾರಾಜ್ ಶ್ರೀ ರಾಮಕೃಷ್ಣ ಪರಮಹಂಸರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಆರತಿ ಬೆಳಗಲಿದ್ದಾರೆ.

ಮಧ್ಯಾಹ್ನ 3ಕ್ಕೆ ರಾಮಕೃಷ್ಣ ವೃತ್ತದಲ್ಲಿ ರಥೋತ್ಸವ ಪ್ರಾರಂಭವಾಗಿ, ಮೆರವಣಿಗೆ ಮೂಲಕ ರಾಮಕೃಷ್ಣನಗರ, ವಿವೇಕಾನಂದ ನಗರ ಹಾಗೂ ಶಾರದಾದೇವಿನಗರ ಬಡಾವಣೆಗಳಲ್ಲಿ ಸಂಚರಿಸಿ ಸಂಜೆ 5 ಗಂಟೆಗೆ ಮೆರವಣಿಗೆಯು ಸಮಾವೇಶಗೊಳ್ಳಲಿದೆ. ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಕರೆಸ್ಪಾಂಡೆಂಟ್ ಶ್ರೀ ಸ್ವಾಮಿ ಯುಕ್ತೇಶಾನಂದ ರಥೋತ್ಸವ ಉದ್ಘಾಟಿಸಲಿದ್ದಾರೆ. ಸಂಜೆ 6 ಗಂಟೆಗೆ ಆಧ್ಯಾತ್ಮಿಕ ಚಿಂತನ ಮಂಥನ ಕಾರ್ಯಕ್ರಮ ಜರುಗಲಿದ್ದು, ಇದೂ ಕೂಡ ಶ್ರೀರಾಮಕೃಷ್ಣ ಪರಮಹಂಸ ವೃತ್ತದಲ್ಲಿ ಜರುಗಲಿದೆ. ಇದರಲ್ಲಿ ಶ್ರೀಕ್ಷೇತ್ರ ಆದಿಚುಂಚನಗಿರಿಯ ಪೀಠಾಧ್ಯಕ್ಷರಾದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿಯವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಬಿಜಿಎಸ್ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕರಾದ ಪ್ರಕಾಶನಾಥ ಸ್ವಾಮೀಜಿ ಉಪಸ್ಥಿತರಿರಲಿದ್ದಾರೆ. "ಪ್ರಸ್ತುತದಲ್ಲಿ ಸ್ವಾಮಿ ವಿವೇಕಾನಂದರ ಚಿಂತನೆಗಳ ಅವಶ್ಯಕತೆ" ಕುರಿತು ವೈದ್ಯ ಸಾಹಿತಿ, ಚಿಂತಕ ಡಾ.ನಾ.ಸೋಮೇಶ್ವರ ಉಪನ್ಯಾಸ ನೀಡಲಿದ್ದಾರೆ. ಖ್ಯಾತ ಹೃದ್ರೋಗ ತಜ್ಞ ಡಾ.ಸಿ.ಎನ್.ಮಂಜುನಾಥ್ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಶ್ರೀ ರಾಮಕೃಷ್ಣ ಆಶ್ರಮದ ಶ್ರೀ ಸ್ವಾಮಿ ಸರ್ವಜಯಾನಂದ ಸಾಧಕರನ್ನು ಸನ್ಮಾನಿಸುವರು.

ಉಚಿತ ವಿಶೇಷ ಹೃದ್ರೋಗ ತಪಾಸಣಾ ಶಿಬಿರ

ಮೈಸೂರು,ಫೆ.21–ಶ್ರೀ ರಾಮಕೃಷ್ಣ ಪರಮಹಂಸರ 188ನೇ ಜನ್ಮದಿನೋತ್ಸವವನ್ನು ಪ್ರತಿ ವರ್ಷದಂತೆ ಈ ವರ್ಷವೂ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದ್ದು, ಅದರ ಪ್ರಯುಕ್ತ ಸುಯೋಗ್ ಆಸ್ಪತ್ರೆಯು ಈ ಬಾರಿಯೂ ಉಚಿತ 3ನೇ ಹೃದ್ರೋಗ ತಪಾಸಣಾ, ಆ್ಯಂಜಿಯೋಗ್ರಾಂ ಹಾಗೂ ಆ್ಯಂಜಿಯೋಪ್ಲಾಸ್ಟಿ ಶಿಬಿರವನ್ನು ಫೆ.22ರಿಂದ 29ರವರೆಗೆ ಬೆಳಗ್ಗೆ 10ಗಂಟೆಯಿಂದ ಸಂಜೆ 5ಗಂಟೆವರೆಗೆ ಹಮ್ಮಿಕೊಂಡಿದೆ.




ಪ್ರತಿದಿನ 50 ಮಂದಿಗೆ ಹೃದಯ ತಪಾಸಣೆ ಮಾಡಲು ಅವಕಾಶವಿದ್ದು, ಅವಶ್ಯಕತೆ ಇರುವ ಕಡುಬಡವರಿಗೆ ಉಚಿತವಾಗಿ ಆ್ಯಂಜಿಯೋಗ್ರಾಂ ಹಾಗೂ ಆ್ಯಂಜಿಯೋಪ್ಲಾಸ್ಟಿ ಮಾಡಲಾಗುವುದು. ಹೃದ್ರೋಗ ತಜ್ಞರಾದ ಡಾ.ರವಿಕುಮಾರ್ ಹಾಗೂ ಡಾ.ಆದಿತ್ಯ ಉಡುಪ ಈ ಶಿಬಿರದ ನೇತೃತ್ವ ವಹಿಸಲಿದ್ದು, ಸಾರ್ವಜನಿಕರು ಈ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕಾಗಿದೆ. ಹೆಚ್ಚಿನ ಮಾಹಿತಿ ಹಾಗೂ ಹೆಸರನ್ನು ನೋಂದಾಯಿಸಿಕೊಳ್ಳಲು 0821–2533600 ಹಾಗೂ 99863 99862 ಸಂಪರ್ಕಿಸಬಹುದಾಗಿದೆ.

ಫೆ.22ರ ಗುರುವಾರ ಸಂಜೆ 4ಗಂಟೆಗೆ ಹೃದ್ರೋಗ ತಪಾಸಣಾ ಶಿಬಿರದ ಉದ್ಘಾಟನೆಯನ್ನು ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷರೂ, ಆಧ್ಯಾತ್ಮಿಕ ಚಿಂತಕರೂ ಆದ ಶ್ರೀ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ನೆರವೇರಿಸಲಿದ್ದಾರೆ. ಆದಿಚುಂಚನಗಿರಿ ಮಠದ ಬಿಜಿಎಸ್ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಪ್ರಕಾಶನಾಥ ಸ್ವಾಮೀಜಿ ಉಪಸ್ಥಿತರಿರುವರು. ಸುಯೋಗ್ ಆಸ್ಪತ್ರೆಯ ಅಧ್ಯಕ್ಷರೂ, ವೈದ್ಯ ಸಾಹಿತಿಗಳೂ ಆದ ಡಾ.ಎಸ್.ಪಿ.ಯೋಗಣ್ಣ ಅವರು ರಚಿಸಿರುವ "ಹಾರ್ಟ್ ಅಟ್ಯಾಕ್" ಕೃತಿಯನ್ನು ಪ್ರಖ್ಯಾತ ಹೃದ್ರೋಗ ತಜ್ಞರೂ ಹಾಗೂ ಚಿಂತಕರೂ ಆದ ಡಾ.ಸಿ.ಎನ್.ಮಂಜುನಾಥ್ ಲೋಕಾರ್ಪಣೆಗೊಳಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸುಯೋಗ್ ಆಸ್ಪತ್ರೆ ಅಧ್ಯಕ್ಷರಾದ ಡಾ.ಎಸ್.ಪಿ.ಯೋಗಣ್ಣ ವಹಿಸಲಿದ್ದಾರೆ.

ಅಧಿಕಾರಿ, ಸಿಬ್ಬಂದಿಗೆ ಕ್ರೀಡಾಕೂಟ

ಮೈಸೂರು, ಫೆ.21– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಂಯುಕ್ತಾಶ್ರಯದಲ್ಲಿ ಫೆ.23ರಂದು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್, ಗ್ರಾಮ ಪಂಚಾಯಿತಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ಕ್ರೀಡಾಕೂಟ ಏರ್ಪಡಿಸಲಾಗಿದೆ. **ಪುರುಷರಿಗೆ:** 100 ಮೀ. ಓಟ(40 ವರ್ಷದೊಳಗಿನ ಮತ್ತು 40 ವರ್ಷ ಮೇಲ್ಪಟ್ಟವರಿಗೆ), ಶಾಟ್ ಪುಟ್, 400 ಮೀ ವಾಕ್, ಕ್ರಿಕೆಟ್, ವಾಲಿಬಾಲ್, ಹಗ್ಗ–ಜಗ್ಗಾಟ, ಮ್ಯೂಸಿಕಲ್ ಛೇರ್, ಶೂಟ್ ಇನ್ ದ ಬ್ಯಾಸ್ಕೆಟ್. ಮಹಿಳೆಯರಿಗೆ: 60 ಮೀ. ಓಟ(35 ವರ್ಷದೊಳಗಿನ ಮತ್ತು 35 ವರ್ಷ ಮೇಲ್ಪಟ್ಟವರಿಗೆ), ಶಾಟ್ ಪುಟ್, 400 ಮೀ ವಾಕ್, ಥ್ರೋ ಬಾಲ್, ಹಗ್ಗ–ಜಗ್ಗಾಟ, ಮ್ಯೂಸಿಕಲ್ ಛೇರ್, ಶೂಟ್ ಇನ್ ದ ಬ್ಯಾಸ್ಕೆಟ್, ಲೆಮನ್ ಇನ್ ದ ಸ್ಪೂನ್ ಕ್ರೀಡೆ ಗಳನ್ನು ಆಯೋಜಿಸಲಾಗಿದ್ದು, ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದವರಿಗೆ ಮೆಡಲ್ಸ್, ಟ್ರೋಫಿ ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ದೂ.ಸಂ: 0821–2546179 ಸಂಪರ್ಕಿಸಬಹುದು

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.2.2024 ಗುರುವಾರ, ಮಳೆ ನಕ್ಷತ್ರ: ಶತಭಿಷ 20.2.2024 ರಿಂದ 03.03.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಪುಷ್ಯ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿನ ಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ– ಮೈಸೂರಿನ ಎನ್. ರವಿಶಂಕರ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಹೆಚ್.ವಿ. ನಾಗರಾಜರಾವ್, 7.15 ಹಸಿರು ಹೊನ್ನು–ಪ್ರಾಯೋಜಿತ ಕಾರ್ಯಕ್ರಮ, 10.00 ಎ.ವಿ. ಪ್ರಕಾಶ್–ವೇಣುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ


ಮಧ್ಯಾಹ್ನ: 12.30 ದೇವರನಾಮ, 1.20 ಭಾವಗೀತೆ–ಶರಧಿ ಪಾಟೀಲ್, 4.30 ಕನ್ನಡ ಭಾರತಿ–ಸುದ್ದಿಪತ್ರಿಕೆಗಳ ಶಬ್ದ ಸಂಪತ್ತು, ಚರ್ಚೆ. ಭಾಗವಹಿಸುವವರು ಆರ್.ಎಸ್. ಪೂರ್ಣಾನಂದ, ಟಿ.ಜ. ರಾಜೀವ್, ಕೆ.ಎಸ್. ನರಸಿಂಹಮೂರ್ತಿ ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 6.50 ಕೃಷಿರಂಗ–ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ ಕೃಷಿಕ ದಂಪತಿ ಬಿ. ರಾಧಾಕೃಷ್ಣ ಹಾಗೂ ಬಿ. ಸಂಧ್ಯಾರಾಣಿ, 8.00 ಯುವವಾಣಿ–ಯುವಪ್ರತಿಭೆ, ಹಾಡುಗಾರ್ತಿ ಎಂ.ಎಂ.ಕೆ ಎಸ್.ಡಿ.ಎಂ. ಪದವಿ ಪೂರ್ವ ಕಾಲೇಜಿನ ದೀತ್ಯಾ ವಿ. ಅವರೊಂದಿಗೆ ಮಾತುಕತೆ. ಆನಂದಕುಮಾರ್ ಅವರಿಂದ ಸ್ವರಚಿತ ಕವನ ವಾಚನ, 10.00ನಾಟಕ, 10.30 ಸವಿನೆನಪು

- **ಎಸ್‌ಡಿಎಂ & ಎಂ.ಎಂ.ಮಹಿಳಾ ವಿದ್ಯಾಲಯ:** ಪುಷ್ಯಾ ನಕ್ಷತ್ರದ ದಿನದ ಅಂಗವಾಗಿ ಸ್ವರ್ಣಾಮೃತ ಪ್ರಾಶನ ಕಾರ್ಯಕ್ರಮ. ಸ್ಥಳ: ಮಹಾವಿದ್ಯಾಲಯದ ಆವರಣ, ಬಲ್ಲಾಳ್ ಸರ್ಕಲ್ ಹತ್ತಿರ. ಬೆಳಗ್ಗೆ 7 ಗಂಟೆಯಿಂದ.
- **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಕರ್ನಾಟಕ ಸರ್ಕಾರ, ಧಾರ್ಮಿಕ ದತ್ತಿ ಇಲಾಖೆ:** ಮೈಸೂರು ಅರಮನೆ ಕೋಟೆ ಆವರಣದಲ್ಲಿರುವ ಶ್ರೀ ತ್ರಿನೇಶ್ವರಸ್ವಾಮಿಯವರ ಬ್ರಹ್ಮೋತ್ಸವ, ಬೆಳಗ್ಗೆ 10ರಿಂದ ಶುಭ ಮೇಷ ಲಗ್ನದಲ್ಲಿ ದಿವ್ಯರಥಾರೋಹಣ, ಸ್ಥಳ: ದೇವಸ್ಥಾನ, ಅರಮನೆ ಆವರಣ.
- **ಕೆ.ಆರ್. ಯಲ್ಲಪ್ಪರಾಯರ ಶ್ರೀ ಯಲ್ಲಮ್ಮನವರ ದೇವಸ್ಥಾನ :** ಬೇವಿನಮರದ ಶ್ರೀ ಯಲ್ಲಮ್ಮನವರ 76ನೇ ವರ್ಷದ ಮಹೋತ್ಸವ, ಬೆಳಗ್ಗೆ 10 ರಿಂದ ಅಭಿಷೇಕ, ಗಣಪತಿ ಹೋಮ, ನವಗ್ರಹ ಹೋಮ, ವಾಸ್ತು ಹೋಮ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5ಕ್ಕೆ ದುರ್ಗಾ ಸಪ್ತಶತಿ ಪಾರಾಯಣ, ಸ್ಥಳ: ದೇವಸ್ಥಾನ, ನಾಲಾ ಬೀದಿ, ಕೃಷ್ಣರಾಜ ಮೊಹಲ್ಲಾ.
- **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ:** ಜೆಎಸ್‌ಎಸ್ ಎಸ್‌ಟಿಯು–ಯುವಾ ಬಿಂಬ, 37ನೇ ಅಂತರ ವಿಶ್ವವಿದ್ಯಾನಿಲಯ ಸೌತ್ ಈಸ್ಟ್ ವಲಯ ಯುವ ಹಬ್ಬ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಸಂಗೀತ ನಿರ್ದೇಶಕ ಆರ್.ವಿಜಯಪ್ರಕಾಶ್, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಗೌರವ ಅತಿಥಿಗಳು: ಡಾ.ಬಲಜಿತ್ ಸಿಂಗ್ ಸೆಕಾನ್, ಡಾ.ಬಿ.ಸುರೇಶ್, ಕುಲಪತಿ ಡಾ. ಎ.ಎನ್. ಸಂತೋಷ್‌ಕುಮಾರ್, ಕುಲಸಚಿವ ಡಾ.ಎಸ್.ಎ.ಧನರಾಜ್, ಪ್ರಿನ್ಸಿಪಾಲ್ ಡಾ.ಸಿ.ನಟರಾಜು, ಸಂಚಾಲಕ ಡಾ.ಎಂ.ಎನ್.ನಾಗೇಂದ್ರ ಪ್ರಸಾದ್, ಸಂಘಟನಾ ಕಾರ್ಯದರ್ಶಿ ಪ್ರೊ.ಎಂ.ಎಸ್. ಸುನೀಲ್‌ಕುಮಾರ್, ಸ್ಥಳ: ಫುಟ್‌ಬಾಲ್ ಮೈದಾನ, ಜೆಎಸ್‌ಎಸ್ ಕ್ಯಾಂಪಸ್, ಬೆಳಗ್ಗೆ 11ಕ್ಕೆ.
- **ಹಿರಣಯಿ ಪ್ರತಿಷ್ಠಾನ, ಕಾವೇರಿ ಬಳಗ :** ಕಸ್ತೂರಿಬಾ ಗಾಂಧಿ ಪುಣ್ಯಸ್ಮರಣೆ, ಅಧ್ಯಕ್ಷತೆ : ಲೇಖಕಿ ಡಾ. ಜಮುನಾರಾಣಿ ಮಿರ್ಲೆ, ಉದ್ಘಾಟನೆ : ಸಾಹಿತಿ ಬನ್ನೂರು ಕೆ. ರಾಜು, ಮುಖ್ಯ ಭಾಷಣ : ಲೇಖಕ ಎಸ್.ಜಿ. ಸೀತಾರಾಂ, ಭಕ್ತಿಗೀತೆ ಗಾಯನ : ಕಾವೇರಿ ಬಳಗದ ಶ್ರೀಮತಿ ಎನ್.ಕೆ. ಕಾವೇರಿಯಮ್ಮ, ಬಹುಮಾನ ವಿತರಣೆ: ಹಿರಣಯಿ ಪ್ರತಿಷ್ಠಾನ ಅಧ್ಯಕ್ಷ ಎ. ಸಂಗಪ್ಪ, ಮುಖ್ಯ ಅತಿಥಿಗಳು : ಕೆಬಿಜಿಎಸ್ ಶಾಲಾ ಮುಖ್ಯ ಶಿಕ್ಷಕಿ ಶ್ರೀಮತಿ ಅಂಬಿಕಾ, ಸ್ಥಳ: ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ, ಕೇರ್ಗಳ್ಳಿ, ಬೆಳಗ್ಗೆ 11ಕ್ಕೆ.
- **ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ:** ಶ್ರೀಮನ್ಮಹಾರಾಜ 10ನೇ ಚಾಮರಾಜ ಒಡೆಯರ್ ಅವರ ಜನ್ಮ ದಿನಾಚರಣೆ. ಸ್ಥಳ: ಚಾಮರಾಜ ಪ್ರತಿಮೆ(ವೃತ್ತ), ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ. ಬೆಳಗ್ಗೆ 11.30ಕ್ಕೆ.
- **ಶ್ರೀ ರಾಮಕೃಷ್ಣ ಪರಮಹಂಸರ ಸೇವಾ ಪ್ರತಿಷ್ಠಾನ:** ಶ್ರೀರಾಮಕೃಷ್ಣ ಪರಮಹಂಸರ ಜನ್ಮ ದಿನೋತ್ಸವ–2024 ಮತ್ತು ಶ್ರೀರಾಮಕೃಷ್ಣ ಪರಮಹಂಸರ ಜಾತ್ರೋತ್ಸವ, ಮಧ್ಯಾಹ್ನ 3 ಗಂಟೆಗೆ. ಉದ್ಘಾಟನೆ: ಶ್ರೀರಾಮಕೃಷ್ಣ ವಿದ್ಯಾಶಾಲೆಯ ಕರೆಸ್ಪಾಂಡೆಂಟ್ ಶ್ರೀ ಸ್ವಾಮಿ ಮುಕ್ತೇಶಾನಂದ. ಸಂಜೆ 6 ಗಂಟೆಗೆ ಆಧ್ಯಾತ್ಮಿಕ ಚಿಂತನ–ಮಂಥನ ಕಾರ್ಯಕ್ರಮ. ಉದ್ಘಾಟನೆ ಮತ್ತು ಉಪನ್ಯಾಸ: ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ನಿರ್ಮಲಾನಂದನಾಥ ಸ್ವಾಮಿಗಳು. ಉಪಸ್ಥಿತಿ: ಆದಿಚುಂಚನಗಿರಿ ಮಠದ ಬಿಜಿಎಸ್ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಶ್ರೀ ಪ್ರಕಾಶನಾಥ ಸ್ವಾಮೀಜಿ, ಪುಸ್ತಕದಲ್ಲಿ ಸ್ವಾಮಿ ವಿವೇಕಾನಂದರ ಚಿಂತನೆಗಳ ಅವಶ್ಯಕತೆ ಕುರಿತು ವೈದ್ಯ ಸಾಹಿತಿ ಡಾ. ನಾ.ಸೋಮೇಶ್ವರ ಅವರಿಂದ ಉಪನ್ಯಾಸ. ಮುಖ್ಯ ಅತಿಥಿ: ಖ್ಯಾತ ಹೃದ್ರೋಗ ತಜ್ಞರಾದ ಡಾ. ಸಿ.ಎನ್.ಮಂಜುನಾಥ್, ಸಾಧಕರಿಗೆ ಸನ್ಮಾನ: ಶ್ರೀರಾಮಕೃಷ್ಣ ಆಶ್ರಮದ ಶ್ರೀ ಸ್ವಾಮಿ ಸರ್ವದಯಾನಂದ, ಸಹಕಾರ: ಸತ್ಯಮೂರ್ತಿ. ಸ್ಥಳ: ರಾಮಕೃಷ್ಣವೃತ್ತ, ರಾಮಕೃಷ್ಣನಗರ.
- **ಸುಯೋಗ್ ಆಸ್ಪತ್ರೆ:** ಉಚಿತ 3ನೇ ಹೃದ್ರೋಗ ತಪಾಸಣಾ, ಆ್ಯಂಜಿಯೋಗ್ರಾಂ ಮತ್ತು ಆ್ಯಂಜಿಯೋಪ್ಲಾಸ್ಟಿ ಶಿಬಿರ. ಉದ್ಘಾಟನೆ: ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ. ಉಪಸ್ಥಿತಿ: ಆದಿಚುಂಚನಗಿರಿ ಮಠದ ಬಿಜಿಎಸ್ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಶ್ರೀ ಪ್ರಕಾಶನಾಥ ಸ್ವಾಮೀಜಿ. ಡಾ. ಎಸ್.ಪಿ.ಯೋಗಣ್ಣ ಅವರ 'ಹಾರ್ಟ್ ಅಟ್ಯಾಕ್' ಕೃತಿ ಬಿಡುಗಡೆ: ಖ್ಯಾತ ಹೃದ್ರೋಗ ತಜ್ಞರಾದ ಡಾ. ಸಿ.ಎನ್.ಮಂಜುನಾಥ್ ಅವರಿಂದ. ಅಧ್ಯಕ್ಷತೆ: ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ.ಯೋಗಣ್ಣ. ಸ್ಥಳ: ಸುಯೋಗ್ ಆಸ್ಪತ್ರೆ ಆವರಣ, ರಾಮಕೃಷ್ಣನಗರ. ಸಂಜೆ 4 ಗಂಟೆಗೆ.
- **ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸೆಲೆನ್ಸಿ :** ಕಲಾ ಸೌರಭ, ವಾರ್ಷಿಕೋತ್ಸವ ಸಮಾರಂಭ, ಮುಖ್ಯ ಅತಿಥಿಗಳು : ಮೈಸೂರು ವಿವಿ ಲಲಿತಕಲೆಗಳ ಕಾಲೇಜು ನೃತ್ಯ ವಿಭಾಗದ ಮುಖ್ಯಸ್ಥ ಡಾ. ಕೆ. ಕುಮಾರ್, ಅಧ್ಯಕ್ಷತೆ : ಎಸ್‌ಜೆಯುಇಟಿ ಉಪಾಧ್ಯಕ್ಷ ಡಾ. ಭಾರತಿ ಶ್ರೀಧರ್‌ರಾಜೇ ಅರಸ್, ಸ್ಥಳ: ಶಾಲೆ ಸಭಾಂಗಣ, ಚಾಮರಾಜಪುರಂ, ಸಂಜೆ 5ಕ್ಕೆ.
- **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ:** ಸುಮಧ್ವ–ವಿಜಯ ಎಕ್ಸ್‌ಪ್ರೆಸ್, ಮಧ್ವ–ಪುರಂದರ ನಮನ, ಗಾನಸಿರಿ–ವೇದಾಂತ ಲಹರಿ, ವಿದ್ವಾನ್ ಸುಹ್ರುತ್ ರಾವ್ ಹಾಗೂ ವಿದುಷಿ ಅನುಕೃಪ ರೌಡೂರ್, ಪಂಡಿತ್ ಪ್ರಮೋದಾಚಾರ್ಯ ಪೂಜಾರ್ ಅವರಿಂದ ಸುಮಧ್ವ ವಿಜಯ 9 ಮತ್ತು 10ನೇ ಸರ್ಗಗಳ ವಿಶ್ಲೇಷಣೆ ಹಾಗೂ ಗಾಯನ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5.30 ರಿಂದ.
- **ಶ್ರೀ ಚಿಕ್ಕಲಿಂಗೇಶ್ವರಸ್ವಾಮಿ ದೇವಸ್ಥಾನ:** ಶ್ರೀ ಮದ್ರಾಜಯೋಗಿ ಶ್ರೀ ಚಿಕ್ಕಲಿಂಗಣ್ಣಸ್ವಾಮಿಯವರ 87ನೇ ವರ್ಷದ ಆರಾಧನಾ ಮಹೋತ್ಸವ, ಪ್ರತಿನಿತ್ಯ ಸಂಜೆ 5.30ರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಭಜನೆ, ದಕ್ಷಿಣಾಮೂರ್ತಿ ಮಹಾತ್ಮೆ, ಸಂಜೆ 6.30ರಿಂದ ವಿದುಷಿ ಶ್ರೀಮತಿ ನಾಗಲಕ್ಷ್ಮೀ ಚಂದ್ರಶೇಖರ್ ಅವರಿಂದ ಕಾಳಿದಾಸ ವಿರಚಿತ ಕುಮಾರ ಸಂಭವ ಕುರಿತು ಪ್ರವಚನ, ಸ್ಥಳ: ದೇವಸ್ಥಾನ, ಉಪ್ಪಿನಕೇರಿ, ಮಂಡಿ ಮೊಹಲ್ಲಾ, ಸಂಜೆ 6.30ರಿಂದ.

ಮೈಸೂರು ಮಿತ್ರ

ನ್ಯಾಯಶಾಸ್ತ್ರಜ್ಞ ಫಾಲಿ ಎಸ್.ನಾರಿಮನ್ ನಿಧನ

ಕಾವೇರಿ ವಿವಾದದಲ್ಲಿ ಕರ್ನಾಟಕ ಪರ ಸುದೀರ್ಘ ಅವಧಿಗೆ ವಾದ ಮಂಡಿಸಿದ್ದ ಜಲ ತಜ್ಞ



ನವದೆಹಲಿ: ಖ್ಯಾತ ಸಾಂವಿಧಾನಿಕ ನ್ಯಾಯಶಾಸ್ತ್ರಜ್ಞ ಮತ್ತು ಸುಪ್ರೀಂಕೋರ್ಟ್‌ನ ಹಿರಿಯ ವಕೀಲ ಫಾಲಿ ಸ್ಯಾಮ್ ನಾರಿಮನ್ ಅವರು ದೆಹಲಿಯಲ್ಲಿ ಬುಧವಾರ ನಿಧನರಾದರು. ತಮ್ಮ 95ನೇ ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದ ಫಾಲಿ ನಾರಿಮನ್, 70 ವರ್ಷಗಳಿಗೂ ಹೆಚ್ಚು ಕಾಲ ವಕೀಲಿ ವೃತ್ತಿ ನಡೆಸಿದ್ದರು. ಅವರ ಅಧಿಕಾರಾವಧಿಯಲ್ಲಿ 13,565ಕ್ಕೂ ಹೆಚ್ಚು ಪ್ರಕರಣಗಳನ್ನು ನಿರ್ವಹಿಸಿದ್ದಾರೆ.

1929ರ ಜ.10ರಂದು ರಂಗೂನ್‌ನಲ್ಲಿ ಪಾರ್ಸಿ ಪೋಷಕರಿಗೆ ಜನಿಸಿದ ನಾರಿಮನ್, ಮುಂಬೈನ ಸೇಂಟ್ ಕ್ಸೇವಿಯರ್ ಕಾಲೇಜಿನಲ್ಲಿ ಅರ್ಥಶಾಸ್ತ್ರ ಮತ್ತು ಇತಿಹಾಸದಲ್ಲಿ ಬಿ.ಎ. ಮತ್ತು 1950ರಲ್ಲಿ ಮುಂಬೈನ ಸರ್ಕಾರಿ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ (LL.B) ಪಡೆದರು. ಅವರು ನವೆಂಬರ್ 1950ರಲ್ಲಿ ಬಾಂಬೆ ಹೈಕೋರ್ಟ್‌ನ ವಕೀಲರಾಗಿ ನೋಂದಾಯಿಸಿಕೊಂಡರು. ನಂತರ 1961ರಲ್ಲಿ ಹಿರಿಯ ವಕೀಲರಾಗಿ ನೇಮಕಗೊಂಡರು.

1971ರಲ್ಲಿ ಅವರು ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲರಾಗಿ ನೇಮಕಗೊಂಡರು. ಮೇ 1972ರಲ್ಲಿ ಭಾರತದ ಹೆಚ್ಚುವರಿ ಸಾಲಿಸಿಟರ್ ಜನರಲ್ ಆಗಿಯೂ ನೇಮಕಗೊಂಡರು.

ಪ್ರಶಸ್ತಿ, ಗೌರವಗಳು: ಜನವರಿ 1991ರಲ್ಲಿ ಪದ್ಮಭೂಷಣ ಮತ್ತು 2007ರಲ್ಲಿ ಪದ್ಮವಿಭೂಷಣ ಪ್ರಶಸ್ತಿಯನ್ನು ಪಡೆದರು. ಅವರು 2002ರಲ್ಲಿ ನ್ಯಾಯಕ್ಕಾಗಿ ಗ್ರೂಬರ್ ಪ್ರಶಸ್ತಿಯನ್ನು ಸಹ ಪಡೆದರು. ನಾರಿಮನ್ ಅವರು ಅಂತರಾಷ್ಟ್ರೀಯವಾಗಿ ಗುರುತಿಸಲ್ಪಟ್ಟ ನ್ಯಾಯಶಾಸ್ತ್ರಜ್ಞರಾಗಿದ್ದರು.

1955ರಲ್ಲಿ ಬಾಪ್ಸಿ ಎಫ್. ನಾರಿಮನ್ ಅವರನ್ನು ವಿವಾಹವಾದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಅವರ ಮಗ ರೋಹಿಂಟನ್ ನಾರಿಮನ್ ಅವರು ಸುಪ್ರೀಂಕೋರ್ಟ್‌ನ ನ್ಯಾಯಾಧೀಶರಾಗಿದ್ದರು. ರೋಹಿಂಟನ್ ಅವರು 2011 ರಿಂದ 2013ರವರೆಗೆ ಭಾರತದ ಸಾಲಿಸಿಟರ್ ಜನರಲ್ ಹುದ್ದೆಯನ್ನು ಸಹ ನಿರ್ವಹಿಸಿದ್ದರು.

ಅವರ ಆತ್ಮಕಥೆ "ಬಿಫೋರ್ ಮೆಮೊರಿ ಫೇಡ್ಸ್" ಪುಸ್ತಕ ಪ್ರಸಿದ್ಧವಾಗಿದೆ. ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗ (NJAC) 2014ರ ಮುಷ್ಕರ ಸೇರಿದಂತೆ ಪ್ರಮುಖ ಪ್ರಕರಣಗಳಲ್ಲಿ ನಾರಿಮನ್ ವಾದ ಮಂಡಿಸಿದ್ದರು.

ಕಳೆದ ವರ್ಷ ಡಿಸೆಂಬರ್‌ನಲ್ಲಿ, ಹಿಂದಿನ ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನವನ್ನು ನೀಡಿದ್ದ 370ನೇ ವಿಧಿಯನ್ನು ರದ್ದುಗೊಳಿಸಿದ ಸುಪ್ರೀಂ ಕೋರ್ಟ್‌ನ ತೀರ್ಪನ್ನು ಅವರು ಟೀಕಿಸಿದ್ದರು. ಕೊಲಿಜಿಯಂ ವ್ಯವಸ್ಥೆ ತೀರ್ಪಿನ ಭಾಗವಾಗಿದ್ದರು. 1975ರಲ್ಲಿ ಘೋಷಿಸಲಾದ ತುರ್ತು ಪರಿಸ್ಥಿತಿ ವಿರೋಧಿಸಿದ್ದರು. ಮಾಜಿ ಪ್ರಧಾನಿ ಇಂದಿರಾ ಗಾಂಧಿ ನೇತೃತ್ವದ ಸರ್ಕಾರ ತೆಗೆದುಕೊಂಡ ಈ ತುರ್ತು ನಿರ್ಧಾರವನ್ನು ವಿರೋಧಿಸಿ ಭಾರತದ ಹೆಚ್ಚುವರಿ ಸಾಲಿಸಿಟರ್ ಜನರಲ್ ಹುದ್ದೆಗೆ ರಾಜೀನಾಮೆ ನೀಡಿದ್ದರು.

ಕಾವೇರಿ ವಿವಾದ ಹೋರಾಟ: ಕಾವೇರಿ ವಿವಾದ ಸಂಬಂಧ ಸುಪ್ರೀಂಕೋರ್ಟ್‌ನಲ್ಲಿ ನಡೆದ ವಿಚಾರಣೆ ಮತ್ತು ನಂತರದ ಬೆಳವಣಿಗೆಗಳ ಪರಿಣಾಮವಾಗಿ ರಾಜ್ಯದ ಮಾಧ್ಯಮಗಳು, ರಾಜಕಾರಣಿಗಳು ಮತ್ತು ಜನರು ಫಾಲಿ ಎಸ್.ನಾರಿಮನ್ ಅವರನ್ನು ಟೀಕಿಸಿದ್ದರು. 25 ವರ್ಷಗಳ ಕಾಲ ಕಾವೇರಿ ವಿವಾದದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದರು. ಕಾವೇರಿ ನೀರಿನ ಹರಿವು 380 ಟಿಎಂಸಿಯಿಂದ 192 ಟಿಎಂಸಿಗೆ ಇಳಿಸಿದ ಸಾಧನೆ ಅವರಿಗೆ ಸಲ್ಲುತ್ತದೆ. ರಾಜ್ಯದ ಬಹುತೇಕ ಜಲ ವಿವಾದಗಳ ಕುರಿತು ನಾರಿಮನ್ ವಾದ ಮಂಡಿಸಿದ್ದರು. ಆಲಮಟ್ಟಿ ಅಣೆಕಟ್ಟು ಎತ್ತರ 524 ಮೀ.ಗೆ ಹೆಚ್ಚಿಸುವ ಕೇಸ್ ಗೆದ್ದಿದ್ದರು. ಮೂರು ದಶಕಗಳಿಂದ ಕೃಷ್ಣಾ, ಕಾವೇರಿ, ಮಹದಾಯಿ ಸೇರಿದಂತೆ ಅಂತಾರಾಜ್ಯ ನದಿ ನೀರು ಹಂಚಿಕೆಯ ಎಲ್ಲ ವ್ಯಾಜ್ಯಗಳಲ್ಲಿ ರಾಜ್ಯದ ಪರ ವಾದಿಸಿದ ಅಂತಾರಾಷ್ಟ್ರೀಯ ಖ್ಯಾತಿಯ ಜಲತಜ್ಞರೆಂಬ ಖ್ಯಾತಿ ಫಾಲಿ ಎಸ್. ನಾರಿಮನ್ ಅವರಿಗೆ ಸಲ್ಲಬೇಕು.

ಈ ಹಿಂದೆ ಸುಪ್ರೀಂಕೋರ್ಟ್ ನೀಡಿದ್ದ ಆದೇಶವನ್ನು ಕರ್ನಾಟಕ ಪಾಲಿಸದ ಹಿನ್ನಲೆಯಲ್ಲಿ ಅಸಮಾಧಾನಗೊಂಡಿದ್ದ ನಾರಿಮನ್ ಅವರು ಕರ್ನಾಟಕದ ಪರ ತಾವು ವಾದ ಮಂಡಿಸುವುದಿಲ್ಲ ಎಂದು ಹೇಳಿದ್ದರು. ಇದೇ ಕಾರಣಕ್ಕೆ ಕಳೆದ ವಿಚಾರಣೆಯಲ್ಲಿ ವಾದ ಮಂಡಿಸಲು ಆಸಕ್ತಿ ತೋರದ ನಾರಿಮನ್, ಕೇವಲ ಸರ್ಕಾರ ನೀಡಿದ್ದ ಟಿಪ್ಪಣಿಯನ್ನು ಮಾತ್ರ ಸುಪ್ರೀಂಕೋರ್ಟ್‌ಗೆ ನೀಡಿದ್ದರು.

ಕೊಡಗಿನ ಜಮ್ಮಾಮಲೆ ಭೂಮಿ ವಶಪಡಿಸಿಕೊಂಡು ಎಲಿಫೆಂಟ್ ಕಾರಿಡಾರ್ ನಿರ್ಮಾಣ ಮಾಡಿ

ಅರಣ್ಯ ಸಚಿವರಿಗೆ ಜಮ್ಮಾಮಲೆ ಅಸೋಸಿಯೇಷನ್ ಮನವಿ ಸಲ್ಲಿಕೆ



ಬೆಂಗಳೂರು, ಫೆ.21–ಕೊಡಗು ಜಿಲ್ಲೆಯ ಮೀಸಲು ಅರಣ್ಯ ಪ್ರದೇಶದಲ್ಲಿರುವ ಜಮ್ಮಾಮಲೆ ಭೂಮಿಯನ್ನು ಸರ್ಕಾರವು ಪರಿಹಾರ ನೀಡಿ ವಶಪಡಿಸಿಕೊಂಡು ಎಲಿಫೆಂಟ್ ಕಾರಿಡಾರ್ ನಿರ್ಮಿಸಬೇಕೆಂದು ಕೊಡಗು ಜಮ್ಮಾಮಲೆ ಅಸೋಸಿಯೇಷನ್ ಸಂಸ್ಥಾಪಕ ಗೌರವ ಕಾರ್ಯದರ್ಶಿ ಪೆಮ್ಮಯ್ಯ ನೇತೃತ್ವದಲ್ಲಿ ಸಂಘದ ಆಡಳಿತ ಮಂಡಳಿ ಸದಸ್ಯರು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಕೊಡಗು ಮೀಸಲು ಅರಣ್ಯ ಪ್ರದೇಶದಲ್ಲಿರುವ ಸುಮಾರು 80 ಸಾವಿರ ಎಕರೆ ಜಮ್ಮಾಮಲೆ ಭೂಮಿಯನ್ನು ಪರಿಹಾರ ನೀಡಿ ವಶಪಡಿಸಿಕೊಂಡು ಗ್ರೇಟರ್ ತಲಕಾವೇರಿ ವೈಲ್ಡ್ ಲೈಫ್ ಏರಿಯಾವನ್ನು ಮಾನವ ರಹಿತ ಅರಣ್ಯವಾಗಿ ಮಾರ್ಪಡಿಸಿ, ಎಲಿಫೆಂಟ್ ಕಾರಿಡಾರ್ ನಿರ್ಮಿಸುವ ಮೂಲಕ ಕೊಡಗಿನ ರೈತಾಪಿ ಜನರು ನಿರಂತರವಾಗಿ ಕಾಡಾನೆ ದಾಳಿಗೆ ತುತ್ತಾಗುವುದನ್ನು, ಜೀವಹಾನಿ ಹಾಗೂ ಬೆಳೆ ನಷ್ಟವನ್ನು ತಪ್ಪಿಸುವ ಮೂಲಕ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ ಮಾಡಿದ್ದಾರೆ.

ಈ ಸಂಬಂಧ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಪೆಮ್ಮಯ್ಯ ನೇತೃತ್ವದ ನಿಯೋಗದಲ್ಲಿ ಅಸೋಸಿಯೇಷನ್‌ನ ಸೋಮಣ್ಣ, ಪೂವಯ್ಯ, ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಅವರಿದ್ದರು. ಈ ವೇಳೆ ಅರಣ್ಯ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಮಂಜುನಾಥ ಪ್ರಸಾದ್ ಉಪಸ್ಥಿತರಿದ್ದರು.

ಕಾಫಿ ಬೆಳೆಗಾರರ ಒತ್ತುವರಿ ಭೂಮಿ 30 ವರ್ಷಕ್ಕೆ ಗುತ್ತಿಗೆ ನೀಡಿ; ವಿದ್ಯುತ್ ಬಿಲ್‌ನ ಬಡ್ಡಿ, ಚಕ್ರಬಡ್ಡಿ ಮನ್ನಾ ಮಾಡಿ

ಸಕಲೇಶಪುರ ಶಾಸಕ ಸಿಮೆಂಟ್ ಮಂಜು ಸರ್ಕಾರಕ್ಕೆ ಆಗ್ರಹ

ಬೆಂಗಳೂರು, ಫೆ.21–ಕೊಡಗು, ಹಾಸನ, ಚಿಕ್ಕಮಗಳೂರು ಸೇರಿದಂತೆ ಐದು ಜಿಲ್ಲೆಗಳಲ್ಲಿ ಕಾಫಿ ಬೆಳೆಗಾರರು ಒತ್ತುವರಿ ಮಾಡಿಕೊಂಡಿರುವ ಭೂಮಿಯನ್ನು 30 ವರ್ಷಗಳ ಗುತ್ತಿಗೆಗೆ ಬೆಳೆಗಾರರಿಗೇ ನೀಡಬೇಕು ಹಾಗೂ ಬೆಳೆಗಾರರ ವಿದ್ಯುತ್ ಬಿಲ್ ಬಾಕಿ ಮೇಲಿನ ಬಡ್ಡಿ ಮತ್ತು ಚಕ್ರಬಡ್ಡಿಯನ್ನು ಮನ್ನಾ ಮಾಡಬೇಕು ಎಂದು ಸಕಲೇಶಪುರ ಶಾಸಕ ಸಿಮೆಂಟ್ ಮಂಜು ಸರ್ಕಾರವನ್ನು ಒತ್ತಾಯಿಸಿದರು.

ವಿಧಾನಸಭೆಯಲ್ಲಿ ಮಾತನಾಡಿದ ಅವರು, ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಕಂದಾಯ ಸಚಿವರಾಗಿದ್ದ ಆರ್.ಅಶೋಕ್ ಅವರು ಕಾಫಿ ಬೆಳೆಗಾರರು ಒತ್ತುವರಿ ಮಾಡಿಕೊಂಡಿರುವ ಭೂಮಿಯನ್ನು ಅವರಿಗೇ 30 ವರ್ಷ ಗುತ್ತಿಗೆ ನೀಡುವುದಾಗಿ ಘೋಷಿಸಿದ್ದರು. ಈ ಸಂಬಂಧ ಆದೇಶ ಹೊರ ಬೀಳುವಷ್ಟರಲ್ಲಿ ರಾಜ್ಯದಲ್ಲಿ ಸರ್ಕಾರ ಬದಲಾವಣೆ ಆಗಿದೆ ಎಂದರು. ಕಾಫಿ ಬೆಳೆಗಾರರು ಆನೆ ದಾಳಿ, ಕಾರ್ಮಿಕರ ಸಮಸ್ಯೆ ಸೇರಿದಂತೆ ಹಲವಾರು ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಹೀಗಾಗಿ ಒತ್ತುವರಿ ಭೂಮಿಯನ್ನು 30 ವರ್ಷ ಗುತ್ತಿಗೆ ನೀಡಲು ಸರ್ಕಾರ ಆದೇಶಿಸಬೇಕು ಎಂದು ಒತ್ತಾಯಿಸಿದರು.



ವಿದ್ಯುತ್ ಬಿಲ್ ಬಡ್ಡಿ ಮನ್ನಾ: ಕಾಫಿ ಬೆಳೆಗಾರರ ವಿದ್ಯುತ್ ಬಿಲ್ ಮೇಲಿನ ಬಡ್ಡಿ ಮತ್ತು ಚಕ್ರಬಡ್ಡಿಯನ್ನು ಮನ್ನಾ ಮಾಡಬೇಕು ಎಂದು ಆಗ್ರಹಿಸಿದ ಅವರು, ವಿದ್ಯುತ್ ಬಿಲ್ ಪಾವತಿ ಮಾಡಿಲ್ಲ ಎಂಬ ಕಾರಣಕ್ಕಾಗಿ ದಿನ ನಿತ್ಯ ವಿದ್ಯುತ್ ಸಂಪರ್ಕ ಕಡಿತಗೊಳಿಸಲು ವಿದ್ಯುತ್ ಇಲಾಖೆಯ ಸಿಬ್ಬಂದಿ ತೋಟಗಳಿಗೆ ಬರುತ್ತಿರುವುದರಿಂದ ಬೆಳೆಗಾರರು ತೀವ್ರ ಆತಂಕಕ್ಕೊಳಗಾಗಿದ್ದಾರೆ. ವಿದ್ಯುತ್ ಬಿಲ್‌ನ ಅಸಲು ಕಟ್ಟಲು ಬೆಳೆಗಾರರು ಸಿದ್ಧರಾಗಿದ್ದು, ಬಡ್ಡಿ ಮತ್ತು ಚಕ್ರಬಡ್ಡಿ ಮನ್ನಾ ಮಾಡಬೇಕು ಎಂದು ಅವರು ಆಗ್ರಹಿಸಿದರು.

ಅಗ್ನಿ ಅವಘಡ ಅರಿವು ತಡೆಗಟ್ಟುವ ದಿನಾಚರಣೆ

ಮೈಸೂರು, ಫೆ.21(ಎಸ್‌ಪಿಎನ್)– ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆ ವತಿಯಿಂದ ರಾಜ್ಯಾದಂತ ಅಗ್ನಿಶಾಮಕ ಠಾಣೆ ಮತ್ತು ಕಚೇರಿಗಳಲ್ಲಿ 'ಅಗ್ನಿ ಅವಘಡಗಳ ಅರಿವು ಮತ್ತು ಅಗ್ನಿ ತಡೆಗಟ್ಟುವ ದಿನಾಚರಣೆ' ಹಮ್ಮಿಕೊಳ್ಳಲಾಗಿದೆ. ಅದರಂತೆ ಮೈಸೂರಿನಲ್ಲೂ ಫೆ.23ರಂದು ಬೆಳಗ್ಗೆಯಿಂದ ಸಂಜೆಯವರೆಗೆ ವಿವಿಧ ಸಾರ್ವಜನಿಕ ಸ್ಥಳದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಗುರುರಾಜ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸರ್ಕಾರಿ, ಅನುದಾನಿತ, ಅನುದಾನ ರಹಿತ ಶಾಲೆಗಳು, ವಿವಿಧ ಸರ್ಕಾರಿ ಕಚೇರಿಗಳು ಹಾಗೂ ಮೈಸೂರು ಗ್ರಾಮಾಂತರ ಮತ್ತು ನಗರ ಬಸ್ ನಿಲ್ದಾಣ ಸೇರಿದಂತೆ ಜನಸಂದಣಿ ಇರುವ ವಿವಿಧ ಸಾರ್ವಜನಿಕರ ಸ್ಥಳಗಳಲ್ಲಿ ಅಗ್ನಿ ಅವಘಡಗಳು ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

2011ರಲ್ಲಿ ಬೆಂಗಳೂರಿನ ಅಗ್ನಿ ಅವಘಡವೊಂದರಲ್ಲಿ 7 ಮಂದಿ ಸಜೀವ ದಹನವಾಗಿದ್ದರು. ಈ ಹಿನ್ನೆಲೆಯಲ್ಲಿ 2021ರಿಂದ ರಾಜ್ಯಾದ್ಯಂತ ಪ್ರತಿ ವರ್ಷ ಫೆ.23ರಂದು ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡು ಜನರಲ್ಲಿ ಅಗ್ನಿ ಅವಘಡಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಗಿರಿವಿ ಇಟ್ಟ ಚಿನ್ನದ ಮೇಲೆ ಸಾಲ ಪಡೆದು ವಂಚಿಸಿದ ಸಿಬ್ಬಂದಿ: ಇಂಡೆಲ್ ಮನಿ ಕಂಪನಿಯಿಂದ ಪೊಲೀಸರಿಗೆ ದೂರು





ಮೈಸೂರಿನ ರಾಜ್‌ಕುಮಾರ್ ರಸ್ತೆಯಲ್ಲಿರುವ ಇಂಡೆಲ್ ಮನಿ ಪ್ರೈವೇಟ್ ಲಿಮಿಟೆಡ್‌ನಲ್ಲಿ ಚಿನ್ನ ಗಿರವಿ ಇಟ್ಟು ವಂಚನೆಗೊಳಗಾದ ಗ್ರಾಹಕರು ಬುಧವಾರ ಕಂಪನಿ ಕಚೇರಿಗೆ ಜಮಾಯಿಸಿ, ಚಿನ್ನ ವಾಪಸ್ ನೀಡುವಂತೆ ಪಟ್ಟುಹಿಡಿದಿರುವುದು.

ಮೈಸೂರು, ಫೆ.21(ಎಂಕೆ)– ಗಿರವಿದಾರರ ಅರಿವಿಗೆ ಬಾರದಂತೆ ವೈಯಕ್ತಿಕವಾಗಿ ಲಕ್ಷಾಂತರ ರೂ. ಪರ್ಸನಲ್ ಲೋನ್ ಪಡೆದು ವಂಚಿಸಿದ್ದ ಇಂಡೆಲ್ ಮನಿ ಪ್ರೈವೇಟ್ ಲಿಮಿಟೆಡ್‌ನ ಇಬ್ಬರು ಸಿಬ್ಬಂದಿ ವಿರುದ್ಧ ಮೈಸೂರಿನ ನರಸಿಂಹರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದ ರಾಜ್‌ಕುಮಾರ್ ರಸ್ತೆಯಲ್ಲಿರುವ ಇಂಡೆಲ್ ಮನಿ ಪ್ರೈವೇಟ್ ಲಿಮಿಟೆಡ್‌ನ ಸಿನಿಯರ್ ಬ್ರಾಂಚ್ ಮ್ಯಾನೇಜರ್ ಆರ್.ನಾಗರಾಜ್, ಅಸಿಸ್ಟೆಂಟ್ ಮ್ಯಾನೇಜರ್ ಮಂಜುನಾಥ್, ಗ್ರಾಹಕರು ಅಡಮಾನವಿಟ್ಟ ಚಿನ್ನದ ಮೇಲೆಯೇ ಗ್ರಾಹಕರ ಅರಿವಿಗೆ ಬಾರದಂತೆ ವೈಯಕ್ತಿಕವಾಗಿ ಪರ್ಸನಲ್ ಲೋನ್‌ಗಳನ್ನು ತೆಗೆದುಕೊಂಡು ಕಂಪನಿಗೆ 25,29,238 ರೂ. ವಂಚಿಸಿದ್ದಾರೆ ಎಂದು ಕಂಪನಿ ಮುಖ್ಯಸ್ಥ ಹಾಗೂ ಅಧಿಕೃತ ಅಧಿಕಾರಿ ವೆಂಕಟಶೆಟ್ಟಿ ದೂರು ದಾಖಲಿಸಿದ್ದಾರೆ.

ಚಿನ್ನ ವಾಪಸ್ ಕೊಡುವಂತೆ ಗ್ರಾಹಕರ ಪಟ್ಟು: ಅಡಮಾನವಿಟ್ಟ ಚಿನ್ನದ ಮೇಲೆ ನಮ್ಮಿಂದಲೇ ಓಟಿಪಿ ಪಡೆದು ನಮಗೆ ತಿಳಿಯದಂತೆ ನಮ್ಮ ಹೆಸರಿನಲ್ಲೇ ಪರ್ಸನಲ್ ಲೋನ್ ಪಡೆದು ವಂಚಿಸಿರುವ ಸಿಬ್ಬಂದಿಗಳಿಂದ ಕೂಡಲೇ ಹಣ ಕೊಡಿಸಿ, ಇಲ್ಲವೇ ಗಿರವಿ ಇಟ್ಟಿರುವ ಚಿನ್ನಾಭರಣ ನೀಡುವಂತೆ 15ಕ್ಕೂ ಹೆಚ್ಚು ಮಂದಿ ಗ್ರಾಹಕರು ಪಟ್ಟು ಹಿಡಿದ ಘಟನೆ ಬುಧವಾರ ನಡೆಯಿತು.

ಕಂಪನಿ ಕಚೇರಿಗೆ ಜಮಾಯಿಸಿದ ಗ್ರಾಹಕರು, ಇಬ್ಬರು ಸಿಬ್ಬಂದಿ ವಂಚನೆ ಮಾಡಿರುವುದಾಗಿ ಒಪ್ಪಿಕೊಂಡಿದ್ದು, ಹಣ ವಾಪಸ್ ಮಾಡುವುದಾಗಿಯೂ ತಿಳಿಸಿ ಈಗಾಗಲೇ 3 ತಿಂಗಳೇ ಕಳೆದಿದೆ. ಇತ್ತ ಚಿನ್ನವೂ ಇಲ್ಲ. ಹಣವೂ ಇಲ್ಲದೆ ಕಂಗಾಲಾಗಿದ್ದೇವೆ. ಕಷ್ಟದಲ್ಲಿ ಚಿನ್ನ ಗಿರವಿ ಇಟ್ಟು ನಿಯಮದಂತೆ ಬಡ್ಡಿ ಕಟ್ಟಿದ್ದರೂ ನಮ್ಮ ಅರಿವಿಗೆ ಬಾರದಂತೆ ಬೋನಸ್ ಕೊಡುತ್ತೇವೆ ಎಂದೇಳಿ ಓಟಿಪಿ ಪಡೆದು ವಂಚಿಸಿದ್ದಾರೆ. ಕೂಡಲೇ ನಮ್ಮ ಚಿನ್ನಾಭರಣಗಳನ್ನು ಕೊಡುವಂತೆ ಪರಿ ಪರಿಯಾಗಿ ಬೇಡಿಕೊಂಡರು. ಕಡೆಗೆ ಕಂಪನಿಗೆ ಹೊಸದಾಗಿ ಮ್ಯಾನೇಜರ್ ಆಗಿ ಬಂದಿರುವ ರಮೇಶ್ ಎಂಬುವರು, ನಾಳೆ (ಫೆ.22) ಕಂಪನಿ ಮುಖ್ಯಸ್ಥರು ಬರಲಿದ್ದು, ಅವರ ಸಮ್ಮುಖದಲ್ಲೇ ಸಮಸ್ಯೆ ಬಗೆಹರಿಸಲಾಗುವುದು. ನಿಮ್ಮ ಒಡವೆಗಳನ್ನು ವಾಪಸ್ ಕೊಡುವ ಬಗ್ಗೆ ಚರ್ಚಿಸಲಾಗುವುದು ಎಂದು ಭರವಸೆ ನೀಡಿ, ಕಳುಹಿಸಿದರು.

ಶಾರೂಖ್ ಖಾನ್, ನಯನತಾರ ಸೇರಿದಂತೆ ಹಲವರಿಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ

ಮುಂಬಯಿ: ಮುಂಬೈ ಸಿನಿಮಾ ಲೋಕದಲ್ಲಿ ಪ್ರತಿಷ್ಠಿತ ಎನಿಸಿರುವ ದಾದಾ ಸಾಹೇಬ್ ಫಾಲ್ಕೆ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಪ್ರಶಸ್ತಿ 2024 ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು.



ದಾದಾಸಾಹೇಬ್ ಫಾಲ್ಕೆ ಅಂತರಾಷ್ಟ್ರೀಯ ಚಲನಚಿತ್ರೋತ್ಸವ ಪ್ರಶಸ್ತಿಗಳು 2024ರ ವಿಜೇತರ ಪಟ್ಟಿ ಹೊರಬಿದ್ದಿದೆ. ಅದ್ದೂರಿ ಕಾರ್ಯಕ್ರಮಕ್ಕೆ ಶಾರುಖ್‌ಖಾನ್, ಕರೀನಾ ಕಪೂರ್, ಆದಿತ್ಯ ರಾಯ್, ರಾಣಿ ಮುಖರ್ಜಿ, ಆಟ್ಲಿ ಮತ್ತು ನಯನತಾರಾ ಸೇರಿದಂತೆ ಸಾಕಷ್ಟು ಕಲಾವಿದರು ಹಾಜರಿದ್ದರು.

ಈ ಸಮಾರಂಭದಲ್ಲಿ ಜವಾನ್ ಚಿತ್ರದ ಅತ್ಯುತ್ತಮ ನಟನೆಗಾಗಿ ಶಾರುಖ್‌ಖಾನ್ ಮತ್ತು ನಯನತಾರಾ ಅವರು ದಾದಾಸಾಹೇಬ್ ಅಂತಾರಾಷ್ಟ್ರೀಯ ಫಾಲ್ಕೆ ಪ್ರಶಸ್ತಿ ಪ್ರಶಸ್ತಿ ಪಡೆದರು. ದಾದಾಸಾಹೇಬ್ ಫಾಲ್ಕೆ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಪ್ರಶಸ್ತಿ– 2024ರ ವಿಜೇತರ ಸಂಪೂರ್ಣ ಪಟ್ಟಿ ಈ ಕೆಳಕಂಡಂತಿದೆ. ಉತ್ತಮ ನಟ: ಶಾರುಖ್‌ಖಾನ್(ಜವಾನ್), ಉತ್ತಮ ನಟಿ: ನಯನತಾರಾ (ಜವಾನ್) ಉತ್ತಮ ನಟಿ: ರಾಣಿ ಮುಖರ್ಜಿ (ಮಿಸ್ಟರ್ ಚಟರ್ಜಿ), ಉತ್ತಮ ನಿರ್ದೇಶಕ: ಸಂದೀಪ್‌ರೆಡ್ಡಿ ವಂಗಾ (ಅನಿಮಲ್) ಉತ್ತಮ ನಟ (ವಿಮರ್ಶೆ): ವಿಕ್ಕಿ ಕುಶಾಲ್ (ಸ್ಯಾಮ್ ಬಹದೂರ್) ಉತ್ತಮ ಸಂಗೀತ ನಿರ್ದೇಶಕ: ಅನಿರುದ್ಧ ರವಿಚಂದರ್ (ಜವಾನ್), ಉತ್ತಮ ಹಿನ್ನೆಲೆ ಗಾಯಕ: ವರುಣ್‌ಜೈನ್ (ಝರಾ ಹಟ್ಕೆ ಝರಾ ಬಚ್ಕೆ ಸಿನಿಮಾದಿಂದ ತೇರೆ ವಸ್ತೆ). ಉತ್ತಮ ಖಳನಟ: ಬಾಬಿ ಡಿಯೋಲ್ (ಅನಿಮಲ್), ಉತ್ತಮ ನಟಿ (ಕಿರುತೆರೆ): ರೂಪಾಲಿ ಗಂಗೂಲಿ (ಅನುಪಮಾ) ಉತ್ತಮ ನಟ (ಕಿರುತೆರೆ): ನೈಲ್ ಭಟ್(ಘಮ್ ಹಾಯ್ ಕಿಸಿಕೆ ಪ್ಯಾರ್ ಮೇನ್), ವರ್ಷದ ಟೆಲಿವಿಷನ್ ಸರಣಿ: ಘಮ್ ಹಾಯ್ ಕಿಸಿಕೆ ಪ್ಯಾರ್ ಮೇನ್, ಉತ್ತಮ ನಟಿ (ವೆಬ್ ಸರಣಿ): ಕರಿಷ್ಮಾ ತನ್ನಾ (ಸ್ಕೂಪ್),ಚಲನಚಿತ್ರೋದ್ಯಮಕ್ಕೆ ಅತ್ಯುತ್ತಮ ಕೊಡುಗೆ: ಮೌಶುಮಿ ಚಟರ್ಜಿ, ಸಂಗೀತ ಉದ್ಯಮಕ್ಕೆ ಅತ್ಯುತ್ತಮ ಕೊಡುಗೆ: ಕೆ.ಜೆ.ಯೇಸುದಾಸ್.

'ವಸುದೈವ ಕುಟುಂಬಕಂ' ನಾಟಕ ಪ್ರದರ್ಶನ



ಮೈಸೂರು, ಫೆ.21(ಎಸ್‌ಪಿಎನ್)– ಭಾರತೀಯ ಜನ ರಂಗ ಮಹೋತ್ಸವಕ್ಕೆ 25 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಮೈಸೂರು ನಿರಂತರ ಫೌಂಡೇಶನ್ ಕಲಾವಿದರು 'ವಸುದೈವ ಕುಟುಂಬಕಂ' ನಾಟಕವನ್ನು ಬುಧವಾರ ಪ್ರದರ್ಶಿಸಿದರು.

ಮೈಸೂರು ವಿವಿ ಮಾನಸ ಗಂಗೋತ್ರಿ ಆವರಣದ ಗಾಂಧಿ ಭವನದಲ್ಲಿ ನಿರಂತರ ಫೌಂಡೇಶನ್, ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ ಹಾಗೂ ಕೇಂದ್ರ ಸಂಸ್ಕೃತಿ ಸಚಿವಾಲಯ ಹಾಗೂ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಸಹಯೋಗದೊಂದಿಗೆ 'ವಸುದೈವ ಕುಟುಂಬಕಂ' ನಾಟಕ ಪ್ರದರ್ಶನಗೊಂಡು ಪ್ರೇಕ್ಷಕರ ಮೆಚ್ಚುಗೆ ಪಡೆಯಿತು.

ಲೇಖಕ ಲಲತ್ ಪ್ರಕಾಶ್ ರಚಿತ, ಹಿರಿಯ ರಂಗಕರ್ಮಿ ಎಂ.ಎಂ.ಸುಗುಣ ನಿರ್ದೇಶನದ, ಎನ್.ಆರ್.ಅಶ್ವಿನಿ– ಜಿ.ಕೆ. ಕಿರಣ್ ಸಂಗೀತ ಸಂಯೋಜಿಸಿರುವ, ನಿರಂತರ ಫೌಂಡೇಶನ್ ಕಲಾವಿದರು ಅಭಿನಯಿಸಿರುವ 'ವಸುದೈವ ಕುಟುಂಬಕಂ' ನಾಟಕ ಪ್ರದರ್ಶನಗೊಂಡು ಹಲವಾರು ವಿಚಾರಗಳನ್ನು ಅನಾವರಣಗೊಳಿಸಿತು. ಕೇಂದ್ರ ಸರ್ಕಾರ ಇತ್ತೀಚೆಗೆ ಜಾರಿಗೆ ತಂದಿರುವ ರಾಷ್ಟ್ರೀಯ ಶಿಕ್ಷಣ ನೀತಿ, ಸ್ತ್ರೀ ಸಮಾನತೆ ಹಾಗೂ ಕೋವಿಡ್–19 ವಿರುದ್ಧ ದೇಶದ ಜನತೆ ಒಗ್ಗಟ್ಟಿನಿಂದ ಎದುರಿಸಿದ ಪ್ರಸಂಗ ಹಾಗೂ ಆತ್ಮನಿರ್ಭರ ಭಾರತ ಶೀರ್ಷಿಕೆಯಡಿ ಕೊರೊನಾ ಲಸಿಕೆ ತಯಾರಿಸಿ, ನಮ್ಮ ದೇಶವಾಸಿಗಳು ಸೇರಿದಂತೆ ಜಗತ್ತಿನ ಎಲ್ಲಾ ರಾಷ್ಟ್ರಗಳಿಗೂ ಉಚಿತವಾಗಿ ವಿತರಣೆ ಮಾಡಿ 'ವಸುದೈವ ಕುಟುಂಬಕಂ' ಮಹತ್ವ ಸಾರುವ ನಾಟಕ ಇದಾಗಿದೆ ಎಂದು ನಿರಂತರ ಫೌಂಡೇಶನ್‌ನ ಶ್ರೀನಿವಾಸ್ ಮಾಧ್ಯಮಗಳಿಗೆ ಮಾಹಿತಿ ನೀಡಿದರು. ನಾಟಕದ ಭೂಮಿಕೆಯಲ್ಲಿ ಕಲಾವಿದರಾದ ಕೆಂಪರಾಜು, ಆಕರ್ಷ್, ಯಶಸ್ಸು, ಅಶ್ವಿನಿ, ಸುಗುಣ, ಸೂರ್ಯ, ಕಲಾವತಿ, ದೇಮಾಜು, ಝೇಂಕಾರ, ಸಂತೋಷ್, ದೇವಿಕಿ, ಬಿ.ಕೆ.ಕಿರಣ್, ಪ್ರಸಾದ್ ಕುಂದೂರು ಸೇರಿದಂತೆ ಇತರೆ ಕಲಾವಿದರು ಅಭಿನಯಿಸಿದ್ದರು.

ಕೆ.ಆರ್.ಆಸ್ಪತ್ರೆಯಲ್ಲಿ ತ್ಯಾಜ್ಯಕ್ಕೆ ಬೆಂಕಿ



ಮೈಸೂರು, ಫೆ.21(ಎಂಕೆ)– ಕೆ.ಆರ್.ಆಸ್ಪತ್ರೆ ತ್ಯಾಜ್ಯ ಘಟಕಕ್ಕೆ ಆಕಸ್ಮಿಕ ಬೆಂಕಿ ತಗುಲಿ ಹೊತ್ತಿ ಉರಿದ ಘಟನೆ ಬುಧವಾರ ರಾತ್ರಿ ನಡೆಯಿತು.

ಆಸ್ಪತ್ರೆಯ ಹಿಂಭಾಗದಲ್ಲಿರುವ ತ್ಯಾಜ್ಯ ಸಂಗ್ರಹ ಘಟಕದಲ್ಲಿ ರಾತ್ರಿ 8 ಗಂಟೆಗೆ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿದ್ದು, ಕೆಲ ನಿಮಿಷದಲ್ಲೇ ಹೊತ್ತಿ ಉರಿದಿದೆ. ಪರಿಣಾಮ ಗಂಟೆಗೆ ಹೆಚ್ಚು ಕಾಲ ಆಸ್ಪತ್ರೆ ಸುತ್ತಮುತ್ತ ಹೊಗೆ ಆವರಿಸಿ, ಒಳರೋಗಿಗಳು ಹಾಗೂ ಸಾರ್ವಜನಿಕರಿಗೆ ತೊಂದರೆ ಉಂಟಾಯಿತು.ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಜಿಲ್ಲಾ ಅಗ್ನಿ ಶಾಮಕ ಅಧಿಕಾರಿ ಗುರುರಾಜ್ ನೇತೃತ್ವದ ತಂಡ ಅರ್ಧ ಗಂಟೆಗೆ ಹೆಚ್ಚು ಕಾಲ ಕಾರ್ಯಾಚರಣೆ ನಡೆಸಿ, ಹೊತ್ತು ಉರಿಯುತ್ತಿದ್ದ ಬೆಂಕಿ ನಂದಿಸಿತು. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಯಾರೋ ಬೆಂಕಿ ಹಚ್ಚಿರುವ ಸಾಧ್ಯತೆ ಇದೆ ಎಂದು ಅಗ್ನಿಶಾಮಕ ಸಿಬ್ಬಂದಿ ಅನುಮಾನ ವ್ಯಕ್ತಪಡಿಸಿದ್ದಾರೆ.

ನಿಧನ



ಸಿ.ಆರ್.ವರಲಕ್ಷ್ಮಿ

ಮೈಸೂರು,ಫೆ.21– ಮೈಸೂರಿನ ಗೌರಿಶಂಕರನಗರದ ನಿವಾಸಿ ಹಾಗೂ ದಿವಂಗತ ಡಿ.ಬಲರಾಮ್ ಅವರ ಪತ್ನಿ ಸಿ.ಆರ್.ವರಲಕ್ಷ್ಮಿ (67) ಬುಧವಾರ ನಿಧನರಾದರು. ಮೃತರು ಪುತ್ರ ಬಿ.ಆರ್.ಮಹೇಶ್, ಸೊಸೆ ಬಿ.ಎನ್.ಲಾವಣ್ಯ, ಪುತ್ರಿ ಬಿ.ಆರ್.ಮಾಲತಿ, ಅಳಿಯ ಆನಂದ್ ಜೆಟ್ಟಿ ಹಾಗೂ ಮೂವರು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಗುರುವಾರ (ಫೆ.22) ಬೆಳಗ್ಗೆ 10ಕ್ಕೆ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸ್ಮಶಾನದಲ್ಲಿ ಮೃತರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿನಯ್



ಮೈಸೂರು,ಫೆ.21– ಮೈಸೂರಿನ ಅಗ್ರಹಾರದ ಶೆಟ್ಟಪ್ಪ ಸಿದ್ದಪ್ಪ ಸನ್ಸ್ ಮಳಿಗೆ ಮಾಲೀಕ ವಿನಯ್ (42) ಬುಧವಾರ ನಿಧನರಾದರು. ಮೃತರು ತಮ್ಮ ತಾಯಿ ಸೇರಿದಂತೆ ಬಂಧು ಬಳಗ ಅಗಲಿದ್ದಾರೆ. ಮೃತ ವಿನಯ್ ಅವರು ಮೈಸೂರಿನ ಕೃಷ್ಣರಾಜ ಸಹಕಾರಿ ಬ್ಯಾಂಕ್‌ನ ಸಂಸ್ಥಾಪಕ ಶೆಟ್ಟಪ್ಪ ಸಿದ್ದಪ್ಪ ಅವರ ಮೊಮ್ಮಗ. ಗುರುವಾರ (ಫೆ.22) ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸ್ವಾಮಿ



ಮೈಸೂರು: ಜನತಾ ನಗರದ ನಿವಾಸಿ ಎಂ. ಸ್ವಾಮಿ (69) ಮಂಗಳವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಭಾವಿ ಸಮೀರ ಶ್ರೀ ವಾದಿರಾಜ ಗುರುಸಾರ್ವಭೌಮ ಜಯಂತಿ: ಹಿರಿಯ ಸಾಹಿತಿ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಉದ್ಘಾಟನೆ



ಭಾವಿ ಸಮೀರ ಶ್ರೀ ವಾದಿರಾಜ ಗುರುಸಾರ್ವಭೌಮ ಜಯಂತಿ ಕಾರ್ಯಕ್ರಮವನ್ನು ಹಿರಿಯ ಸಾಹಿತಿ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಬುಧವಾರ ಉದ್ಘಾಟಿಸಿದರು.

ಮೈಸೂರು, ಫೆ.21(ಎಸ್‌ಪಿಎನ್)– ಭಾವಿ ಸಮೀರ ಶ್ರೀ ವಾದಿರಾಜ ಗುರು ಸಾರ್ವಭೌಮ ಜಯಂತಿ ಕಾರ್ಯಕ್ರಮವನ್ನು ಹಿರಿಯ ಸಾಹಿತಿ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಬುಧವಾರ ಉದ್ಘಾಟಿಸಿದರು.

ಮೈಸೂರು ಸರಸ್ವತಿಪುರಂನ ಶ್ರೀಕೃಷ್ಣಧಾಮದಲ್ಲಿ ಶ್ರೀ ಕೃಷ್ಣ ಮಿತ್ರ ಮಂಡಳಿ, ಶ್ರೀಕೃಷ್ಣ ಟ್ರಸ್ಟ್ ಹಾಗೂ ಭಾವಿ ಸಮೀರ ಶ್ರೀ ವಾದಿರಾಜ ಸೇವಾ ಸಮಿತಿ ಸಹಯೋಗದೊಂದಿಗೆ ನಡೆದ ಶ್ರೀ ವಾದಿರಾಜ ಗುರುಸಾರ್ವಭೌಮರ ಜಯಂತಿ ಅಂಗವಾಗಿ ಶ್ರೀ ವಾದಿರಾಜ ಯತಿ ವಿರಚಿತ ಕೃತಿ 'ಶ್ರೀ ಲಕ್ಷ್ಮೀ ಶೋಬಾನೆ'ಯ ವಿಶೇಷತೆ, ವಿಶಿಷ್ಟತೆ ಕುರಿತಾದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ದೇವಸ್ಥಾನದಲ್ಲಿ ದೇವರಿಗೆ ಪೂಜೆ ಸಲ್ಲಿಸುವ ಪುರೋಹಿತರು ಲೋಕ ಕಲ್ಯಾಣಕ್ಕಾಗಿ ಪ್ರಾರ್ಥಿಸಬೇಕು. ಆದರೆ, ಸ್ವ ಹಿತಾಸಕ್ತಿಗಾಗಿ ಪೂಜೆ ಮಾಡಿದರೆ, ಅದು ದೇವರಿಗೆ ಸಮರ್ಪಿತವಾಗುವುದಿಲ್ಲ. ಹಾಗಾಗಿ ಪುರೋಹಿತರು, ತಮ್ಮ ಸೇವೆಯನ್ನು ಲೋಕ ಹಿತಕ್ಕಾಗಿ ಮೀಸಲಿಡಬೇಕು. ಇದನ್ನೇ ಗುರುಸಾರ್ವಭೌಮ ಶ್ರೀ ವಾದಿರಾಜರು ತಮ್ಮ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ ಎಂದರು. ಈಗಿನ ಕಾವ್ಯಗಳಲ್ಲಿ ಅರ್ಥ ಪೂರ್ಣ ಪದಗಳ ಜೋಡಣೆ ಇರುವುದಿಲ್ಲ. ಇಂತಹ ಕಾವ್ಯಗಳನ್ನು ಮುಟಗಟ್ಟಲೇ ಬರೆದರೂ ಜನರಿಗೆ ತಲುಪುವುದಿಲ್ಲ. ಆದರೆ, ಹಿಂದಿನ ಕಾವ್ಯಗಳಲ್ಲಿ ಉಲ್ಲೇಖವಾಗಿರುವ ಒಂದು ಪದ ನೂರು ಅರ್ಥ, ತರ್ಕಗಳಿಗೆ ಗ್ರಾಸವಾಗುತ್ತಿದ್ದವು. ಹಾಗಾಗಿ ಹಳೆಯ ಕಾವ್ಯಗಳಿಗೆ ಇಂದಿಗೂ ತನ್ನ ಮೌಲ್ಯ ಮತ್ತು ಮಹತ್ವವನ್ನು ಉಳಿಸಿಕೊಂಡಿವೆ ಎಂದು ಉದಾಹರಣೆ ಸಮೇತ ವಿವರಿಸಿದರು. ನಾನು ವಾಲ್ಮೀಕಿ ರಾಮಾಯಣ, ಕುವೆಂಪು ರಾಮಾಯಣ ಹೆಚ್ಚಾಗಿ ಅಧ್ಯಯನ ಮಾಡಿದರೆ, ಅದರಿಂದ ಪ್ರಭಾವಿತನಾಗುತ್ತೇನೆ. ಅದೇ ಶೈಲಿಯಲ್ಲಿ ಕಾವ್ಯ ರಚನೆಗೆ ಮುಂದಾಗುತ್ತೇನೆ. ಇಂತಹ ಬರಹಗಳು ಎಂದಿಗೂ ಕೃತಿ ಚೌರ್ಯ ಎನಿಸಿಕೊಳ್ಳುವುದಿಲ್ಲ ಎಂದು ತಿಳಿಸಿದರು. ಇದಕ್ಕೂ ಮುನ್ನ ಭಜನಾ ಮಂಡಳಿ ಸದಸ್ಯರಿಂದ ಶ್ರೀ ಲಕ್ಷ್ಮೀ ಶೋಬಾನೆ ಭಜನಾ ಕಾರ್ಯಕ್ರಮ ನಡೆಸಿಕೊಟ್ಟರು. ಈ ವೇಳೆ ಭಾವಿ ಸಮೀರ ಶ್ರೀ ವಾದಿರಾಜ ಸೇವಾ ಸಮಿತಿ ಸದಸ್ಯರಾದ ರಮೇಶ್ ರಾವ್, ರಘುರಾಮ ರಾವ್ ಇದ್ದರು.

ನಕ್ಕರೆ ಅದೇ ಸ್ವರ್ಗ

ವ್ಯಾಪಾರಿ : "ನೋಡಿ ನಮ್ಮ ಕಂಪನಿಯ ಪ್ಯಾರಚೂಟ್ ಚೆನ್ನಾಗಿದೆ."
ಗಿರಾಕಿ : "ಹೌದಾ, ಆದರೂ ಒಂದು ವೇಳೆ ನಾವು ವಿಮಾನದಿಂದ ಧುಮುಕಿದಾಗ ನಿಮ್ಮ ಪ್ಯಾರಚೂಟಿನ ಗುಂಡಿ ಅದುಮಿದರೂ ಬಿಚ್ಚಿಕೊಳ್ಳದಿದ್ದರೆ ಏನು ಮಾಡುವುದು?"
ವ್ಯಾಪಾರಿ : "ತತ್‌ಕ್ಷಣ ಬನ್ನಿ ಬದಲಾಯಿಸಿಕೊಡುತ್ತೇವೆ!"

ಮೈಸೂರು ಮಿತ್ರ

ಗುರುವಾರ, 22 ಫೆಬ್ರವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಸಕಾಲದಲ್ಲಿ ಕೊಟ್ಟದ್ದು ಅಲ್ಪವಾದರೂ ಅದು ಶ್ರೇಷ್ಠ. ಅಕಾಲದಲ್ಲಿ ಎಷ್ಟು ಕೊಟ್ಟರೇನು? –ಕಥಾ ಸರಿತ್ಸಾಗರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಳೇನೂ ಸಿರೀನೂ ಯಾರು ಕಂಡಿರೋರು?

ನಿಮ್ಮ ಪತ್ರಗಳು

ಇನ್ನೆಷ್ಟು ದಿನ ಈ ನರಕಯಾತನೆ ಸ್ವಾಮಿಗಳೇ...



ಮಾನ್ಯರೆ,

ಮೈಸೂರಿನ ಚಾಮರಾಜ ಕ್ಷೇತ್ರದ ಚಾಮರಾಜಪುರಂ, ಜಯಲಕ್ಷ್ಮಿ ವಿಲಾಸ ರಸ್ತೆ (ಮನೆ ಸಂಖ್ಯೆ–1020 ಸುತ್ತಮುತ್ತ) ನಿವಾಸಿಗಳ ನರಕಯಾತನೆ ಹೇಳತೀರದಾಗಿದೆ. ಇಲ್ಲಿ ಚರಂಡಿ ಮತ್ತು ಶೌಚಾಲಯದ ನೀರು ಮನೆಗಳಿಗೆ ಹರಿದು ಬರುತ್ತಿದೆ. ಗಲೀಜು ನೀರಿನ ಮಧ್ಯೆ ವಾಸಿಸುವ ಪರಿಸ್ಥಿತಿ ತಲೆದೋರಿದೆ.

ರಸ್ತೆಯ ಮೇಲ್ಭಾಗದಲ್ಲಿರುವ ಬಡಾವಣೆಗಳು ಮತ್ತು ದೊಡ್ಡ ದೊಡ್ಡ ಕಟ್ಟಡಗಳಿಂದ ಸರಿಯಾದ ಡ್ರೈನೇಜ್ ವ್ಯವಸ್ಥೆ ಇಲ್ಲದೆ ಹರಿದು ಬರುತ್ತಿರುವ ಚರಂಡಿ ನೀರು ಮನೆಯ ಅಂಗಳದಲ್ಲಿ ನಿಂತು ಗಬ್ಬು ನಾರುತ್ತಿದೆ. ಮಳೆಗಾಲದಲ್ಲಂತೂ ದಿನದ 24 ಗಂಟೆಯೂ ಮನೆಯೊಳಗೆ ಚರಂಡಿ, ಶೌಚಾಲಯದ ನೀರು ನಿಂತಿರುತ್ತದೆ. ಎಷ್ಟು ಸ್ವಚ್ಛ ಮಾಡಿದರೂ ಸಾಧ್ಯವಾಗುತ್ತಿಲ್ಲ. ಇದು ಬಹಳ ವರ್ಷಗಳ ಗೋಳಾಗಿದೆ. ನಿವಾಸಿಗಳು ಮನೆ ಕೆಲಸ ಬಿಟ್ಟು, ಗಲೀಜು ನೀರನ್ನು ಕ್ಲೀನ್ ಮಾಡುವುದೇ ಕಾಯಕವಾಗಿ ಬಿಟ್ಟಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ತವರು ಕ್ಷೇತ್ರ ಮತ್ತು ಸ್ವಚ್ಛ ನಗರಿ ಎಂಬ ಕೀರ್ತಿಗೆ ಪಾತ್ರವಾಗಿರುವ ಮೈಸೂರು ನಗರದಲ್ಲಿ ಇದೆಂತಹ ಹೀನಾಯ ಸ್ಥಿತಿ. ನಿವಾಸಿಗಳು ಸಾಂಕ್ರಾಮಿಕ ರೋಗ ಮತ್ತು ಚರ್ಮರೋಗದ ಭೀತಿಯಿಂದ ಬಳಲುತ್ತಿದ್ದಾರೆ. ಜೊತೆಗೆ ಕೋವಿಡ್ ಸಂದರ್ಭದಲ್ಲಿ ಮಾಸ್ಕ್ ಧರಿಸುತ್ತಿದ್ದಂತೆ ನಿವಾಸಿಗಳು ದುರ್ವಾಸನೆ ತಾಳಲಾರದೆ ಮೂಗು ಮತ್ತು ಬಾಯಿಗೆ ಬಟ್ಟೆ ಕಟ್ಟಿಕೊಂಡು ಜೀವಿಸುವಂತಾಗಿದೆ.


ಈಗಾಗಲೇ ಸಂಬಂಧಪಟ್ಟ ನಗರಪಾಲಿಕೆ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ಗಮನಕ್ಕೆ ಹಲವಾರು ಬಾರಿ ತಂದರೂ ಏನೂ ಪ್ರಯೋಜನವಾಗಿಲ್ಲ. ಅವರ ಕಣ್ಣಿಗೆ ಏನೂ ಕಾಣಿಸದೆ, ಕಿವಿಗೂ ಕೇಳಿಸದೆ, ಇದು ನಮಗೆ ಸಂಬಂಧಿಸಿದ್ದಲ್ಲ ಎಂದು ಹೇಳಿ ಕೈತೊಳೆದುಕೊಳ್ಳುತ್ತಿದ್ದಾರೆ. ಹಾಗಾದರೆ ನಿವಾಸಿಗಳು ಇನ್ನೆಷ್ಟು ವರ್ಷ ಈ ನರಕಯಾತನೆ ಅನುಭವಿಸಬೇಕು. ನಮ್ಮ ಕಷ್ಟಕ್ಕೆ ಕೊನೆಯೇ ಇಲ್ಲವೇ.

ಇನ್ನಾದರೂ ಸಂಬಂಧಪಟ್ಟ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಇತ್ತ ಗಮನ ಹರಿಸಿ, ನೊಂದ ಜನರ ಕಣ್ಣೀರು ಒರೆಸಿ ನೆಮ್ಮದಿಯ ಜೀವನ ನಡೆಸುವಂತೆ ಮಾಡಲಿ ಎಂಬುದೇ ನಮ್ಮ ಮನವಿ.

–ನೊಂದ ನಿವಾಸಿಗಳು, ಚಾಮರಾಜಪುರಂ, ಮೈಸೂರು.

ಭಾರತದ ಶ್ರೇಷ್ಠ ಕಾನೂನು ತಜ್ಞ ಕಣ್ಮರೆ

ಮಾನ್ಯರೆ,



ದೇಶದ ಸುಪ್ರಸಿದ್ಧ ನ್ಯಾಯವಾದಿ, ಸಂವಿಧಾನ ತಜ್ಞ, ಕಾನೂನು ಪಂಡಿತ ಫಾಲಿ ಎಸ್.ನಾರಿಮನ್ ಅವರ ನಿಧನ ದೇಶದ ಕಾನೂನು ಕ್ಷೇತ್ರಕ್ಕೆ ಉಂಟಾದ ತೀವ್ರ ನಷ್ಟವಾಗಿದೆ. ಅಂತರ ಜಲ ವಿವಾದಗಳಲ್ಲಿಯೂ ಅತ್ಯುತ್ತಮ ಪಾಂಡಿತ್ಯ ಹೊಂದಿದ್ದ ನಾರಿಮನ್ ಕಾವೇರಿ ನದಿ ನೀರಿನ ಹಂಚಿಕೆಯ ಪ್ರಕರಣದಲ್ಲಿ ರಾಜ್ಯವನ್ನು ಅನೇಕ ಬಾರಿ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರತಿನಿಧಿಸಿದ್ದರು. ತಮ್ಮ 95 ವರ್ಷಗಳ ಸುದೀರ್ಘ ಜೀವನ ಯಾನದಲ್ಲಿ ನಾರಿಮನ್ ಹಲವಾರು ಪ್ರತಿಷ್ಠಿತ ಹುದ್ದೆಗಳನ್ನು ಅಲಂಕರಿಸಿದ್ದರು. ಜನವರಿ 10, 1929'ರಂದು ಇಂದಿನ ಮಯನ್ಮಾರ್ (ಅಂದಿನ ಬರ್ಮಾ) ನಲ್ಲಿ ಪಾರ್ಸಿ ಕುಟುಂಬವೊಂದರಲ್ಲಿ ಜನಿಸಿದ ನಾರಿಮನ್, 1950ರಲ್ಲಿ ಬಾಂಬೆ ಉಚ್ಚ ನ್ಯಾಯಾಲಯದಲ್ಲಿ ವಕೀಲರಾಗಿ ತಮ್ಮ ವೃತ್ತಿ ಆರಂಭಿಸಿ, ಮುಂದೆ ನೂರಾರು ಮಹತ್ವಪೂರ್ಣ ಪ್ರಕರಣಗಳಲ್ಲಿ ವಿಜಯಿಯಾಗಿ ದೇಶದ ಓರ್ವ ಸುಪ್ರಸಿದ್ಧ ಹಾಗೂ ಯಶಸ್ವಿ ವಕೀಲರೆನಿಸಿದರು.

1972ರಲ್ಲಿ ದೇಶದ ಹೆಚ್ಚುವರಿ ಸಾಲಿಸಿಟರ್ ಜನರಲ್ (Additional Solicitor General) ಆಗಿ ನೇಮಕಗೊಂಡ ನಾರಿಮನ್, 1975 ರಲ್ಲಿ ಅಂದಿನ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿ ನಾಗರಿಕರ ಮೂಲಭೂತ ಹಕ್ಕುಗಳನ್ನು ಅಮಾನತ್ತುಗೊಳಿಸಿದಾಗ, ಅದನ್ನು ವಿರೋಧಿಸಿ, ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದರು. ದೇಶದ ಅತಿ ದೊಡ್ಡ ದುರಂತ ಎಂದು ಹೇಳಬಹುದಾದ ಭೋಪಾಲ್ ಗ್ಯಾಸ್ ದುರಂತ (1985) ಪ್ರಕರಣದಲ್ಲಿ ಇವರು ಯೂನಿಯನ್ ಕಾರ್ಬೈಡ್ ಸಂಸ್ಥೆಯನ್ನು ಪ್ರತಿನಿಧಿಸಿದ್ದರು. ಜಯಲಲಿತಾ ಅಕ್ರಮ ಆಸ್ತಿ ಗಳಿಕೆ ಪ್ರಕರಣದಲ್ಲಿ ಸಹ ಇವರು ಜಯಲಲಿತಾ ಪರ ವಾದ ಮಂಡಿಸಿದ್ದರು. ಕಾವೇರಿ ನದಿ ವಿವಾದದಲ್ಲಿ ರಾಜ್ಯವನ್ನು ಹಲವಾರು ಬಾರಿ ಪ್ರತಿನಿಧಿಸಿದ್ದ ನಾರಿಮನ್ ದೇಶ ಕಂಡ ಅಪ್ರತಿಮ ಕಾನೂನು ತಜ್ಞರಾಗಿದ್ದರು. 1999ರಲ್ಲಿ ರಾಜ್ಯಸಭೆಗೂ ನಾಮಕರಣ ಹೊಂದಿದ ಇವರಿಗೆ ಪ್ರತಿಷ್ಠಿತ ನಾಗರಿಕ ಪ್ರಶಸ್ತಿಗಳಾದ ಪದ್ಮಭೂಷಣ (1991) ಹಾಗೂ ಪದ್ಮ ವಿಭೂಷಣ ಪ್ರಶಸ್ತಿಗಳು ಪ್ರಾಪ್ತವಾಗಿದ್ದವು. ಇವರ ಆತ್ಮಕ್ಕೆ ಸದ್ಗತಿ ದೊರಕಲಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಮಾನವೀಯತೆ ಇಲ್ಲದ ಅಧಿಕಾರಿಗಳು

ಮಾನ್ಯರೆ,

ಸಮಾಜದಲ್ಲಿ ಏನಾದರೂ ಒಳ್ಳೆಯ ಕೆಲಸ ಮಾಡಲು ಹೊರಟರೆ, ಏನೆಲ್ಲಾ ತೊಂದರೆ ಆಗುತ್ತದೆ ಎಂಬುದಕ್ಕೆ ಶಿರಸಿಯ ಗಣೇಶನಗರದಲ್ಲಿ ಅಂಗನವಾಡಿ ಮಕ್ಕಳಿಗಾಗಿ ಗೌರಿನಾಯಕ ಎಂಬುವರು ಕುಡಿಯುವ ನೀರಿಗಾಗಿ ಬಾವಿ ತೋಡುತ್ತಿದ್ದು, ಈಗಾಗಲೇ 30 ಅಡಿಯಷ್ಟು ಆಳ ತೋಡಿದ್ದು ಇನ್ನೇನು ಕುಡಿಯುವ ನೀರು ಬರುತ್ತದೆ ಎಂಬ ನಿರೀಕ್ಷೆಯಲ್ಲಿದ್ದರು. ಅಷ್ಟರಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳು ಬಂದು ಬಾವಿಯನ್ನು ಮುಚ್ಚಿಸಿದ್ದಾರೆ. ಸ್ಥಳೀಯರು ಇದನ್ನು ವಿರೋಧಿಸಿದರೂ, ಅಧಿಕಾರಿಗಳು ಕ್ಯಾರೆ ಎನ್ನದೆ ಬಾವಿಯನ್ನು ಮುಚ್ಚಿಸಿದ್ದಾರೆ. ತನ್ನ ಸ್ವಂತ ಖರ್ಚಿನಲ್ಲಿ ಅಂಗನವಾಡಿ ಮಕ್ಕಳಿಗಾಗಿ ಕುಡಿಯುವ ನೀರಿಗಾಗಿ ತೋಡುತ್ತಿದ್ದ ಬಾವಿಯನ್ನು ಮುಚ್ಚಿಸಿದ್ದು, ಇವರಿಗೆ ಮಾನವೀಯತೆ ಇದೆಯಾ? ಅನುಮತಿ ಪಡೆದಿಲ್ಲವೆಂದು ಜಿಲ್ಲಾಡಳಿತ ಬಾವಿ ತೋಡಲು ತಡೆ ನೀಡಿ, ಹಲಗೆ ಮತ್ತು ಮಣ್ಣಿನಿಂದ ಮುಚ್ಚಿತ್ತು. ಇದೀಗ ಜಿಲ್ಲಾಧಿಕಾರಿಗಳು ಬಾವಿ ತೆಗೆಯಲು ಅನುಮತಿ ನೀಡಿದ್ದಾರೆ. ಬಾವಿ ತೋಡುವ ಕೆಲಸ ಈಗ ಆರಂಭವಾಗಿದೆ.

–ಬೂಕನಕೆರೆ ವಿಜೇಂದ್ರ, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಲೆಕ್ಕ ಬರೆದು ಹಣ ಕೊಡು, ಹಣ ಪಡೆದು ಲೆಕ್ಕ ಬರೆದುಕೋ!!



"ಕಂತಿನಲ್ಲಿ ವಸ್ತು ಕೊಡುವವರು ಸರಿಯಾದ ದಾಖಲೆ ಇಲ್ಲದೆ ಕೊಡುವುದಿಲ್ಲ. ಆರಂಭದಲ್ಲಿ ಬಹಳ ವಿಶ್ವಾಸದಿಂದ ಮಾತನಾಡುವ ಅವರು ನಿಗದಿತ ಕಂತು ಬಾರದಿದ್ದಲ್ಲಿ ಬಲವಂತದ ಹಾದಿ ಹಿಡಿಯುತ್ತಾರೆ. ಮರ್ಯಾದೆಗೆ ಅಂಜುವವರು ಮತ್ತೊಂದು ಕಡೆ ಸಾಲ ತಂದಾದರೂ ಅವರ ಹಣ ಪಾವತಿಸಬೇಕಾಗುತ್ತದೆ. ಇದರ ಮತ್ತೊಂದು ಭಾಗವೆಂದರೆ ಸಾಲ ಪಡೆದವರು ವಾಪಸ್ಸು ನೀಡುವ ಹಣದ ಲೆಕ್ಕ ಬರೆದುಕೊಳ್ಳುವುದು. ಮರೆವು ಸಾಮಾನ್ಯ ಖಾಯಿಲೆ. ನಮಗೆ ಮರೆವಿದೆ ಎಂದಾದಾಗ ಅದನ್ನು ದುರುಪಯೋಗಪಡಿಸಿಕೊಳ್ಳುವವರೇ ಜಾಸ್ತಿ. ನಾವು ಹಣ ವಾಪಸು ಪಡೆದು ಬರೆದುಕೊಳ್ಳದಿದ್ದಾಗ ಕೆಲ ಸಮಯದ ನಂತರ ಅಂದು ನಾನು ಹೆಚ್ಚು ಹಣ ಕೊಟ್ಟಿದ್ದೆ ಎಂದು ಅವರುಗಳು ವಾದಿಸಬಹುದು.

ನಮ್ಮಲ್ಲಿ ಬಹುತೇಕ ಸಂಬಂಧಗಳು ಕಡಿತಗೊಳ್ಳುವುದು, ವೈಮನಸ್ಯ ಮೂಡಲು ಸಾಮಾನ್ಯವಾಗಿ ಹಣದ ವ್ಯವಹಾರವೇ ಕಾರಣವಾಗಿರುತ್ತದೆ. ಇಂದು ಮಾನವ ಸಂಬಂಧಗಳಿಗಿಂತ ಹಣದ ಮೌಲ್ಯದ ಆಧಾರದ ಸಂಬಂಧವೇ ಅಧಿಕವಾಗುತ್ತಿದೆ. ನಮಗೆ ಎಷ್ಟು ಹಣ ಬೇಕು ಎಂಬುದರ ಮಾನದಂಡವೇ ಇಲ್ಲದಿರುವಾಗ ದುರಾಸೆಯೂ ಇದಕ್ಕೆ ಇಂಬು ನೀಡುತ್ತದೆ. ನಗರ ಪ್ರದೇಶಗಳಲ್ಲಿ ಕೊಲೆ ಸುಲಿಗೆಗಳಂತಹುದು ಹೆಚ್ಚಾಗಲು ಕಾರಣ ಸಾಮಾನ್ಯವಾಗಿ ಹಣವೇ ಆಗಿರುತ್ತದೆ. ದುಡಿದರೆ ಸಿಗುವುದಕ್ಕಿಂತ ಈ ರೀತಿಯಾಗಿ ಒಮ್ಮೆಲೇ ಹಣ ಸಿಗುವಂತಾದರೆ ಯಾಕೆ ಆಗಬಾರದು ಎಂಬುದೇ ಬಹುತೇಕ ಇದಕ್ಕೆ ಕಾರಣ ಎನ್ನಬಹುದು. ಅದರಲ್ಲೂ ಈ ರಿಯಲ್ ಎಸ್ಟೇಟ್ ಉದ್ಯಮ ಜಾಸ್ತಿಯಾಗಿ ಒಂದೆರಡು ಯೋಜನೆ ಮಾಡಿದರೆ ಕೋಟ್ಯಾಂತರ ಹಣ ಬರುತ್ತದೆ ಎಂದು ಕಂಡುಬಂದಾಗ ಹಲವರು ಇದಕ್ಕೆ ಕೈಹಾಕಿ ಅಲ್ಪ ಕಾಲದಲ್ಲೇ ಕೋಟ್ಯಾಧಿಪತಿಗಳಾದರು. ಕೆಲವರಿಗೆ ಇದರಿಂದ ಲಾಭ ಬಂದಿದೆ ನಿಜ. ಆದರೆ ಇದಕ್ಕೆ ಕೈಹಾಕಿ ಸ್ನೇಹಿತರನ್ನು ಶತ್ರು ಮಾಡಿಕೊಂಡವರೂ ಅಷ್ಟೇ ಸಂಖ್ಯೆಯಲ್ಲಿ ಇದ್ದಾರೆ ಎಂಬುದೂ ನಿಜವೇ.

ಹಣ ಈ ರೀತಿ ನಮ್ಮಲ್ಲಿ ಹಲವು ಸಮಸ್ಯೆಗಳನ್ನು ತಂದೊಡ್ಡುತ್ತಿದೆ. ಜೊತೆಗೆ ಶಕ್ತಿ ಇದ್ದವನಿಗೇ ಹಣ ಒಲಿಯುತ್ತದೆ ಎಂಬಂತಾಗುತ್ತಿರುವುದು ದುರ್ದೈವದ ಸಂಗತಿ. ಯಾರೋ ಯಾವುದೋ ವಿಧದಲ್ಲಿ ಹಣ ಮಾಡಿದರು ಎಂದರೆ ನಾವೂ ಹಾಗೆ ಏಕೆ ಮಾಡಬಾರದು ಎಂದು ಯೋಚಿಸುವವರ ಸಂಖ್ಯೆಯೂ ಕಡಿಮೆ ಏನಿಲ್ಲ. ಆದರೆ ನಾನು ಗಮನಿಸಿದಂತೆ ಸಾಮಾನ್ಯವಾಗಿ ಈ ರೀತಿ ಒಮ್ಮೆಲೇ ಹಣ ಮಾಡಿದವರು ಬಹಳ ಸಂತೋಷವಾಗಿದ್ದಾರೆ ಎಂದು ಕಂಡುಬರುವುದಿಲ್ಲ. ತಮಗೆ ಅಗತ್ಯಕ್ಕಿಂತ ಹೆಚ್ಚು ಹಣ ಬಂದಾಗ ಅದನ್ನು ಮತ್ತೆಲ್ಲೋ ವಿನಿಯೋಗಿಸಬೇಕು. ಮೊದಲಿನ ವ್ಯವಹಾರ ಸರಳವಾಗಿ ನಡೆಯಿತು ಎಂದರೆ ಮತ್ತೊಂದೂ ಹಾಗೇ ಆಗುತ್ತದೆ ಎಂದೇನಿಲ್ಲ. ಹಾಗಾದಾಗ ಸಮಸ್ಯೆಗಳ ಸುಳಿಯಲ್ಲಿ ಸಿಲುಕಬೇಕಾಗುತ್ತದೆ. ಹೊಸ ಸಾಹಸಕ್ಕೆ ಕೈಹಾಕಿ ತಪ್ಪು ಮಾಡಿಕೊಂಡೆನೇನೋ ಎನ್ನುವಂತಾಗುತ್ತದೆ. ಇದ್ದುದರಲ್ಲೇ ತೃಪ್ತಿಪಟ್ಟುಕೊಳ್ಳಬೇಕಾಗಿತ್ತು ಎಂದೂ ಅನಿಸಿಬಿಡಬಹುದು. ಅದಕ್ಕೇ ನಮ್ಮಲ್ಲಿ ಹೇಳುವ ಮಾತು 'ಕೆಟ್ಟ ಮೇಲೆ ಬುದ್ಧಿ ಬಂತು' ಎಂದು. ಕೈಸುಟ್ಟಾಗಲೇ ಬೆಂಕಿಯ ಸಹವಾಸ ಅರಿವಾಗುವುದು. ಇಂದು ನಮ್ಮ ಹಣದ ವ್ಯಾಮೋಹ ಸಂಬಂಧಗಳನ್ನು ನಾಶ ಮಾಡುತ್ತಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ.

ಮತ್ತಷ್ಟು ಜನರಿಗೆ ಹಣವನ್ನು ಸಾಲಕ್ಕೆ ತೆಗೆದುಕೊಳ್ಳುವ ಅಭ್ಯಾಸ. ಅದು ಅಗತ್ಯವಿರಲಿ, ಇಲ್ಲದಿರಲಿ ಸಾಲ ಮಾಡುತ್ತಲೇ ಇರುತ್ತಾರೆ. ಹಾಗೆ ಸಾಲ ಮಾಡುವಾಗ ಅದನ್ನು ಹೇಗೆ ತೀರಿಸಬಹುದು? ಎಂಬ ಬಗ್ಗೆ ಅವರು ತಲೆ ಕೆಡಿಸಿಕೊಳ್ಳುವುದಿಲ್ಲ. ಸಾಲ ತೀರಿಸಲಾಗದಿದ್ದರೆ ಮತ್ತೊಬ್ಬರಿಂದ ಸಾಲ ಪಡೆದು ಇವರಿಗೆ ಕೊಟ್ಟರಾಯಿತು, ಆ ಸಾಲ ತೀರಿಸಲು ಮತ್ತೊಬ್ಬರು ಸಿಕ್ಕೇ ಸಿಗುತ್ತಾರೆ ಎಂಬ ಮನೋಭಾವ ಹಲವರಲ್ಲಿರುತ್ತದೆ. ಹೀಗೆ ಸಾಲ ಮಾಡುವವರ ಮನೋಭಾವ ಸಾಮಾನ್ಯವಾಗಿ ಚಂಚಲವಾದುದಾಗಿರುತ್ತದೆ.

ನಮ್ಮಲ್ಲಿ ಬಹುಜನರಿಗೆ ಕಂತುಗಳಲ್ಲಿ ಪದಾರ್ಥಗಳನ್ನು ಕೊಳ್ಳುವ ಅಭ್ಯಾಸ ಜಾಸ್ತಿ. ಹೇಗೋ ತಿಂಗಳಿಗೆ ಒಂದಷ್ಟು ಹಣ ಕೊಟ್ಟರಾಯಿತು, ಅದು ಕಷ್ಟವೇನಲ್ಲ ಎಂಬ ಭಾವನೆ ಹೀಗೆ ಮಾಡಿಸುತ್ತದೆ. ಹಲವರು ಹೀಗೆ ಸಿಕ್ಕಸಿಕ್ಕಿದ್ದನ್ನು ಕಂತುಗಳಲ್ಲಿ ಕೊಂಡುಕೊಳ್ಳುವುದನ್ನು ನಾವು ಗಮನಿಸಬಹುದು. ಒಂದು ಪದಾರ್ಥವಾದರೆ ಸರಿ. ಆದರೆ ಈ ಆಸೆ ಅಲ್ಲಿಗೆ ನಿಲ್ಲುವುದಿಲ್ಲ. ಒಂದರ ನಂತರ ಮತ್ತೊಂದು. ಅವರು ಜಾಹೀರಾತಲ್ಲಿ ಗಮನಿಸುವುದೂ ಇದನ್ನೇ. ಯಾವ ವಸ್ತುಗಳು ಕಂತಿನಲ್ಲಿ ಸಿಗುತ್ತದೆ ಎಂಬುದನ್ನೇ ಗಮನಿಸುತ್ತಾರೆ. ಇತ್ತೀಚೆಗೆ ಪದಾರ್ಥಗಳ ಜಾಹೀರಾತನ್ನು ಗಮನಿಸಬಹುದು. ಅದರಲ್ಲಿ ಮಾಸಿಕ ಕಂತು ಇಷ್ಟು ಎಂದು ನಮೂದಿಸುವರೇ ವಿನಃ ಮೂಲ ಪದಾರ್ಥದ ಬೆಲೆ ಎಷ್ಟು ಎಂಬುದನ್ನೇ ನಮೂದಿಸುತ್ತಿಲ್ಲ. ಇದು ವ್ಯಾಪಾರಿ ಮನೋಭಾವ. ತಿಂಗಳಿಗೆ ಐದು ಹತ್ತು ಸಾವಿರದವರೆಗೆ ಮಾಸಿಕ ಕಂತಿನ ಬಗ್ಗೆ ಜಾಹೀರಾತು ಬರುತ್ತಿವೆ. ಅದರಲ್ಲೂ ಈ ಮೊಬೈಲ್ ಫೋನುಗಳ ವ್ಯಾಪಾರ ಇದಕ್ಕೆ ತಾಜಾ ಉದಾಹರಣೆ. ತಮ್ಮ ಕೈಯಲ್ಲಿರುವ ಮೊಬೈಲ್ ಚೆನ್ನಾಗಿ ಕೆಲಸ ಮಾಡುತ್ತಿದ್ದರೂ ಅದಕ್ಕಿಂತ ಹತ್ತಾರು ಪಟ್ಟು ಜಾಸ್ತಿ ಇರುವ ಮೊಬೈಲ್ ಕೊಂಡುಕೊಳ್ಳುವ ಬಯಕೆ ಇರುವವರನ್ನು ಗಮನಿಸಿ ಈ ರೀತಿಯ ಜಾಹಿರಾತು ನೀಡಲಾಗುತ್ತದೆ. ಒಟ್ಟು ಹಣದ ಬಗ್ಗೆ ಯೋಚಿಸದೇ ತಿಂಗಳ ಕಂತಿನ ಬಗ್ಗೆ ಮಾತ್ರ ಯೋಚಿಸುವ ಜನ ಇದಕ್ಕೆ ಮರುಳಾಗುತ್ತಾರೆ.

ನಮ್ಮ ಸ್ನೇಹಿತರ ಬಳಿ ಹಳೆಯ ಕಾರಿದೆ. ಹಳೆಯದು ಎಂದರೆ ಹತ್ತು ವರ್ಷಗಳ ಹಿಂದಿನದು. ಈಗ ಕಾರು ಮಾರುವ ಸಂಸ್ಥೆಗಳು ಹಳೆಯ ಕಾರನ್ನು ನಾವು ಕೊಂಡುಕೊಳ್ಳುತ್ತೇವೆ, ಬದಲಿಯಾಗಿ ನೀವು ಹೊಸ ಕಾರನ್ನು ಕೊಂಡುಕೊಳ್ಳಬಹುದು ಎಂದು ಭರವಸೆ ನೀಡುತ್ತವೆ. ನಾವು ಹಳೆಯ ಕಾರಿಗೆ ಆ ದಿನದ ಮೌಲ್ಯದಲ್ಲಿ ಹಣ ಪಾವತಿಸಿರುತ್ತೇವೆ. ಈಗ ಅದನ್ನು ಮಾರಿದರೆ ಅದರ ಅರ್ಧಕ್ಕಿಂತ ಹೆಚ್ಚಿನ ಬೆಲೆ ಸಿಗುತ್ತದೆ ಎಂದು ಕಂಪನಿಗಳು ಹೇಳುತ್ತವೆ. ಇದು ನಮ್ಮನ್ನು ಸಂದಿಗ್ಧಕ್ಕೆ ಸಿಲುಕಿಸುತ್ತವೆ. ಹಳೆ ಕಾರು ಮಾರಿದ ಮೊಬಲಗಿಗೆ ಮೂರ್‍ನಾಲ್ಕು ಪಟ್ಟು ಹೆಚ್ಚು ಹಣಕೊಟ್ಟರೆ ಮಾತ್ರ ಹೊಸ ಕಾರು ಸಿಗುವುದು. ಇಂತಹ ಜಾಹೀರಾತನ್ನು ಗಮನಿಸಿದ ಸ್ನೇಹಿತರು ಹೇಳುವುದು ಏನೆಂದರೆ, ನನ್ನ ಕಾರು ಈಗಲೂ ಚೆನ್ನಾಗಿದೆ. ಈಗಲೂ ಚೆನ್ನಾಗಿ ಓಡುತ್ತದೆ. ಈಗಲೂ ಆ ಕಾರಿನಲ್ಲಿ ನಾನು ಆರಾಮವಾಗೇ ಡ್ರೈವ್ ಮಾಡುತ್ತೇನೆ. ಕಾರು ಇರುವುದು ದೂರ ಪ್ರಯಾಣಕ್ಕೆ. ಹೊಸದಾದರೇನು? ಹಳೆಯದಾದರೇನು ಉದ್ದೇಶ ಪ್ರಯಾಣವೇ ಹೊರತು ಮತ್ತೇನಲ್ಲ. ಹೊಸ ಕಾರು ಕೊಂಡರೆ ಅದು ಇಂಧನ ಇಲ್ಲದೆ ಓಡುತ್ತದೆಯೇ? ಇಲ್ಲವಾದ್ದರಿಂದ ನನ್ನಲ್ಲಿ ಹಳೇ ಕಾರೇ ಇರಲಿ. ನಾನ್ಯಾಕೆ ಹೊಸ ಕಾರನ್ನು ಕೊಂಡು ಸಾಲಗಾರನಾಗಬೇಕು? ಎಂಬುದು ಅವರ ವಾದ.

ಯಾವುದೇ ಕಂಪನಿಯೂ ಹಳೇ ಕಾರನ್ನು ಹೊಸದಕ್ಕೆ ಪರಿವರ್ತನೆ ಮಾಡುವುದಿಲ್ಲ. ನಾವು ನಮ್ಮ ಕಾರು ಮಾರಿದರೆ ಬದಲಾಗಿ ಮತ್ತಷ್ಟು ಹಣ ಹೂಡಲೇಬೇಕು. ಇಷ್ಟಾಗಿಯೂ ಹಾಗೆ ಮಾಡುವುದರಿಂದ ಉಪಯೋಗವೇನು, ಮತ್ತಷ್ಟು ಸಾಲ ಮಾಡಿದಂತಲ್ಲವೇ? ಎಂಬ ಪ್ರಶ್ನೆ ಆಲೋಚಿಸುವಂತಹುದು.

ಹೀಗೆ ಹೊಸದಾದ ವಸ್ತುಗಳನ್ನು ಕಂತುಗಳಲ್ಲಿ ಕೊಳ್ಳುವವರು ಕಂತಿನ ಹಣ ಗಮನಿಸುವರೇ ವಿನಃ, ಕಂತುಗಳು ಮುಗಿದಾಗ ತಾವೆಷ್ಟು ಹೆಚ್ಚುವರಿ ಹಣ ಕೊಟ್ಟೆವು ಎಂಬುದನ್ನು ಗಮನಿಸುವುದಿಲ್ಲ. ಇತ್ತೀಚೆಗೆ ಒಬ್ಬರು ಸಾಲ ಮಾಡಿ ಮನೆ ಕಟ್ಟಿಸಿದರು. ಪ್ರತಿ ತಿಂಗಳೂ ಸಾಲದ ಕಂತು ಕಟ್ಟಬೇಕು. ಅದು ಸ್ವಲ್ಪ ದುಬಾರಿಯೇ. ಹಾಗಾಗಿ ಕಟ್ಟಿದ ಮನೆಗೆ ತಾವು ವಾಸಕ್ಕೆ ಹೋಗದೆ ಅದನ್ನು ಬಾಡಿಗೆಗೆ ನೀಡಿದರು. ಬಾಡಿಗೆಯಿಂದ ಬರುವ ಹಣದ ಜೊತೆಗೆ ಮತ್ತಷ್ಟು ಹಣ ಸೇರಿಸಿ ಕಂತು ಕಟ್ಟುವಂತಾಯಿತು. ಈ ಕಡೆ ಹೊಸದಾಗಿ ಕಟ್ಟಿದ ಮನೆಯಲ್ಲಿ ವಾಸಿಸಿದಂತೆಯೂ ಅಲ್ಲ. ಆ ಕಡೆ ಈ ಮನೆಗಾಗಿ ಮಾಡಿದ ಸಾಲಕ್ಕೆ ಕೈಯಿಂದ ಸೇರಿಸಿ ಕಂತಿನ ಹಣ ಕಟ್ಟಬೇಕು. ಇದು ದುಬಾರಿ ಎನಿಸಿದಾಗ ಅವರು ಮನೆ ಮಾರುವ ಯೋಚನೆ ಮಾಡಬೇಕಾಯಿತು. ಅಷ್ಟರಲ್ಲಿ ಕಂತಿನ ಬಾಬ್ತು ಸಾಕಷ್ಟು ಹಣವನ್ನು ಕಟ್ಟಿದ್ದರು. ಕೊನೆಗೆ ಇನ್ನೆಷ್ಟು ಕಟ್ಟಬೇಕು? ಎಂದು ಕೇಳಿದರೆ, ಈವರೆವಿಗೆ ನೀವು ಕಟ್ಟಿದ್ದೆಲ್ಲಾ ಬಡ್ಡಿಗೆ ಹೋಗಿದೆ. ಅಸಲು ಹಾಗೇ ಇದೆ. ಈಗ ಒಟ್ಟಿಗೆ ಕಟ್ಟಿದರೆ ಒಂದಷ್ಟು ದಂಡವನ್ನೂ ಪಾವತಿಸಬೇಕಾಗುತ್ತದೆ ಎಂಬ ಉತ್ತರ ಬಂದಿತು. ಹೀಗೆ ನಮ್ಮ ಸಾಮರ್ಥ್ಯವನ್ನು ಗಮನಿಸದೆ ಸಾಲ ಮಾಡುವುದರಿಂದ ತೊಂದರೆಯೇ ಜಾಸ್ತಿಯಾಗುತ್ತದೆ.

ನಮ್ಮಲ್ಲಿ ಒಂದು ಒಳ್ಳೆಯ ಮಾತಿದೆ. 'ಲೆಕ್ಕ ಬರೆದು ಹಣ ಕೊಡು ಹಾಗೂ ಹಣ ಪಡೆದು ಲೆಕ್ಕ ಬರೆದುಕೋ' ಎಂದು. ಬಹಳ ಅರ್ಥಗರ್ಭಿತವಾದ ಮಾತುಗಳಿವು. ಕೆಲವರು ಸ್ನೇಹದ ಕಾರಣ ಸ್ನೇಹಿತರಿಗೆ ಹಣವನ್ನು ಸಾಲ ಎಂದು ಕೊಡುತ್ತಾರೆ. ಪಡೆದವರೂ ಕೆಲವೇ ದಿನಗಳಲ್ಲಿ ವಾಪಸು ಕೊಡುವುದಾಗಿ ಹೇಳುತ್ತಾರೆ. ಇದನ್ನು ನಾವು ಎಲ್ಲೂ ಬರೆದುಕೊಳ್ಳುವುದಿಲ್ಲ. ಸ್ನೇಹಿತ ಏನೋ ಕಷ್ಟ ಎಂದು ಸಾಲ ಕೇಳಿದ್ದಾನೆ ಎಂದು ಕೊಟ್ಟು ಬಿಡುತ್ತಾರೆ. ಹಾಗೆಯೇ ಸಾಲ ಪಡೆದವರು ಹೇಳಿದ್ದಂತೆ ಹಣ ಕೊಡುವುದಿಲ್ಲ. ಹಣ ಕೊಟ್ಟವರು ಸಂಕೋಚದಿಂದ ಹಣ ಕೇಳದಿದ್ದರೆ, ಅದನ್ನೇ ದುರ್ಬಳಕೆ ಮಾಡಿಕೊಂಡು ಹಣ ಮರುಪಾವತಿಸುವುದೇ ಇಲ್ಲ. ಈ ರೀತಿ ಹತ್ತಾರು ಜನರಿಗೆ ಸಾಲ ನೀಡಿದವರು ಕೊನೆಗೆ ತಾವೇ ಸಾಲ ಮಾಡಬೇಕಾಗಿ ಬಂದುಬಿಡುತ್ತದೆ.

ನನ್ನ ಪರಿಚಿತರೊಬ್ಬರು ಹೀಗೇ ಒಂದು ವ್ಯಾಪಾರ ಆರಂಭಿಸಿದರು. ಅದು ಎಲೆಕ್ಟ್ರಾನಿಕ್ ವಸ್ತುಗಳ ಮಾರಾಟ. ಊರಿಂದೂರಿಗೆ ಹೋಗಿ ಅಲ್ಲಿನ ಅಂಗಡಿಗಳವರನ್ನು ಪರಿಚಯ ಮಾಡಿಕೊಂಡು ತಮ್ಮ ವಸ್ತುಗಳನ್ನು ಮಾರಾಟ ಮಾಡಲು ಕೋರುತ್ತಿದ್ದರು. ನಿಮ್ಮ ವಸ್ತು ಇಲ್ಲೇ ಇಟ್ಟು ಹೋಗಿ, ಮಾರಾಟವಾದ ನಂತರ ಹಣ ತೆಗೆದುಕೊಂಡುಹೋಗಿ ಎಂದು ಅಂಗಡಿಯವರು ಹೇಳುತ್ತಿದ್ದರು. ಇವರು ಹಾಗೇ ಹಲವಾರು ಅಂಗಡಿಗಳಿಗೆ ಪದಾರ್ಥ ನೀಡಿದರು. ಅದೂ ಬೇರೆ ಬೇರೆ ಊರುಗಳಲ್ಲಿ. ಕೆಲ ಸಮಯದ ನಂತರ ವಸೂಲಿಗೆ ಹೋದರೆ, ಮಾರಾಟವಾಗಿಲ್ಲ ಎಂದೋ, ಇನ್ನೊಮ್ಮೆ ಕೊಡುತ್ತೇವೆ ಎಂದೋ ಸಬೂಬು ಹಾಕುತ್ತಿದ್ದರು. ಇವರು ಊರೂರು ಸುತ್ತಿ ಹಣ ಕಳೆದುಕೊಂಡರೇ ವಿನಃ ಅವರಿಗೆ ಹಣ ವಾಪಸ್ಸು ಬರಲೇ ಇಲ್ಲ. ಇವರಲ್ಲಿ ಸರಿಯಾದ ಲೆಕ್ಕ ಹಾಗೂ ದಾಖಲೆಯೇ ಇಲ್ಲದೆ ಕೊನೆಗೆ ಎಲ್ಲವನ್ನು ಕೈಬಿಟ್ಟು ಮಾನಸಿಕ ರೋಗಿಯಾದರು. ಲೆಕ್ಕ ಬರೆದುಕೊಳ್ಳುವುದು ಹಾಗೂ ನಿಗದಿತ ದಾಖಲೆ ಪಡೆಯುವುದು ಹಾಗೂ ಮರುಪಾವತಿಗೆ ಸಮಯ ನಿಗದಿಪಡಿಸದಿದ್ದರೆ ಹೀಗಾಗುತ್ತದೆ.

ಆದರೆ ಕಂತಿನಲ್ಲಿ ವಸ್ತು ಕೊಡುವವರು ಸರಿಯಾದ ದಾಖಲೆ ಇಲ್ಲದೆ ಕೊಡುವುದಿಲ್ಲ. ಆರಂಭದಲ್ಲಿ ಬಹಳ ವಿಶ್ವಾಸದಿಂದ ಮಾತನಾಡುವ ಅವರು ನಿಗದಿತ ಕಂತು ಬಾರದಿದ್ದಲ್ಲಿ ಬಲವಂತದ ಹಾದಿ ಹಿಡಿಯುತ್ತಾರೆ. ಮರ್ಯಾದೆಗೆ ಅಂಜುವವರು ಮತ್ತೊಂದು ಕಡೆ ಸಾಲ ತಂದಾದರೂ ಅವರ ಹಣ ಪಾವತಿಸಬೇಕಾಗುತ್ತದೆ. ಇದರ ಮತ್ತೊಂದು ಭಾಗವೆಂದರೆ ಸಾಲ ಪಡೆದವರು ವಾಪಸ್ಸು ನೀಡುವ ಹಣದ ಲೆಕ್ಕ ಬರೆದುಕೊಳ್ಳುವುದು. ಮರೆವು ಸಾಮಾನ್ಯ ಖಾಯಿಲೆ. ನಮಗೆ ಮರೆವಿದೆ ಎಂದಾದಾಗ ಅದನ್ನು ದುರುಪಯೋಗಪಡಿಸಿಕೊಳ್ಳುವವರೇ ಜಾಸ್ತಿ. ನಾವು ಹಣ ವಾಪಸು ಪಡೆದು ಬರೆದುಕೊಳ್ಳದಿದ್ದಾಗ ಕೆಲ ಸಮಯದ ನಂತರ ಅಂದು ನಾನು ಹೆಚ್ಚು ಹಣ ಕೊಟ್ಟಿದ್ದೆ ಎಂದು ಅವರುಗಳು ವಾದಿಸಬಹುದು.

ಹಾಗಾಗಿ ಹಣದ ವ್ಯವಹಾರ ಅಗತ್ಯಕ್ಕೆ ತಕ್ಕಂತಿದ್ದರೆ ಉತ್ತಮ. ಹೊಸದಾಗಿ ಕಂತಿನಲ್ಲಿ ಪಡೆಯುವ ವಸ್ತುವಿನ ಅಗತ್ಯ ನನಗೆ ಎಷ್ಟಿದೆ ಎಂದು ಮೊದಲು ಆಲೋಚಿಸಬೇಕು. ಅನೇಕರು ಹೀಗೆ ಹಲವಾರು ವಸ್ತುಗಳನ್ನು ತಂದು ಅದನ್ನು ಉಪಯೋಗಿಸದೇ ಮೂಲೆಗುಂಪು ಮಾಡಿರುವುದನ್ನು ನಾವು ಕಾಣಬಹುದು. ಹಣವಾಗಲೀ ಯಾವುದೇ ವಸ್ತುವಾಗಲೀ ನಮಗೆ ಅತ್ಯಗತ್ಯ ಎಂದು ಕಂಡುಬರುವವರೆಗೂ ಖರೀದಿಸಬಾರದು. ಒಂದು ವೇಳೆ ಖರೀದಿಸುವುದಾದರೆ ಅದಕ್ಕೆ ಕೊಡುವಷ್ಟು ಹಣ ನಮ್ಮಲ್ಲಿದ್ದರೆ ಮಾತ್ರ ಖರೀದಿಸಬೇಕು. ಕಂತು ಮುಗಿದಾಗ ಎಷ್ಟು ಹೆಚ್ಚುವರಿ ಪಾವತಿಸಿದ್ದೇವೆ, ಆ ಹಣಕ್ಕಾಗಿ ಎಷ್ಟು ಶ್ರಮ ಪಡಬೇಕಾಯಿತು ಎಂದೂ ಯೋಚಿಸಬೇಕು. ಹಣದ ವಿಷಯದಲ್ಲಿ ಲೆಕ್ಕ ಬಹುಮುಖ್ಯವಾದ ಪಾತ್ರ ವಹಿಸುತ್ತದೆ ಎಂಬುದನ್ನು ಮರೆಯಬಾರದು.

ಪೊಲೀಸರ ವರ್ಗಾವಣೆ 2 ವರ್ಷಕ್ಕೆ ವಿಸ್ತರಣೆ

ವಿಧಾನಸಭೆ, ಫೆ.21– ರಾಜ್ಯ ವಿಧಾನ ಸಭಾ ಅಧಿವೇಶನದಲ್ಲಿ ಹಲವು ವಿಧೇಯಕಗಳನ್ನು ಮಂಡಿಸಿ ಅಂಗೀಕಾರಕ್ಕೆ ತರಲಾಯಿತು. ಭೂಕಂದಾಯ ತಿದ್ದುಪಡಿ ವಿಧೇಯಕ–2024, ಕರ್ನಾಟಕ ಪೊಲೀಸ್ ತಿದ್ದುಪಡಿ ವಿಧೇಯಕ–2024, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, ರಾಜ್ಯದ 30 ಹಳೆಯ ಕಾನೂನುಗಳನ್ನು ನಿಷ್ಕ್ರಿಯಗೊಳಿಸುವ ವಿಧೇಯಕ–2024, 2015ರ ಕುಲಾಂತರಿ ತಳಿ ವಿಧೇಯಕ ವಾಪಸಾತಿ, ಹುಕ್ಕಾಬಾರ್ ನಿಷೇಧ ಮತ್ತು ಸಿಗರೇಟ್ ಮಾರಾಟ ನಿಯಮಾವಳಿ ಸೇರದಂತೆ ಹಲವು ವಿಧೇಯಕಗಳನ್ನು ಮಂಡಿಸಿ ಅಂಗೀಕರಿಸಲಾಯಿತು.

ರಾಜ್ಯ ವಿಧಾನಸಭಾ ಅಧಿವೇಶನದಲ್ಲಿ ಹಲವು ಇಲಾಖೆಗಳ ವಿವಿಧ ವಿಧೇಯಕಗಳನ್ನು ಮಂಡಿಸಿ ಅಂಗೀಕರಿಸಲಾಯಿತು. ಕೆಲವು ವಿಧೇಯಕಗಳನ್ನು ವಿಪಕ್ಷಗಳೂ ಒಪ್ಪಿಕೊಂಡರೆ, ಮತ್ತೆ ಕೆಲವು ವಿಧೇಯಕಗಳಿಗೆ ವಿಪಕ್ಷಗಳಿಂದ ಭಾರಿ ವಿರೋಧ ವ್ಯಕ್ತವಾಗಿದೆ. ವಿರೋಧದ ನಡುವೆಯೂ ಪೂರ್ಣ ಬಹುಮತವಿರುವ ಕಾಂಗ್ರೆಸ್ ಸರ್ಕಾರದಿಂದ ಹಲವು ವಿಧೇಯಕಗಳನ್ನು ಅಂಗೀಕರಿಸಲಾಗಿದೆ. ರಾಜ್ಯಪಾಲರ ಅಂಕಿತ ಸಿಕ್ಕ ನಂತರ ವಿಧೇಯಕಗಳು ಕಾಯ್ದೆಗಳಾಗಿ ಜಾರಿಗೆ ಬರುತ್ತವೆ.

ಕರ್ನಾಟಕ ಪೊಲೀಸ್ ತಿದ್ದುಪಡಿ ವಿಧೇಯಕ–2024: ಕರ್ನಾಟಕ ಪೊಲೀಸ್ ಇಲಾಖೆಯ ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗಳ ವರ್ಗಾವಣೆ ಅವಧಿ ಕನಿಷ್ಠ 2 ವರ್ಷಕ್ಕೆ ನಿಗದಿಗೊಳಿಸಲು ಅವಕಾಶ ಮಾಡಿಕೊಡುವ ವಿಧೇಯಕವನ್ನು ಮಂಡಿಸಿ ಅಂಗೀಕರಿಸಲಾಯಿತು. ಈ ವಿಧೇಯಕದ ಮೇಲೆ ಗೃಹ ಸಚಿವ ಡಾ.ಜಿ.ಪರಮೇಶ್ವರ್



ಚರ್ಚೆ ಮಾಡಿದರು. ಪೊಲೀಸರ ವರ್ಗಾವಣೆ ಅವಧಿ 1 ವರ್ಷದಿಂದ 2 ವರ್ಷಕ್ಕೆ ಏರಿಕೆ ಮಾಡಲು ಅವಕಾಶ ಇರುವ ವಿಧೇಯಕವಾಗಿದೆ. ಒಂದು ವರ್ಷವಾದ ನಂತರ ವರ್ಗಾವಣೆ ಮಾಡಬೇಕು ಅಂತ ಹಾಲಿ ನಿಯಮ ಇದೆ. ಒಂದೇ ವರ್ಷಕ್ಕೆ ವರ್ಗಾವಣೆಯಾದರೆ ಪ್ರಕರಣಗಳ ತನಿಖೆ, ವಿಚಾರಣೆಗೆ ತೊಡಕು ಆಗಲಿದೆ. ಆದ್ದರಿಂದ ಪೊಲೀಸರ ವರ್ಗಾವಣೆ ಅವಧಿಯಲ್ಲಿ 2 ವರ್ಷಕ್ಕೆ ಏರಿಕೆ ಮಾಡುವ ವಿಧೇಯಕ ಮಂಡಿಸಲಾಗುತ್ತಿದೆ ಎಂದರು. ಇದನ್ನು ವಿಪಕ್ಷ ಸದಸ್ಯರೂ ಸ್ವಾಗತ ಮಾಡಿದರು. ಈ ವಿಧೇಯಕಕ್ಕೆ ಅಂಗೀಕಾರ ಕೊಡಲಾಯಿತು.

ಹಳೆಯ ಕಾನೂನುಗಳ ರದ್ದುಗೊಳಿಸಲು ವಿಧೇಯಕ: ಕರ್ನಾಟಕದ ಕೆಲವು ಅಧಿನಿಯಮಗಳು ಮತ್ತು ಪ್ರಾದೇಶಿಕ ಕಾನೂನುಗಳನ್ನು ನಿರಸನಗೊಳಿಸುವ ವಿಧೇಯಕ–2024 ಅನ್ನು ಕಾನೂನು ಸಚಿವ ಹೆಚ್.ಕೆ. ಪಾಟೀಲ್ ಮಂಡನೆ ಮಾಡಿದರು. ಹಳೆಯ ಕಾನೂನುಗಳನ್ನು ನಿಷ್ಕ್ರಿಯಗೊಳಿಸಲು ಅವಕಾಶ ನೀಡುವ ವಿಧೇಯಕ ಇದಾಗಿದೆ. ಕಾಲಾನುಕ್ರಮದಲ್ಲಿ ಪ್ರಸ್ತುತತೆ ಕಳೆದುಕೊಂಡ, ಬಳಕೆಯಲ್ಲಿರದ ಕಾನೂನುಗಳ ನಿಷ್ಕ್ರಿಯಗೊಳಿಸಲು ಈ ವಿಧೇಯಕದಲ್ಲಿ ಅವಕಾಶ ಕೊಡಲಾಗಿದೆ. ರಾಜ್ಯ ಕಾನೂನು ಆಯೋಗದ ಶಿಫಾರಸು ಅನ್ವಯ ಹಳೆಯ ಕಾನೂನುಗಳ ರದ್ದುಗೊಳ್ಳಲಿವೆ. ಸ್ಟೇಟ್ ಬ್ಯಾಂಕ್ ಅಧಿನಿಯಮ, ಹೈದರಾಬಾದ್ ಅಧಿನಿಯಮ ಎಲ್–19, ಜಾಗೀರುಗಳ ರದ್ದತಿ, ಪಿಂಚಣಿ ಅಧಿನಿಯಮ, ಟ್ರಾವಲ್ ಮಾರ್ಗಗಳ ಅಧಿನಿಯಮ, ಮೈಸೂರು ಅಧಿನಿಯಮ, ನಂಬೂದರಿ ಅಧಿನಿಯಮ, ಬಾಂಬೆ ತಿದ್ದುಪಡಿ ಅಧಿನಿಯಮ, ದೇವಾಲಯಗಳ ಪ್ರವೇಶ ಅಧಿಕೃತಗೊಳಿಸುವುವಿಕೆ ಅಧಿನಿಯಮ ಸೇರಿ 30 ಕಾನೂನುಗಳನ್ನು ನಿಷ್ಕ್ರಿಯಗೊಳಿಸುವ ವಿಧೇಯಕ ಇದಾಗಿದೆ.

ಅನಧಿಕೃತ ಹುಕ್ಕಾಬಾರ್ ನಡೆಸಿದರೆ 3 ವರ್ಷ ಜೈಲು, 1 ಲಕ್ಷ ರೂ. ದಂಡ: ರಾಜ್ಯದಲ್ಲಿ ಈಗಾಗಲೇ ಹುಕ್ಕಾಬಾರ್ ನಿಷೇಧಿಸಲಾಗಿದೆ. ಒಂದು ವೇಳೆ ಅನಧಿಕೃತ ನಡೆಸಿದರೆ ಒಂದು, ಮೂರು ವರ್ಷ ಜೈಲು ಶಿಕ್ಷೆ ವಿಧಿಸುವುದು. ಜೊತೆಗೆ, 50 ಸಾವಿರ ರೂ.ಗಳಿಂದ 1 ಲಕ್ಷ ರೂ.ವರೆಗೆ ದಂಡ ವಿಧಿಸುವ ವಿಧೇಯಕ ಅಂಗೀಕರಿಸಲಾಯಿತು. ಇದರಲ್ಲಿ 21 ವರ್ಷದೊಳಗಿನವರಿಗೆ ಸಿಗರೇಟ್ ಮಾರಾಟ ಮಾಡುವಂತಿಲ್ಲ ಹಾಗೂ ಶಾಲೆಯಿಂದ 100 ಮೀಟರ್ ಅಂತರದಲ್ಲಿ ವ್ಯಾಪಾರ ಮಾಡುವಂತಿಲ್ಲ ಎಂಬ ನಿಯಮಗಳೂ ಸೇರಿವೆ. ಹುಕ್ಕಾಬಾರ್ ನಿಷೇಧ, ಸಿಗರೇಟ್ ಸೇವನೆ, ವ್ಯಾಪಾರ ಉತ್ಪಾದನೆ ಮತ್ತು ಸರಬರಾಜು ತಿದ್ದುಪಡಿ ವಿಧೇಯಕ ಮಂಡಿಸಲಾಗಿದ್ದು, ಇದಕ್ಕೂ ಅಂಗೀಕಾರ ಸಿಕ್ಕಿದೆ.


2015ನೇ ಸಾಲಿನ ಕುಲಾಂತರಿ ತಳಿ ವಿಧೇಯಕ ವಾಪಸ್: 2024ನೇ ಸಾಲಿನ ಭೂಕಂದಾಯ ತಿದ್ದುಪಡಿ ವಿಧೇಯಕ ಮಂಡನೆ ಮಾಡಲಾಯಿತು. ನಂತರ ಈ ವಿಧೇಯಕವನ್ನು ಅಂಗೀಕಾರ ಮಾಡಲಾಯಿತು. ಇದೇ ವೇಳೆ 2015ನೇ ಸಾಲಿನ ಕುಲಾಂತರಿ ತಳಿ ವಿಧೇಯಕವನ್ನು ಸರ್ಕಾರದಿಂದ ವಾಪಸ್ ಪಡೆಯಲಾಯಿತು. ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನೂ ಅಂಗೀಕರಿಸಲಾಯಿತು.


ಕಬ್ಬು ಎಫ್‌ಆರ್‌ಪಿ ದರ ಪ್ರತಿ ಟನ್‌ಗೆ 25 ರೂ. ಹೆಚ್ಚಳ


ನವದೆಹಲಿ, ಫೆ. 21– ಕೇಂದ್ರ ಸರ್ಕಾರ ಕಬ್ಬು ಬೆಳೆಗಾರರಿಗೆ ಸಿಹಿ ಸುದ್ದಿ ನೀಡಿದೆ. ಕಬ್ಬಿನ ಖರೀದಿ ದರ ಹೆಚ್ಚಳಕ್ಕೆ ಕೇಂದ್ರ ಸಂಪುಟ ಸಭೆ ಅನುಮತಿ ನೀಡಿದೆ. ಪ್ರತಿ ಕ್ವಿಂಟಲ್‌ಗೆ 315 ರೂಪಾಯಿಯಿಂದ 340 ರೂ.ಗೆ ಏರಿಕೆ ಮಾಡಿದೆ. ಇದರೊಂದಿಗೆ ಕಬ್ಬಿನ ಎಫ್‌ಆರ್‌ಪಿ ಪ್ರತಿ ಕ್ವಿಂಟಲ್‌ಗೆ 25 ರೂ. ಹೆಚ್ಚಿಸಿದಂತಾಗಿದೆ. ಈ ಬಗ್ಗೆ ಕೇಂದ್ರ ಪ್ರಸಾರ ಮತ್ತು ಕ್ರೀಡಾ ಖಾತೆ ಸಚಿವ ಅನುರಾಗ್ ಠಾಕೂರ್ ಮಾಹಿತಿ ನೀಡಿದ್ದಾರೆ.


ಸಂಪುಟ ಸಭೆ ಬಳಿಕ ಸುದ್ದಿಗಾರೊಂದಿಗೆ ಮಾತನಾಡಿದ ಕೇಂದ್ರ ಸಚಿವ ಅನುರಾಗ್ ಠಾಕೂರ್, ಕಬ್ಬಿನ ದರ ಪ್ರತಿ ಕ್ವಿಂಟಾಲ್‌ಗೆ 340 ರೂಪಾಯಿಗೆ ಹೆಚ್ಚಳ ಮಾಡಲಾಗಿದೆ. ಇದು ಕಬ್ಬಿನ ಐತಿಹಾಸಿಕ ಬೆಲೆಯಾಗಿದ್ದು, ಇದು ಪ್ರಸಕ್ತ 2023–24ರ ಹಂಗಾಮಿನ ಕಬ್ಬಿನ ಎಫ್‌ಆರ್‌ಪಿಗಿಂತ ಸುಮಾರು ಶೇ.8ರಷ್ಟು ಹೆಚ್ಚಾಗಿದೆ ಎಂದು ತಿಳಿಸಿದರು.

ಜಿ.ಟಿ.ದಿನೇಶ್‌ಕುಮಾರ್, ಎ.ದೇವರಾಜ್, ಎಂ.ಜೆ.ರೂಪಾ, ಲೋಕನಾಥ ಸೇರಿ 65 ಅಧಿಕಾರಿಗಳಿಗೆ ಪದೋನ್ನತಿ


ದಿನೇಶ್‌ಕುಮಾರ್


ಆರ್.ಲೋಕನಾಥ


ಎ. ದೇವರಾಜ್


ಎಂ.ಜೆ. ರೂಪಾ

ಮೈಸೂರು, ಫೆ 21(ಆರ್‌ಕೆ)– ಮೈಸೂರು ಭಾಗದ ನಾಲ್ವರು ಸೇರಿ ರಾಜ್ಯದ 65 ಮಂದಿ ಕೆಎಎಸ್ (ಆಯ್ಕೆ ಶ್ರೇಣಿ) ವೃಂದದ ಅಧಿಕಾರಿಗಳಿಗೆ ಸೂಪರ್ ಟೈಂ ಸ್ಕೇಲ್ ಹುದ್ದೆಗೇರಿಸಿ ಸರ್ಕಾರ ಇಂದು ಅಧಿಸೂಚನೆ ಹೊರಡಿಸಿದೆ.

ಮುಡಾ ಆಯುಕ್ತ ಜಿ.ಟಿ. ದಿನೇಶ್ ಕುಮಾರ್, ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯುಕ್ತ ಎ.ದೇವರಾಜ್, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಹಿಂದಿನ ಮೈಸೂರು ಹೆಚ್ಚುವರಿ ಜಿಲ್ಲಾಧಿಕಾರಿ ಆರ್. ಲೋಕನಾಥ ಹಾಗೂ ಮೈಸೂರು ಮಹಾನಗರ ಪಾಲಿಕೆ ಉಪ ಆಯುಕ್ತೆ ರೂಪಾ ಅವರನ್ನು ಕೆಎಎಸ್ ಆಯ್ಕೆ ಶ್ರೇಣಿಯಿಂದ ಸೂಪರ್ ಟೈಂ ವೃಂದದ ಹುದ್ದೆಗೆ ಮೇಲ್ದರ್ಜೆಗೇರಿಸಲಾಗಿದೆ.

ಆ ಮೂಲಕ ರಾಜ್ಯದ ಒಟ್ಟು 65 ಕೆಎಎಸ್ ಅಧಿಕಾರಿಗಳ ಹುದ್ದೆಗಳನ್ನು ಮೇಲ್ದರ್ಜೆಗೇರಿಸಿ ಪ್ರಸ್ತುತ ಸ್ಥಳದಲ್ಲೇ ಕರ್ತವ್ಯದಲ್ಲಿ ಮುಂದುವರಿಯುವಂತೆ ಸರ್ಕಾರ ಆದೇಶಿಸಿದೆ. ಅದೇ ರೀತಿ ಸೂಪರ್ ಟೈಂ ಸ್ಕೇಲ್ ವೃಂದದ ಕೆಎಎಸ್ ಅಧಿಕಾರಿಯಾದ ಮೈಸೂರಿನ ಆಡಳಿತ ತರಬೇತಿ ಸಂಸ್ಥೆ ಜಂಟಿ ನಿರ್ದೇಶಕಿ ಕೆ. ರೂಪಶ್ರೀ ಅವರನ್ನು ಸೀನಿಯರ್ ಸೂಪರ್ ಸ್ಕೇಲ್ ವೃಂದದ ಅಧಿಕಾರಿಗಳನ್ನಾಗಿ ಉನ್ನತೀಕರಿಸಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಲ್ಲಿ ತಾಯ್ತನದ ಜಾಗೃತಿ ಜಾಥಾ

ಮೈಸೂರು,ಫೆ.21(ಎಂಟಿವೈ)– ತಾಯ್ತನದ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಮೈಸೂರಿನ ವಿವಿಧ ಐವಿಎಫ್ ಕೇಂದ್ರಗಳ ಸಂತಾನ ತಜ್ಞರು ಹಾಗೂ ಸಿಬ್ಬಂದಿಗಳು ಜಾಥಾ ನಡೆಸಿ ಜಾಗೃತಿ ಮೂಡಿಸಿದರು.

ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗದ ಇಂಡಿಯನ್ ಸೊಸೈಟಿ ಫಾರ್ ಅಸಿಸ್ಟೆಡ್ ರಿಪ್ರೊಡಕ್ಷನ್‌ನ ಕರ್ನಾಟಕ ಶಾಖೆಯು ಸಂತಸ ಐವಿಎಫ್ ಆಸ್ಪತ್ರೆ ಹಾಗೂ ಇನ್ನಿತರ ಕೇಂದ್ರಗಳ ಸಹಯೋಗದಲ್ಲಿ ಏರ್ಪಡಿಸಿದ್ದ ಜಾಥಾವನ್ನು ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಲೋಕನಾಥ್ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಬದಲಾದ ಜೀವನ ಶೈಲಿ, ಕಾರ್ಯದ ಒತ್ತಡ ಸೇರಿದಂತೆ ವಿವಿಧ ಕಾರಣಗಳಿಂದ ಕೆಲವರಲ್ಲಿ ಸಂತಾನೋತ್ಪತ್ತಿ ಸಮಸ್ಯೆ ಕಾಡುತ್ತಿದೆ. ಪ್ರತಿಯೊಬ್ಬ ಮಹಿಳೆಯರು ತಾಯ್ತನ ಅನುಭವಿಸಬೇಕೆಂಬ ಕನಸು ಕಂಡಿರುತ್ತಾರೆ. ಆದರೆ, ಕೆಲವು ಕಾರಣಗಳಿಂದ ತಾಯ್ತನದ ಸಮಸ್ಯೆಗೆ ತುತ್ತಾಗಿರುತ್ತಾರೆ. ವಿವಾಹವಾಗಿ ಸಾಕಷ್ಟು ವರ್ಷವಾದರೂ ತಾಯಿಯಾಗಿಲ್ಲ ಎಂದು ಮಹಿಳೆಯರು ಕೊರಗುತ್ತಿದ್ದರೆ, ಮಕ್ಕಳಾಗಲಿಲ್ಲ ಎಂದು ಪುರುಷರು ಹಾಗೂ ಕುಟುಂಬದ ಸದಸ್ಯರು ಚಿಂತೆಗೀಡಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಐವಿಎಫ್ ಸೆಂಟರ್‌ಗಳು ಹಲವು ಮಂದಿಗೆ ಮಕ್ಕಳಾಗದೇ ಇರುವ ಕೊರಗನ್ನು ನೀಗಿಸಿವೆ. ಅಲ್ಲದೆ, ಮಕ್ಕಳಾಗದೇ ಇರುವುದಕ್ಕೆ ಕಾರಣ, ಅದಕ್ಕೆ ಪರಿಹಾರ ಸೇರಿದಂತೆ ವಿವಿಧ ಮಾರ್ಗೋಪಾಯ ತಿಳಿಸುತ್ತಿವೆ ಎಂದು ಶ್ಲಾಘಿಸಿದರು. ವಿವಿಧ ರಸ್ತೆಯಲ್ಲಿ ಸಾಗಿದ ಜಾಥಾ, ಜನರಲ್ಲಿ ಜಾಗೃತಿ ಮೂಡಿಸಿತು. ಈ ಸಂದರ್ಭದಲ್ಲಿ ಇಂಡಿಯನ್ ಸೊಸೈಟಿ ಫಾರ್ ಅಸಿಸ್ಟೆಡ್ ರಿಪ್ರೊಡಕ್ಷನ್‌ನ ಕರ್ನಾಟಕ ಶಾಖೆಯ ಅಧ್ಯಕ್ಷರೂ, ಸಂತಾನತಜ್ಞರಾದ ಡಾ.ನಿವೇದಿತಾ ಶೆಟ್ಟಿ, ಖಜಾಂಚಿ ಡಾ.ಸೌಮ್ಯ ದಿನೇಶ್, ಪದಾಧಿಕಾರಿಗಳಾದ ಡಾ. ನಮ್ರತೆ.ಎಸ್., ಸಂತಾನತಜ್ಞರಾದ ಡಾ.ಯೋಗಿತಾರಾವ್, ಡಾ.ಜ್ಯೋತಿ, ಡಾ.ಪ್ರಿಯಾ ಮಹೇಶ್, ಡಾ.ಮಾಧುರಿ, ಡಾ.ಚೇತನಾ, ಡಾ. ಸೀಮಾ, ಡಾ.ಪುಷ್ಪ ಹಾಗೂ ವಿವಿಧ ಸಂತಾನ ಚಿಕಿತ್ಸಾ ಕೇಂದ್ರಗಳ ಸಿಬ್ಬಂದಿ ಮುಂತಾದವರು ಭಾಗವಹಿಸಿದ್ದರು.



ತಾಯ್ತನದ ಜಾಗೃತಿ ಮೂಡಿಸಲು ಮೈಸೂರಲ್ಲಿ ಸಂತಾನ ಚಿಕಿತ್ಸಾ ಕೇಂದ್ರಗಳ ವತಿಯಿಂದ ಜಾಗೃತಿ ಜಾಥಾ ನಡೆಸಲಾಯಿತು.

ಪ್ರೊ.ಎಲ್.ಎಸ್.ಶೇಷಗಿರಿರಾವ್ ಜನ್ಮ ಶತಾಬ್ಧಿ



ಮೈಸೂರು,ಫೆ.21–ಮೈಸೂರಿನ ರಾಮಕೃಷ್ಣನಗರದಲ್ಲಿರುವ ಕನ್ನಡ ವಿಕಾಸ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆ ವತಿಯಿಂದ ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆ ನೀಡಿರುವ ದಿವಂಗತ ಪ್ರೊ.ಎಲ್.ಎಸ್. ಶೇಷಗಿರಿರಾವ್ ಅವರ ಜನ್ಮ ಶತಾಬ್ದಿ ಅಂಗವಾಗಿ ವಿದ್ಯಾನಿಧಿ ನೀಡಿಕೆ ಮತ್ತು ಮಕ್ಕಳ ಪುಸ್ತಕ ಅಂಗಳದ ಉದ್ಘಾಟನಾ ಕಾರ್ಯಕ್ರಮ ನ್ಯಾಯಾಂಗ ಶಾಲೆಯ ರಮಾ ಗೋವಿಂದ ರಂಗಮಂದಿರದಲ್ಲಿ ಫೆ.23ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದೆ.

ಕುವೆಂಪು ಭಾಷಾ ಭಾರತೀಯ ಮಾಜಿ ಅಧ್ಯಕ್ಷ ಡಾ.ಪ್ರಧಾನ್ ಗುರುದತ್ತ ಕಾರ್ಯಕ್ರಮ ಉದ್ಘಾಟಿಸುವರು. ಬೆಂಗಳೂರಿನ ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ಅವರು ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರ ಕನ್ನಡ ಕಾಯಕ ಕುರಿತು ಮಾತನಾಡಲಿದ್ದಾರೆ. ಜೆಎಸ್‌ಎಸ್ ಕಾಲೇಜಿನ ಸ್ನಾತಕೋತ್ತರ ಕೇಂದ್ರದ ಸಹಾಯಕ ಪ್ರಾಧ್ಯಾಪಕ ಡಾ.ಶಿವಕುಮಾರ ಡಿ.ಬಿ. ಅವರು 'ಪ್ರೊ.ಎಲ್.ಎಸ್.ಶೇಷಗಿರಿ ರಾವ್ ಅವರ ಬದುಕು–ಬರಹ (ಸಣ್ಣ ಕತೆ)' ಕುರಿತು ಮಾತನಾಡಲಿದ್ದಾರೆ. ಶ್ರೀಮತಿ ಭಾರತಿ ಶೇಷಗಿರಿರಾವ್ ಉಪಸ್ಥಿತರಿರುವರು. ಸಂಸ್ಥೆಯ ಅಧ್ಯಕ್ಷ ಡಾ.ಯತೀಂದ್ರ ಸಿದ್ದರಾಮಯ್ಯ ಅಧ್ಯಕ್ಷತೆ ವಹಿಸುವರು.



ರಾಷ್ಟ್ರಮಟ್ಟದ ಜೆಇಇ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಅತ್ಯುತ್ತಮ ಸಾಧನೆ ಮಾಡಿರುವ ಮೈಸೂರಿನ ದಕ್ಷ ಪಿಯು ಕಾಲೇಜಿನ ವಿದ್ಯಾರ್ಥಿಗಳಾದ ಕೆ.ತುಷಾರ್, ಎಂ.ಪ್ರಶಾಂತ್, ಜಶ್ವಂತ್ ಚೌಧರಿ, ಪಿ.ನಿಸರ್ಗ, ಎಲ್.ಸಿ.ಲಿಖಿತಾಶ್ರೀ, ಜೆ.ಎಸ್. ತೇಜಸ್ವಿನಿ, ಎ.ಮೌಲ್ಯಶ್ರೀ ಅವರನ್ನು ಕಾಲೇಜಿನ ಅಧ್ಯಕ್ಷ ಡಾ.ಪಿ.ಜಯಚಂದ್ರರಾಜು, ಪ್ರಾಂಶುಪಾಲ ರತ್ನಾಕರ್ ಶಾನಭಾಗ್ ಸನ್ಮಾನಿಸಿ, ಅಭಿನಂದಿಸಿದರು.

ಜೆಎಸ್‌ಎಸ್ ಅಂತರ ಸಂಸ್ಥೆಗಳ ಸಾಂಸ್ಕೃತಿಕ ಮೇಳದಲ್ಲಿ ಜೆಎಸ್‌ಎಸ್ ಪಬ್ಲಿಕ್ ಶಾಲೆಗೆ ಪರ್ಯಾಯ ಪಾರಿತೋಷಕ



ಮೈಸೂರು, ಫೆ. 21– ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಸುತ್ತೂರು ಜಾತ್ರಾ ಮಹೋತ್ಸವದ ಅಂಗವಾಗಿ ಜೆಎಸ್‌ಎಸ್ ಅಂತರ ಸಂಸ್ಥೆಗಳ ಸಾಂಸ್ಕೃತಿಕ ಮೇಳ (ಸ್ಪರ್ಧೆಗಳು) ಸುತ್ತೂರು ಶ್ರೀ ಕ್ಷೇತ್ರದಲ್ಲಿ ಜರುಗಿತು. ಪಬ್ಲಿಕ್ ಶಾಲಾ ವಿಭಾಗದಲ್ಲಿ ಸೀನಿಯರ್ ಮತ್ತು ಜೂನಿಯರ್ ವಿಭಾಗದ ಸ್ಪರ್ಧೆಯಲ್ಲಿ ಜೆಎಸ್‌ಎಸ್ ಪಬ್ಲಿಕ್ ಶಾಲೆ ಜೆ.ಪಿ ನಗರದ ವಿದ್ಯಾರ್ಥಿಗಳು ವಿವಿಧ ಪ್ರಕಾರದ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು.

ಜೂನಿಯರ್ ವಿಭಾಗದಲ್ಲಿ ವಚನಾಧಾರಿತ ನೃತ್ಯದಲ್ಲಿ ಪ್ರಥಮ ಬಹುಮಾನ, ಸಮೂಹ ಶಾಸ್ತ್ರೀಯ ನೃತ್ಯದಲ್ಲಿ ಪ್ರಥಮ ಸ್ಥಾನ ಹಾಗೂ ಶಾಸ್ತ್ರೀಯ ನೃತ್ಯದಲ್ಲಿ ದ್ವಿತೀಯ ಸ್ಥಾನವನ್ನು ಪಡೆದು ಒಟ್ಟಾರೆ ಪರ್ಯಾಯ ಪಾರಿತೋಷಕವನ್ನು ಪಡೆದುಕೊಂಡಿದೆ.

ಸೀನಿಯರ್ ವಿಭಾಗದಲ್ಲಿನ ಸಮೂಹ ಗಾಯನದಲ್ಲಿ ಪ್ರಥಮ, ಶಾಸ್ತ್ರೀಯ ನೃತ್ಯದಲ್ಲಿ ಪ್ರಥಮ, ಸಮೂಹ ಶಾಸ್ತ್ರೀಯ ನೃತ್ಯದಲ್ಲಿ ತೃತೀಯ ಬಹುಮಾನವನ್ನು ಹಾಗೂ ಶಾಸ್ತ್ರೀಯ ಸಂಗೀತದಲ್ಲಿ ನಾಲ್ಕನೇ ಬಹುಮಾನ ಪಡೆದು ಒಟ್ಟಾರೆಯಾಗಿ ಪರ್ಯಾಯ ಪಾರಿತೋಷಕ ಪಡೆದುಕೊಂಡಿದೆ. ಪಬ್ಲಿಕ್ ಶಾಲೆಯ ಜೂನಿಯರ್ ಹಾಗೂ ಸೀನಿಯರ್ ಎರಡೂ ವಿಭಾಗದಲ್ಲೂ ಜೆಎಸ್‌ಎಸ್ ಶಾಲೆ ಪರ್ಯಾಯ ಪಾರಿತೋಷಕ ಪಡೆದಿದೆ.

ಕರಕುಶಲನಗರದಲ್ಲಿ ಉಚಿತ ಆರೋಗ್ಯ ತಪಾಸಣೆ



ಮೈಸೂರಿನ ಕರಕುಶಲನಗರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಮೈಸೂರು, ಫೆ. 21– ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ, ಬೆಂಗಳೂರು, ಜಿಲ್ಲಾ ಏಡ್ಸ್ ನಿಯಂತ್ರಣ ಘಟಕ ಮೈಸೂರು, ಐಸಿಟಿಸಿ ವಿಭಾಗ ಇಎಸ್‌ಐ ಆಸ್ಪತ್ರೆ, ಮೈಸೂರು, ಎನ್ ಜೆ ಆಸ್ಪತ್ರೆ ಮೈಸೂರು ವತಿಯಿಂದ ಮೈಸೂರಿನ ಕರಕುಶಲ ನಗರದ ಸಮುದಾಯ ಭವನದಲ್ಲಿ ಸಮುದಾಯ ಆಧಾರಿತ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಶಿಬಿರವನ್ನು ಡಾ. ಸತೀಶ್ ದುರ್ಗೇಶ್ ಉದ್ಘಾಟಿಸಿ ಮಾತನಾಡಿ, ಈ ಭಾಗದಲ್ಲಿರುವ ಜನರು ಉಚಿತ ಆರೋಗ್ಯ ಶಿಬಿರದಲ್ಲಿ ಭಾಗವಹಿಸಿ ವಿವಿಧ ಪರೀಕ್ಷೆಗಳನ್ನು ಮಾಡಿಸಿಕೊಂಡು ತಮ್ಮ ಆರೋಗ್ಯ ಸ್ಥಿತಿಗಳನ್ನು ಉತ್ತಮಪಡಿಸಿಕೊಳ್ಳಬೇಕು. ಉತ್ತಮ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು. ಶಿಬಿರದಲ್ಲಿ 156ಕ್ಕೂ ಹೆಚ್ಚು ಜನರು ಉಚಿತ ತಪಾಸಣೆಯ ಸದುಪಯೋಗ ಪಡೆದುಕೊಂಡರು.

ಈ ಸಂದರ್ಭದಲ್ಲಿ ಡಾ.ಮನು ಪ್ರಕಾಶ್, ಡಾ.ಸತೀಶ್ ದುರ್ಗೇಶ್, ಶ್ರೀಮತಿ ಡಾ.ಮಮತಾ ಸತೀಶ್, ಇಎಸ್‌ಐ ಆಪ್ತ ಸಮಾಲೋಚಕ ಗೋಪಾಲ್, ಹರೀಶ್ ಅಮರ್‌ನಾಥ್, ಸಿದ್ದೇಶ್ವರಪ್ಪ, ಅಂಗನವಾಡಿಯ ಶಿಕ್ಷಕಿಯರು ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿ ಹಾಜರಿದ್ದರು.

ಪಡಿತರ ಚೀಟಿ ನೋಂದಣಿ ಸರಳಗೊಳಿಸಿ




ಮೈಸೂರು,ಫೆ.21– ಸರ್ಕಾರ ಬಡವರಿಗಾಗಿ ಪಡಿತರ ಚೀಟಿ ಮೂಲಕ ಸಾರ್ವಜನಿಕ ಆಹಾರ ವಿತರಣಾ ವ್ಯವಸ್ಥೆ ಜಾರಿಗೆ ತಂದಿದೆ. ಸರ್ಕಾರ ಹೊಸ ಪಡಿತರ ಚೀಟಿ ನೋಂದಣಿ ಪ್ರಕ್ರಿಯೆ ಸರಳೀಕರಣಗೊಳಿಸಬೇಕು ಎಂದು ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್ ಒತ್ತಾಯ ಮಾಡಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಹೊಸ ಪಡಿತರ ಕಾರ್ಡ್ ನೋಂದಣಿದಾರರಿಗೆ ಸಮಸ್ಯೆಯಾಗುತ್ತಿದ್ದು, ತಿಂಗಳಿಗೆ 3 ದಿನಗಳ ಮಾತ್ರ ನೋಂದಣಿಗೆ ಸಮಯ ನಿಗದಿಪಡಿಸಿದ್ದಾರೆ. ಈ ಮೂರು ದಿನದಲ್ಲಿ ಕೇವಲ 1 ದಿನ ಮಾತ್ರ ಸರ್ವರ್ ಕೆಲಸ ಮಾಡುತ್ತಿದೆ. ಇದರಿಂದ ಫಲಾನುಭವಿಗಳಿಗೆ ಸರಿಯಾದ ಲಾಭ ಸಿಗುತ್ತಿಲ್ಲ. ಕೂಡಲೇ ಸರ್ಕಾರ ಹೊಸ ಅರ್ಜಿಗೆ ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸಿದ್ದಾರೆ.

ಬಡ ಕೂಲಿ ಕಾರ್ಮಿಕರಿಗೆ, ವಿದ್ಯಾರ್ಥಿಗಳಿಗೆ ಮಹಿಳೆಯರಿಗೆ ಹಾಗೂ ಚಿಕಿತ್ಸೆ ಪಡೆಯುವ ಬಡವರಿಗೆ ತೊಂದರೆ ಆಗುತ್ತಿದೆ. ಯಾವುದೇ ಸೌಲಭ್ಯ ಪಡೆಯಬೇಕಾದರೆ ಪಡಿತರ ಚೀಟಿ ಅವಶ್ಯಕತೆ ಉಂಟಾಗುತ್ತಿದ್ದು, ಪಡಿತರ ಚೀಟಿ ನೋಂದಣಿ ಪ್ರಕ್ರಿಯೆ ಗೊಂದಲಮಯವಾಗಿದೆ. ಎಲ್ಲ ತೊಂದರೆಗಳನ್ನು ಸರಿಪಡಿಸಿ ರಾಜ್ಯ ಸರ್ಕಾರ ಹೊಸ ಪಡಿತರ ಚೀಟಿ ನೋಂದಣಿ ಪ್ರಕ್ರಿಯೆ ಸರಳೀಕರಣಗೊಳಿಸಬೇಕು ಎಂದು ಆಗ್ರಹಿಸಿದ್ದಾರೆ.

ಧನಂಜಯ್‌ಗೆ ಪಿಎಚ್.ಡಿ ಪದವಿ



ಮೈಸೂರು,ಫೆ.21–ಡಾ.ಎಸ್.ಶ್ರೀಕಂಠಸ್ವಾಮಿ ಅವರ ಮಾರ್ಗದರ್ಶನದಲ್ಲಿ ಧನಂಜಯ ಅವರು ಮೆಟೀರಿಯಲ್ ಸೈನ್ಸ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ವಕೀಲರ ಪ್ರತಿಭಟನೆ ಹಿನ್ನೆಲೆ; ರಾಮನಗರದ ಐಜೂರು ಎಸ್‌ಐ ತನ್ವೀರ್ ಹುಸೇನ್ ಅಮಾನತು

ಬೆಂಗಳೂರು, ಫೆ.21(ಕೆಎಂಶಿ)–ರಾಮನಗರದ ಐಜೂರು ಪೊಲೀಸ್ ಠಾಣೆಯ ಪಿಎಸ್‌ಐ ತನ್ವೀರ್ ಹುಸೇನ್ ಅವರನ್ನು ಅಮಾನತು ಮಾಡಿದ್ದು, ಶೀಘ್ರವೇ ಆದೇಶ ಸಲಾಗಿದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ವಿಧಾನಸಭೆಗೆ ಬುಧವಾರ ತಿಳಿಸಿದರು.

ಬೆಳಗ್ಗೆ ಸದನ ಸಮಾವೇಶಗೊಂಡಾಗ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಮಾತನಾಡಿ, ಸದನದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯ ತೀರ್ಮಾನದಂತೆ ನಿನ್ನೆ ನಾವು ಪ್ರಸ್ತಾಪಿಸಿದ ವಕೀಲರ ಪ್ರತಿಭಟನೆ ವಿಚಾರಕ್ಕೆ ಸಂಬಂಧಿಸಿದಂತೆ ಗೃಹ ಸಚಿವರು ಹೇಳಿಕೆ ನೀಡಬೇಕು ಎಂದು ಒತ್ತಾಯಿಸಿದರು.

ಸಭಾಧ್ಯಕ್ಷ ಯು.ಟಿ.ಖಾದರ್, ಗೃಹ ಸಚಿವರಿಗೆ ಹೇಳಿಕೆ ನೀಡಲು ಅವಕಾಶ ಮಾಡಿಕೊಟ್ಟಾಗ, ಡಾ. ಜಿ.ಪರಮೇಶ್ವರ ಮಾತನಾಡಿ, ರಾಮನಗರದಲ್ಲಿ ವಕೀಲರು ಪ್ರತಿಭಟನೆ ಮಾಡಿದ ವಿಚಾರವನ್ನು ಪ್ರತಿಪಕ್ಷಗಳ ಶಾಸಕರು ಸದನದಲ್ಲಿ ಪ್ರಸ್ತಾಪಿಸಿದ್ದಾರೆ, ಘಟನೆಗೆ ಸಂಬಂಧಿಸಿದಂತೆ ರಾಮನಗರದ ಐಜೂರು ಪೊಲೀಸ್ ಠಾಣೆಯ ಪಿಎಸ್‌ಐ ತನ್ವೀರ್ ಹುಸೇನ್ ಅವರನ್ನು ಅಮಾನತು ಮಾಡುವಂತೆ ಒತ್ತಾಯಿಸಿದ್ದರು ಎಂದರು.

ಐಜೂರು ಪೊಲೀಸ್ ಠಾಣೆಯ ಪಿಎಸ್‌ಐ ಅವರನ್ನು ಅಮಾನತು ಮಾಡಿದ್ದೇವೆ. ಘಟನೆಯ ಪ್ರಮುಖ ಆರೋಪಿ ಹಾಗೂ ವಕೀಲರ ಪ್ರತಿಭಟನೆಗೆ ಕಾರಣರಾದ ಚಾಂದ್ ಪಾಷ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು.

ಘಟನೆಗೆ ಸಂಬಂಧಿಸಿದಂತೆ ಡಿವೈಎಸ್ಪಿ ನೇತೃತ್ವದಲ್ಲಿ ತನಿಖೆ ಆರಂಭಗೊಂಡಿದೆ. ಪಿಎಸ್‌ಐ ಅಮಾನತು ಮಾಡಿರುವುದರಿಂದ ತನಿಖೆಗೂ ಅನುಕೂಲವಾಗಲಿದೆ, ಬೆಂಗಳೂರಿನಲ್ಲೂ ದೊಡ್ಡ ಮಟ್ಟದಲ್ಲಿ ಪ್ರತಿಭಟನೆ ಮಾಡಲು ವಕೀಲರು ನಿರ್ಧಾರ ಮಾಡಿದ್ದರು ಎಂದರು.

ಅಶೋಕ್ ಮಾತನಾಡಿ, ಈ ಅಧಿವೇಶನದಲ್ಲಿ ಮೊದಲ ಬಾರಿಗೆ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಯಶಸ್ವಿಯಾಗಿ ಸಂಧಾನ ಮಾಡಿರುವುದಕ್ಕೆ ಸ್ಪೀಕರ್‌ರನ್ನು ಅಭಿನಂದಿಸುತ್ತೇವೆ. ನಮ್ಮ ಬೇಡಿಕೆಯಂತೆ ಕ್ರಮ ಕೈಗೊಂಡಿರುವುದಕ್ಕೆ ಅವರನ್ನೂ ಅಭಿನಂದಿಸುವುದಾಗಿ ತಿಳಿಸಿದರು.



ಮೈಸೂರು ಸದ್ವಿದ್ಯಾ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ವರ್ಗದವರು ಹಾಗೂ ಶಿಕ್ಷಕರನ್ನು ಭೇಟಿ ಮಾಡಿದ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅವರು ತಮ್ಮ 10 ವರ್ಷಗಳ ಅಧಿಕಾರ ಅವಧಿಯಲ್ಲಿ ತಂದಿರುವ ಹಾಗೂ ಕಾರ್ಯಗತ ಮಾಡಿರುವ ಪ್ರಮುಖ ಯೋಜನೆಗಳ ಬಗ್ಗೆ ತಿಳಿಸಿ ರಿಪೋರ್ಟ್ ಕಾರ್ಡ್ ಅನ್ನು ನೀಡಿದರು. ಚಿತ್ರದಲ್ಲಿ ಆಡಳಿತ ಮಂಡಳಿಯ ಗೋಪಿನಾಥ್, ಕಾಲೇಜಿನ ಪ್ರಾಂಶುಪಾಲರಾದ ವೈರಮೇಶ್, ರಾಮಚಂದ್ರಭಟ್, ಶ್ರೀಮತಿ ಶೈಲಜಾ, ಶ್ರೀಮತಿ ಸುಮಾ, 23ನೇ ವಾರ್ಡಿನ ಬಿಜೆಪಿ ಮುಖಂಡರಾದ, ಆರ್.ಪರಮೇಶ, ಶ್ರೀನಿವಾಸ್, ಶ್ರವಣ್, ಪಾಪಣ್ಣ ಲಕ್ಷ್ಮಿ, ಹರೀಶ್, ನಾಗೇಶ್ ಇತರರಿದ್ದಾರೆ.

ಕಾಂಗ್ರೆಸ್‌ಗೆ ನೇಮಕ



ವಿ. ರಿತೇಶ್

ಮೈಸೂರು, ಫೆ. 21– ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷರನ್ನಾಗಿ ವಿ. ರಿತೇಶ್ ಅವರನ್ನು ನೇಮಕ ಮಾಡಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಮಹಿಳೆಯರಲ್ಲಿ ಹೃದ್ರೋಗದ ಅರಿವು ಮೂಡಿಸಿದ ವಾಕಥಾನ್



ವಿಶ್ವ ಮಹಿಳಾ ಹೃದಯ ದಿನದ ಅಂಗವಾಗಿ 'ಗೋ ರೆಡ್' ವಾಕಥಾನ್‌ನಲ್ಲಿ ಮಹಿಳೆಯರು ಪಾಲ್ಗೊಂಡು ಗಮನ ಸೆಳೆದರು.

ಮೈಸೂರು, ಫೆ.21(ಎಂಟಿವೈ)– ವಿಶ್ವ ಮಹಿಳಾ ಹೃದಯ ದಿನದ ಅಂಗವಾಗಿ ಮಹಿಳೆಯರಲ್ಲಿ ಹೃದ್ರೋಗದ ಬಗ್ಗೆ ಅರಿವು ಮೂಡಿಸಲು 'ಗೋ ರೆಡ್' ಎಥ್ನಿಕ್ ವಾಕಥಾನ್ ಹಮ್ಮಿಕೊಳ್ಳಲಾಗಿತ್ತು.

ಕಾರ್ಡಿಯೋಲಾಜಿಕಲ್ ಸೊಸೈಟಿ ಆಫ್ ಇಂಡಿಯಾ ಮೈಸೂರು ಘಟಕ ಆಯೋಜಿಸಿದ್ದ ವಾಕಥಾನ್‌ನಲ್ಲಿ ಪಾಲ್ಗೊಂಡಿದ್ದ ಮಹಿಳೆಯರು, ಯುವತಿಯರು ಕೆಂಪು ಬಣ್ಣದ ಧಿರಿಸು ಧರಿಸಿ ಘೋಷಣಾ ಫಲಕ ಹಿಡಿದು ವಿವಿಧ ರಸ್ತೆಯಲ್ಲಿ ಸಾಗುವ ಮೂಲಕ ಮಹಿಳೆಯರ ಹೃದ್ರೋಗದ ಬಗ್ಗೆ ಅರಿವು ಮೂಡಿಸಿದರು.

ಇದೇ ವೇಳೆ ಐಸಿಎಟಿಯ ನಿರ್ದೇಶಕ ಡಾ.ಶಾಲಿನಿ ನಲ್ವಾಡ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಸಾವಿಗೆ ಹೃದ್ರೋಗವೇ ಮುಖ್ಯ ಕಾರಣವಾಗುತ್ತಿದೆ. ಹೃದ್ರೋಗದ ಬಗ್ಗೆ ಮಹಿಳೆಯರಲ್ಲಿ ಅರಿವು ಇಲ್ಲದಿರುವುದು ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಮಹಿಳೆಯರಿಗೆ ಹೃದ್ರೋಗ ಸಮಸ್ಯೆ ಅವರನ್ನು ಹಡಗುವ ಕೈಗೊಳ್ಳಬೇಕಾದ ಕ್ರಮ ಸೇರಿದಂತೆ ಇನ್ನಿತರ ಮಾಹಿತಿ ನೀಡುವ ಅಗತ್ಯವಿದೆ ಎಂದರು.

ಕಾರ್ಡಿಯೋಲಾಜಿಕಲ್ ಸೊಸೈಟಿ ಆಫ್ ಇಂಡಿಯಾ ಮೈಸೂರು ಘಟಕ ಅಧ್ಯಕ್ಷೆ ಡಾ.ವೀಣಾ.ಜೆ., ಹೃದ್ರೋಗ ಸಮಸ್ಯೆ ಕಾಣಿಸಿಕೊಳ್ಳುವುದರಿಂದ ತಪ್ಪಿಸಿಕೊಳ್ಳಲು ವಾರದಲ್ಲಿ 5 ದಿನ 30 ನಿಮಿಷ ದೈನಂದಿನ ವ್ಯಾಯಾಮ ಮಾಡಬೇಕು. ಆರೋಗ್ಯಕರ ಆಹಾರ ಅನುಸರಿಸುವ ಪದ್ಧತಿ, ತೂಕ, ರಕ್ತದೊತ್ತಡ, ಸಕ್ಕರೆಗಳು ಮತ್ತು ಕೊಲೆಸ್ಟ್ರಾಲ್ ಅನ್ನು ತಿಳಿದುಕೊಳ್ಳುವ ಬಗ್ಗೆ ಮನವರಿಕೆ ಮಾಡಿಕೊಟ್ಟರು. ವಾಕಥಾನ್‌ನಲ್ಲಿ ಕಾರ್ಡಿಯೋಲಾಜಿಕಲ್ ಸೊಸೈಟಿ ಆಫ್ ಇಂಡಿಯಾ ಮೈಸೂರು ಘಟಕದ ಉಪಾಧ್ಯಕ್ಷ ಡಾ.ಶಶಿರೇಖಾ.ಡಿ., ಕಾರ್ಯದರ್ಶಿ ಡಾ.ಹೇಮಾ ಎಸ್., ಖಜಾಂಚಿ ಡಾ.ಶ್ರೀನಿಧಿ ಹೆಗ್ಡೆ, ಇಸಿ ಸದಸ್ಯರಾದ ಡಾ.ಆನಂದ ಲಿಂಗನ್, ಡಾ.ವೀಣಾ ನಂಜಪ್ಪ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಕೊಡಗು ಗೌಡ ಸಮಾಜದ ನೂತನ ಪದಾಧಿಕಾರಿಗಳು



ಮೈಸೂರು,ಫೆ.21–ಮೈಸೂರಿನ ವಿಜಯನಗರ ಎರಡನೇ ಹಂತದಲ್ಲಿರುವ ಕೊಡಗು ಗೌಡ ಸಮಾಜದ 2022–23ನೇ ಸಾಲಿನ ವಾರ್ಷಿಕ ಮಹಾಸಭೆಯು ಸಮಾಜದ ನೂತನ ಸಭಾ ಭವನದಲ್ಲಿ ಸಮಾಜದ ಅಧ್ಯಕ್ಷ ತೋಟಂಬೈಲು ಮನೋಹರ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯಲ್ಲಿ 2023–24 ಮತ್ತು 2024–25ನೇ ದ್ವೈವಾರ್ಷಿಕ ಅವಧಿಗೆ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಕೊಂಬಾರನ ಬಸಪ್ಪ, ಉಪಾಧ್ಯಕ್ಷರಾಗಿ ಕುದುಪಜೆ ಡಾ.ಚಂದ್ರಶೇಖರ್, ಗೌರವ ಕಾರ್ಯದರ್ಶಿಯಾಗಿ ಪೊನ್ನಚ್ಚನ ನಂದಾ, ಸಹ ಕಾರ್ಯದರ್ಶಿಯಾಗಿ ನಡುಮನೆ ಎಸ್.ಚಂಗಪ್ಪ, ಕೋಶಾಧಿಕಾರಿಯಾಗಿ ನಡುವಟ್ಟೀರ ಜಿ. ಲಕ್ಷ್ಮಣ, ನಿರ್ದೇಶಕರಾಗಿ ಪಟ್ಟಡ ಶಿವಕುಮಾರ, ಹೊಸೂರು ಜಿ.ರಾಘವ, ಕುಂಟುಮನೆ ಶ್ರೀಮತಿ ಶೀಲಾ ಸೀತಮ್ಮ, ಕೊಂಬಾರನ ಸುಬ್ಬಯ್ಯ, ಕುಂಟುಮನೆ ರಮೇಶ್, ಪಾಣತ್ತಲೆ ವಸಂತ ಮತ್ತು ತೋಟಂಬೈಲು ಶ್ರೀಮತಿ ಇಂದಿರಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಫೆ.24ರಂದು ವಿದುಷಿ ರಮಾನಂದ್‌ರಿಂದ ಶಾಸ್ತ್ರೀಯ ಸಂಗೀತ

ಮೈಸೂರು,ಫೆ.21–ಮೈಸೂರಿನ ಶ್ರೀ ರಾಮಭದ್ರಯ್ಯ ಸಭಾ ಚಾರಿಟಬಲ್ ಟ್ರಸ್ಟ್ ವತಿಯಿಂದ ಶಿವರಾಂಪೇಟೆಯಲ್ಲಿರುವ ರಾಮಮಂದಿರದ ಆವರಣದಲ್ಲಿ ಫೆ.24ರಂದು ಸಂಜೆ 6 ಗಂಟೆಗೆ ತಿಂಗಳ ಸಾಂಸ್ಕೃತಿಕ ಕಾರ್ಯಕ್ರಮದ ಪ್ರಯುಕ್ತ ವಿದುಷಿ ರಮಾನಂದ್ ಅವರಿಂದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ. ಪಕ್ಕವಾದ್ಯದಲ್ಲಿ ವಿದ್ವಾನ್ ಯಶಸ್ವಿ–ಪಿಟೀಲು, ವಿದ್ವಾನ್ ಕುಮಾರಸ್ವಾಮಿ–ಮೃದಂಗದಲ್ಲಿ ಸಹಕಾರ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸುದರ್ಶನ ಕ್ರಿಯೆ ಶಿಬಿರ

ಮೈಸೂರು,ಫೆ.21–ಮೈಸೂರಿನ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಫೆ.27ರಿಂದ ಮಾ.2ರವರೆಗೆ ಆರೋಗ್ಯಕರ ಜೀವನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆ ಕಲಿಸುವ ಶಿಬಿರವನ್ನು ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಏರ್ಪಡಿಸಲಾಗಿದೆ. ಶಿಬಿರವು ಬೆಳಗ್ಗೆ 6ರಿಂದ 8.30 ಹಾಗೂ ಸಂಜೆ 6ರಿಂದ 8.30ರವರೆಗೆ ನಡೆಯಲಿದೆ. ಮಾಹಿತಿಗೆ ಮೊ. 9480476825 ಸಂಪರ್ಕಿಸುವುದು.

ಪ್ರತಿಷ್ಠಿತ ಕೃಷಿ ವಿವಿಗಳಿಂದ 33 ಹೊಸ ತಳಿ ಬಿಡುಗಡೆಗೆ ಶಿಫಾರಸು

ಬೆಂಗಳೂರು,ಫೆ.21–ರಾಜ್ಯದಲ್ಲಿ ರೋಗ ನಿರೋಧಕ, ಕೀಟ ನಿರೋಧಕ ಹಾಗೂ ಅಧಿಕ ಇಳುವರಿ ತಳಿಗಳನ್ನು ಅಭಿವೃದ್ಧಿಪಡಿಸಲು ಕೃಷಿ ವಿವಿಗಳು ನಿರಂತರವಾಗಿ ಸಂಶೋಧನೆ ನಡೆಸುತ್ತಿವೆ. 2023–24ನೇ ಸಾಲಿನಲ್ಲಿ ಒಟ್ಟು 31 ತಳಿ–ಸಂಕರಣಗಳನ್ನು ಬಿಡುಗಡೆ ಮಾಡಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ಒಟ್ಟು 33 ತಳಿ–ಸಂಕರಣಗಳನ್ನು ಬಿಡುಗಡೆ ಮಾಡಲು ಶಿಫಾರಸ್ಸು ಮಾಡಲಾಗಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಕೋಲಾರ ಶಾಸಕ ಕೊತ್ತನೂರು ಮಂಜುನಾಥ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಉತ್ತಮ ಗುಣಮಟ್ಟದ ಬಿತ್ತನೆ ಬೀಜಗಳನ್ನು ಒದಗಿಸುವ ನಿಟ್ಟಿನಲ್ಲಿ ರಾಷ್ಟ್ರಮಟ್ಟದಲ್ಲಿ ಕೇಂದ್ರೀಯ ಬೀಜ ಸಮಿತಿ ಹಾಗೂ ರಾಜ್ಯ ಮಟ್ಟದಲ್ಲಿ ರಾಜ್ಯ ಬೀಜ ಉಪಸಮಿತಿಯನ್ನು ರಚಿಸಲಾಗಿದ್ದು, ಪ್ರತಿಷ್ಠಿತ ಕೃಷಿ ವಿಶ್ವ ವಿದ್ಯಾಲಯಗಳಿಂದ ಅಭಿವೃದ್ಧಿಪಡಿಸಲಾಗುವ ರೋಗ ನಿರೋಧಕ, ಕೀಟ ನಿರೋಧಕ ಹಾಗೂ ಅಧಿಕ ಇಳುವರಿ ತಳಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಬಿಡುಗಡೆಗೆ ಕ್ರಮವಹಿಸಲಾಗುತ್ತದೆ ಎಂದರು.

ಬಿತ್ತನೆಗೆ ಲಭ್ಯವಿರುವ ಬೀಜಗಳನ್ನು, ತಳಿಗಳು, ಸಂಕರಣ ಹಾಗೂ ತಳಿಯಿಂದ ಮಾರ್ಪಡಿಸಿದ ಬೆಳೆಗಳು ಎಂದು ವಿಂಗಡಿಸಲಾಗಿದೆ. ಪ್ರತಿ ತಳಿ–ಸಂಕರಣ–ತಳಿಯಿಂದ ಮಾರ್ಪಡಿಸಿದ ಬೆಳೆಗಳಿಗೆ ನಿರ್ದಿಷ್ಟ ರೋಗ–ಕೀಟಕ್ಕೆ ನಿರೋಧಕ ಶಕ್ತಿಯಿರುತ್ತದೆ. ಅಂತರ್ನಿರ್ಹಿತ ರೋಗ–ಕೀಟಹೊರತುಪಡಿಸಿ ಇತರೆ ರೋಗ–ಕೀಟದ ಬಾಧೆ ಕಂಡುಬಂದಲ್ಲಿ ಸಸ್ಯ ಸಂರಕ್ಷಣಾ ಔಷಧಿಗಳ ಸಿಂಪಡಣೆ ಅನಿವಾರ್ಯವಾಗಿರುತ್ತದೆ ಎಂದು ಅವರು ಹೇಳಿದರು.

ಅಲ್ಲದೆ, ಹವಾಮಾನ ವೈಪರೀತ್ಯಗಳಾದ ಉಷ್ಣಾಂಶ, ತೇವಾಂಶ ಹಾಗೂ ಮಳೆಯಲ್ಲಿ ಬದಲಾವಣೆಗಳಾದಲ್ಲಿ ರೈತರು ಅನುಸರಿಸುವ ಬೇಸಾಯ ಪದ್ಧತಿಗಳಿಂದ ಕೀಟ–ರೋಗಗಳ ಬಾಧೆ ಹೆಚ್ಚಾಗಿ ಸಸ್ಯಸಂರಕ್ಷಣಾ ಔಷಧಿಗಳ ಸಿಂಪಡಣೆ ಅನಿವಾರ್ಯವಾಗಿರುತ್ತದೆ ಎಂದು ಚಲುವರಾಯಸ್ವಾಮಿ ಉತ್ತರಿಸಿದರು.

ರಾಜ್ಯದ ಎಲ್ಲಾ ವರ್ಗದ ರೈತರಿಗೆ ಗರಿಷ್ಠ 2 ಹೆಕ್ಟರ್ ಮಿತಿಯೊಳಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳನ್ನು ಸರಬರಾಜು ಮಾಡಲು 'ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ' 'ಯೋಜನೆಯಡಿ "ಬೀಜಗಳ ಪೂರೈಕೆ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮದಡಿ request for proposal ಕರೆದು ಬೇಡಿಕೆಯನ್ನುಯ ಬೀಜ ದಾಸ್ತಾನು ಮಾಡಿ ವಿತರಣೆ ಮಾಡಲಾಗುತ್ತದೆ ಎಂದು ಕೃಷಿ ಸಚಿವರು ಮಾಹಿತಿ ನೀಡಿದರು.

ರಾಜ್ಯ ಸರ್ಕಾರದ 'ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ' ಯೋಜನೆಯಡಿ 'ಬೀಜಗಳ ಪೂರೈಕೆ' ಕಾರ್ಯಕ್ರಮದಡಿ 2023–24ನೇ ಸಾಲಿನಲ್ಲಿ 6.12ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜಗಳನ್ನು ರೂ.15530.42 ಲಕ್ಷಗಳ ರಿಯಾಯಿತಿ ದರದಲ್ಲಿ 13.08 ಲಕ್ಷ ರೈತರಿಗೆ ವಿತರಿಸಲಾಗಿರುತ್ತದೆ. ರೈತ ಸಂಪರ್ಕ ಕೇಂದ್ರಗಳು ಹಾಗೂ ಗುರುತಿಸಿದ ಮಾರಾಟ ಕೇಂದ್ರಗಳ ಮುಖಾಂತರ ಸಕಾಲದಲ್ಲಿ ಬಿತ್ತನೆ ಬೀಜ ಸರಬರಾಜು ಮಾಡಲು ಹಾಗೂ ಸಮೀಪದಲ್ಲಿಯೇ ಬಿತ್ತನೆ ಬೀಜಗಳನ್ನು ದೊರಕಿಸುವ ಸಲುವಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಆಯ್ದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕವು ವಿತರಣೆಗೆ ವ್ಯವಸ್ಥೆ ಮಾಡಲಾಗಿದೆ ಎಂದರು.

ರೈತರಿಗೆ ಜೋಳ, ಸಜ್ಜೆ, ಭತ್ತ, ರಾಗಿ, ಗೋಧಿ, ಉದ್ದು, ಹೆಸರು, ಅಲಸಂದೆ, ಮೆಕ್ಕೆಜೋಳ, ತೊಗರಿ, ನೆಲಗಡಲೆ, ತೃಣಧಾನ್ಯಗಳು, ಕಡಲೆ, ಕುಸುಬೆ, ಸೋಯಾ ಅವರೆ ಮತ್ತು ಸೂರ್ಯಕಾಂತಿ ಬೆಳೆಗಳ ಬಿತ್ತನೆ ಬೀಜಗಳನ್ನು ರಿಯಾಯಿತಿ ದರದಲ್ಲಿ ಸಕಾಲದಲ್ಲಿ ವಿತರಿಸಲಾಗುತ್ತದೆ ಎಂದು ತಿಳಿಸಿದರು.

ರಾಜ್ಯದಲ್ಲಿ ನಕಲಿ ಬೀಜ ಮಾರಾಟ ತಡೆಗಟ್ಟಲು ಮತ್ತು ರೈತರಿಗೆ ಗುಣಮಟ್ಟದ ಬೀಜವಿತರಿಸಲು ರಾಜ್ಯದಲ್ಲಿ ಕೇಂದ್ರ ಸರ್ಕಾರ ರೂಪಿಸಿರುವ ಬೀಜ ಕಾಯ್ದೆಗಳು (ಬೀಜಕಾಯ್ದೆ, 1966, ಬೀಜ ಅಧಿನಿಯಮ 1968 ಮತ್ತು ಬೀಜ ನಿಯಂತ್ರಣ ಆದೇಶ, 1983) ಮತ್ತು ಅಗತ್ಯ ವಸ್ತುಗಳ ಕಾಯ್ದೆ, 1955 ಜಾರಿಯಲ್ಲಿದ್ದು, ಸದರಿ ಆದೇಶ, ಕಾಯ್ದೆಗಳನ್ವಯ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರು, ಉಪ ಕೃಷಿ ನಿರ್ದೇಶಕರು, ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಅಧಿಕಾರಿಗಳು ಹಾಗೂ ಕೃಷಿ ಪದವಿ ಹೊಂದಿರುವ ಸಹಾಯಕ ಕೃಷಿ ಅಧಿಕಾರಿಗಳನ್ನು ಬೀಜ ಪರಿವೀಕ್ಷಕರು ಎಂದು ಅಧಿಸೂಚಿಸಲಾಗಿರುತ್ತದೆ ಎಂದು ಕೃಷಿ ಸಚಿವರು ವಿವರಿಸಿದರು.

24 ಜಿಲ್ಲೆಗಳ 106 ತಾಲೂಕುಗಳಲ್ಲಿ ಕೃಷಿ ಭಾಗ್ಯ ಜಾರಿ



ಬೆಂಗಳೂರು ಫೆ 21–ಕರ್ನಾಟಕದ ಮಳೆಯಾಶ್ರಿತ ಪ್ರದೇಶಗಳಲ್ಲಿ ಸುಸ್ಥಿರ ಕೃಷಿಗೆ ಮಳೆ ನೀರನ್ನು ಒದಗಿಸಿ ಕೃಷಿ ಉತ್ಪಾದನೆ ಹೆಚ್ಚಿಸಲು 2023–24ನೇ ಸಾಲಿನ ಆಯವ್ಯಯದಲ್ಲಿ ರಾಜ್ಯದ 24 ಜಿಲ್ಲೆಗಳ 106 ತಾಲೂಕುಗಳಲ್ಲಿ (2014ರ ಅವಧಿಯ ತಾಲೂಕುಗಳು) ಕೃಷಿ ಭಾಗ್ಯ ಯೋಜನೆ ಮರು ಜಾರಿಗೊಳಿಸಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಶಿರಹಟ್ಟಿ ಶಾಸಕ ಡಾ. ಚಂದ್ರು ಲಮಾಣಿ ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜ್ಯ ಮಳೆಯಾಶ್ರಿತ ಕೃಷಿ ನೀತಿ, 2014ರನ್ವಯ 100 ಕೋಟಿಗಳ ಅನುದಾನದಲ್ಲಿ ಸದರಿ ಯೋಜನೆಯನ್ನು 2023–24ನೇ ಸಾಲಿನಲ್ಲಿ ಪ್ಯಾಕೇಜ್ ಮಾದರಿಯಲ್ಲಿ (ಕ್ಷೇತ್ರ ಬದು, ಕೃಷಿ ಹೊಂಡ, ಪಾಲಿಥೀನ್ ಹೊದಿಕೆ, ತಂತಿಬೇಲಿ, ಪಂಪ್‌ಸೆಟ್, ಸೂಕ್ಷ್ಮ ನೀರಾವರಿ ಘಟಕಗಳು) ಮಾರ್ಗಸೂಚಿ ಹಾಗೂ ಕ್ರಿಯಾ ಯೋಜನೆಯನ್ವಯ ಕಾರ್ಯಕ್ರಮ ಅನುಷ್ಠಾನ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಮುಂದಾಗಿ 2023ನೇ ಸಾಲಿನ ಬರಪೀಡಿತ ತಾಲೂಕುಗಳ ಪಟ್ಟಿಯಲ್ಲಿ ಶಿರಹಟ್ಟಿ ಮತ್ತು ಲಕ್ಷ್ಮೇಶ್ವರ ತಾಲೂಕುಗಳು ಸೇರ್ಪಡೆಯಾಗಿದ್ದರೂ ಸಹ 2023–24ನೇ ಸಾಲಿನಲ್ಲಿ ರಾಜ್ಯ ಮಳೆಯಾಶ್ರಿತ ಕೃಷಿ ನೀತಿ, 2014ರನ್ವಯ ಕೃಷಿ ಭಾಗ್ಯ ಯೋಜನೆ ರಾಜ್ಯದ ಒಣ ಕೃಷಿ ಹವಾಮಾನ ವಲಯಗಳಲ್ಲಿ ಇರುವ ತಾಲೂಕುಗಳಲ್ಲಿ ಮಾತ್ರ ಅನುಷ್ಠಾನ ಮಾಡಲಾಗುತ್ತಿದೆ. ಗದಗ ಜಿಲ್ಲೆಯ ಶಿರಹಟ್ಟಿ ಮತ್ತು ಲಕ್ಷ್ಮೇಶ್ವರ ತಾಲೂಕುಗಳು ಒಣ ಕೃಷಿ ಹವಾಮಾನ ವಲಯದಲ್ಲಿ ಇಲ್ಲದಿರುವ ಕಾರಣ ಸೇರ್ಪಡೆ ಮಾಡಲಾಗಿಲ್ಲ ಎಂದು ಹೇಳಿದರು.

2023–24ನೇ ಸಾಲಿನ ಆಯವ್ಯಯದಲ್ಲಿ ಕೃಷಿ ಭಾಗ್ಯ ಯೋಜನೆಯನ್ನು ಮರು ಜಾರಿಗೊಳಿಸಲಾಗಿದ್ದು, ರಾಜ್ಯದ ಮಳೆಯಾಶ್ರಿತ ಕೃಷಿ ನೀತಿ, 2014ರನ್ವಯ ರಾಜ್ಯದ 24 ಜಿಲ್ಲೆ 106 ತಾಲೂಕುಗಳಲ್ಲಿ ಅನುಷ್ಠಾನ ಮಾಡಲು ಮಾರ್ಗಸೂಚಿ ಹಾಗೂ ಕ್ರಿಯಾ ಯೋಜನೆಯನ್ನು ಈಗಾಗಲೇ ಜಿಲ್ಲೆಗಳಿಗೆ ನೀಡಲಾಗಿದ್ದು, ಆದರಂತೆ ಕಾರ್ಯಕ್ರಮ ಅನುಷ್ಠಾನ ಮಾಡಲಾಗುತ್ತಿದೆ. ಪ್ರಸಕ್ತ ಸಾಲಿನ ಆರ್ಥಿಕ ವರ್ಷಾಂತ್ಯಕ್ಕೆ ಕೇವಲ ಒಂದು ತಿಂಗಳು ಬಾಕಿ ಇದ್ದು, ಈ ಹಂತದಲ್ಲಿ ಯಾವುದೇ ಸೇರ್ಪಡೆ, ಬದಲಾವಣೆ ಹಾಗೂ ಆದರಂತೆಯೇ ಅನುಷ್ಠಾನ ಕಷ್ಟಸಾಧ್ಯವಾಗಿರುತ್ತದೆ ಎಂದು ಕೃಷಿ ಸಚಿವರು ಉತ್ತರಿಸಿದರು.

ಮೈಸೂರು ಮಿತ್ರ ಗುರುವಾರ 22 ಫೆಬ್ರವರಿ 2024

ಪಾಲಹಳ್ಳಿ ಕೊಲೆ ಪ್ರಕರಣ ಇಬ್ಬರ ಬಂಧನ

ಶೀಘ್ರ ಉಳಿದ ನಾಲ್ವರು ಆರೋಪಿಗಳ ಬಂಧನ

ಶ್ರೀರಂಗಪಟ್ಟಣ, ಫೆ.21– ತಾಲೂಕಿನ ಪಾಲಹಳ್ಳಿ ಗ್ರಾಮದಲ್ಲಿ ಕಳೆದ ಹತ್ತು ದಿನಗಳ ಹಿಂದೆ ನಡೆದ ಪ್ರಜ್ವಲ್ ಅಲಿಯಾಸ್ (ಪಾಪು) ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ 6 ಆರೋಪಿಗಳ ಪೈಕಿ ಇಬ್ಬರು ಪ್ರಮುಖ ಆರೋಪಿಗಳನ್ನು ಶ್ರೀರಂಗಪಟ್ಟಣ ಠಾಣಾ ಪೊಲೀಸರು ಬಂಧಿಸಿದ್ದಾರೆ ಎಂದು ತಿಳಿದು ಬಂದಿದೆ.

ಕೊಲೆ ನಡೆದು ಹತ್ತು ದಿನಗಳು ಕಳೆದರು ಕೂಡ ಆರೋಪಿಗಳು ಪೊಲೀಸರ ಬಲೆಗೆ ಬೀಳದೆ ತಲೆಮರೆಸಿಕೊಂಡು ಓಡಾಡುತ್ತಿದ್ದರು, ನಿರಂತರ ಪ್ರಯತ್ನದಿಂದ ಇಂದು ಬೆಂಗಳೂರಿನಲ್ಲಿ ಕೊಲೆಯ ಮೊದಲ ಆರೋಪಿ ಪಾಲಹಳ್ಳಿ ಗ್ರಾಮದ ಪ್ರಮೋದ್(35) ಹಾಗೂ ಬೆಂಗಳೂರಿನ ಮುಬಾರಕ್ ಎಂಬ ಆರೋಪಿಗಳನ್ನು ಶ್ರೀರಂಗಪಟ್ಟಣ ಠಾಣಾ ಪೊಲೀಸರು ಬಂಧಿಸಿದ್ದಾರೆ. ಉಳಿದ 4 ಆರೋಪಿಗಳಾದ ಪ್ರಕಾಶ್ ಅಲಿಯಾಸ್ ಬೆಳ್ಳಿ, ಅಭಿಷೇಕ್ ಅಲಿಯಾಸ್ ಕೋಳಿ ಅಭಿ, ರಕ್ಷಿತ್ ಅಲಿಯಾಸ್ ಕುಂಟ ರಕ್ಷಿತ್, ಕೀರ್ತಿ ಅಲಿಯಾಸ್ ಹೇರಗನಹಳ್ಳಿ ಕೀರ್ತಿ ತಲೆಮರೆಸಿಕೊಂಡಿದ್ದು, ಶೀಘ್ರದಲ್ಲೇ ಅವರನ್ನು ಬಂಧಿಸಲಾಗುವುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಬಂಧಿತ ಪ್ರಕರಣದ ಮೊದಲ ಆರೋಪಿ ಪ್ರಮೋದ್ ಕಳೆದ ಮೂರೂವರೆ ತಿಂಗಳ ಹಿಂದೆ ಕೊಲೆಯಾಗಿದ್ದ ವಿನು ಅಲಿಯಾಸ್ ಕುಂಠ ವಿನು ಅಣ್ಣನಾಗಿದ್ದು ಈ ಕೊಲೆ ಹಳೆ ದ್ವೇಷದ ಹಿನ್ನೆಲೆಯಲ್ಲಿ ನಡೆದಿದೆ ಎನ್ನಲಾಗಿದೆ.

ಡಾ.ಸಿ.ಎನ್.ಮಂಜುನಾಥ್ ಮಂಡ್ಯದಲ್ಲೇ ಸ್ಪರ್ಧಿಸಲಿ

ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಆಹ್ವಾನ



ಮಾಜಿ ಶಾಸಕ ಡಾ.ಕೆ.ಅನ್ನದಾನಿ ಅಭಿನಂದನಾ ಸಮಾರಂಭದಲ್ಲಿ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಅವರನ್ನು ಅಭಿನಂದಿಸಲಾಯಿತು.

ಮಂಡ್ಯ, ಫೆ.21– ಜಯದೇವ ಹೃದ್ರೋಗ ಸಂಸ್ಥೆಯ ಮಾಜಿ ನಿರ್ದೇಶಕ ಹಾಗೂ ಹೃದಯ ತಜ್ಞ ಡಾ.ಸಿ.ಎನ್.ಮಂಜುನಾಥ್ ಅವರು ಬೇರೆ ಕಡೆ ನಿಲ್ಲುವುದಕ್ಕಿಂತ ಮಂಡ್ಯದಲ್ಲಿಯೇ ಸ್ಪರ್ಧಿಸಬೇಕು ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಆಹ್ವಾನ ನೀಡಿದ್ದಾರೆ.

ನಗರದ ಕರ್ನಾಟಕ ಸಂಘದ ಆವರಣದಲ್ಲಿ ನಡೆದ ಮಾಜಿ ಶಾಸಕ ಡಾ.ಕೆ.ಅನ್ನದಾನಿ ಅಭಿನಂದನಾ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಡಾ.ಮಂಜುನಾಥ್ ಅವರು, ಹಾಸನದವರಾದರೂ ಅವರ ಎಲ್ಲ ವ್ಯವಹಾರ, ಜನರ ಒಡನಾಟ ಮಂಡ್ಯದಲ್ಲಿದೆ. ಆದ್ದರಿಂದ ಇಲ್ಲಿಂದಲೇ ಸ್ಪರ್ಧಿಸಬೇಕು ಎಂದರು.

ಸರ್ಕಾರ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಕಳೆದ 10 ವರ್ಷಗಳ ವ್ಯವಹಾರಗಳ ತನಿಖೆ ನಡೆಸಲು ಮುಂದಾಗಿದೆ ಎನ್ನಲಾಗುತ್ತಿದೆ ಆದರೆ ಅದರ ಬಗ್ಗೆ ಯೋಚನೆ ಮಾಡಿದ್ದರೆ ಈ ಸರ್ಕಾರಕ್ಕೆ ಮಾನ ಮರ್ಯಾದೆ, ಆತ್ಮಗೌರವ ಇದ್ದರೆ ಮೊದಲು ಡಾ.ಮಂಜುನಾಥ್ ಅವರ ಕ್ಷಮೆ ಕೇಳಬೇಕು. ಡಾ. ಮಂಜುನಾಥ್ ಅವರು ಮಂಜುನಾಥ ಸ್ವಾಮಿಯ ಲೆಕ್ಕದಲ್ಲಿ ಅಂದರೆ ದೇವರ ಲೆಕ್ಕದಲ್ಲಿ ಕೆಲಸ ಮಾಡಿದ್ದಾರೆ ಎಂದು ತಿಳಿಸಿದರು.

ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಾ.ಮಂಜುನಾಥ್ ಅವರ ಬಗ್ಗೆ ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ. ಈಗ ರಾಜಕೀಯ ದುರುದ್ದೇಶದಿಂದ ಈ ರೀತಿ ಮಾತನಾಡುತ್ತಿದ್ದಾರೆ. ಹಾಗೇನಾದರೂ ಆದರೆ ಈ ರಾಜ್ಯದ ಜನ ದಂಗೆ ಏಳಲಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಮುಂದಿನ ಚುನಾವಣೆಯಲ್ಲಿ ತಕ್ಕಪಾಠ ಕಲಿಸಲಿದ್ದಾರೆ ಎಂದರು.

ನಾವೆಲ್ಲರೂ ಈಗಾಗಲೇ ಮುಂದಿನ ಲೋಕಸಭೆ ಚುನಾವಣೆಯಲ್ಲಿ ದೇವೇಗೌಡರು, ಕುಮಾರಸ್ವಾಮಿ, ನಿಖಿಲ್ ಸ್ಪರ್ಧಿಸುವಂತೆ ನಿರ್ಣಯ ಮಾಡಿದ್ದೇವೆ. ಆದರೆ ಮುಂದಿನ ದಿನಗಳಲ್ಲಿ ಯಾರೇ ಅಭ್ಯರ್ಥಿಯಾದರೂ ಒಗ್ಗಟ್ಟಾಗಿ ಕೆಲಸ ಮಾಡುವ ಮೂಲಕ ಪಕ್ಷದ ಗೆಲುವಿಗೆ ಶ್ರಮಿಸಲಾಗುವುದು ಎಂದ ಅವರು, ಮಾಜಿ ಶಾಸಕ ಕೆ.ಅನ್ನದಾನಿ ಹಾಗೂ ಜೆಡಿಎಸ್ ರಾಜಕೀಯದ ಬಗ್ಗೆ ಮೆಲುಕು ಹಾಕಿದರು.

ಮಾಜಿ ಶಾಸಕ ಹಾಗೂ ಜೆಡಿಎಸ್ ಎಸ್ಸಿ, ಎಸ್ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಅನ್ನದಾನಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮುಖ್ಯಮಂತ್ರಿ ಸ್ಥಾನ ತಪ್ಪಿಸಿದರು. ಇದೀಗ ಇಡೀ ಇಂಡಿಯಾ ಒಕ್ಕೂಟ ಮಲ್ಲಿಕಾರ್ಜುನ ಖರ್ಗೆ ಅವರನ್ನು ಪ್ರಧಾನಿ ಮಾಡಿ ಎಂದು ಹೇಳಿದರೆ, ಸಿದ್ದರಾಮಯ್ಯ ಅವರು ಮಾತ್ರ ರಾಹುಲ್ ಗಾಂಧಿ ಅವರನ್ನು ಮಾಡಿ ಎನ್ನುತ್ತಿದ್ದಾರೆ. ಇದರಿಂದಲೇ ಗೊತ್ತಾಗಲಿದೆ ನಿಮ್ಮ ಅಹಿಂದ ತತ್ವ ಎಂದು ಆರೋಪಿಸಿದರು.

ನಾನು ಅಹಿಂದ ನಾಯಕ ಎನ್ನುವ ಸಿದ್ದರಾಮಯ್ಯ ಅವರು, ಮಲ್ಲಿಕಾರ್ಜುನ ಖರ್ಗೆ ಅವರ ಸಿಎಂ, ಪಿಎಂ ಸ್ಥಾನ ತಪ್ಪಿಸುತ್ತಿದ್ದಾರೆ. ಕೇಸರಿ ಟವೆಲ್ ಹಾಕಿಕೊಂಡ ತಕ್ಷಣ ಪಕ್ಷದ ತತ್ವ ಸಿದ್ಧಾಂತಗಳನ್ನು ಬಿಡುವುದಿಲ್ಲ. ನಮ್ಮ ಪಕ್ಷದ ಬಾವುಟ ನಮ್ಮ ಬಳಿಯೇ ಇದೆ. ಬಿಜೆಪಿಯೊಂದಿಗೆ ವಿಲೀನಗೊಂಡಿಲ್ಲ. ಜೊತೆ ಇದ್ದೇವೆ ಅಷ್ಟೇ. ಆದರೆ ಕಾಂಗ್ರೆಸ್ ಪಕ್ಷದ ಶಾಸಕರು ಕೇಸರಿ ಟವೆಲ್ ಧರಿಸಿದ್ದಾರೆ ಎಂದು ಪರೋಕ್ಷವಾಗಿ ಪಿ.ಎಂ. ನರೇಂದ್ರಸ್ವಾಮಿ ಅವರನ್ನು ಟೀಕಿಸಿದರು.

ಮಳವಳ್ಳಿ ಕ್ಷೇತ್ರಕ್ಕೆ ಜೆಡಿಎಸ್‌ನ ದೇವೇಗೌಡರು ಹಾಗೂ ಕುಮಾರಸ್ವಾಮಿ ಅವರ ಕೊಡುಗೆ ಏನು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸುತ್ತಾರೆ. ಆದರೆ ಅವರ ಕೊಡುಗೆ ಏನು ಎಂಬುದನ್ನು ಅವರ ಶಿಷ್ಯನಾಗಿ ಚರ್ಚೆ ಮಾಡಲು ಸಿದ್ಧನಿದ್ದೇನೆ. ನೀವು ಮುಖ್ಯಮಂತ್ರಿ, ಬರಲು ಸಾಧ್ಯವಿಲ್ಲ. ನಿಮ್ಮ ಪರವಾಗಿ ಯಾರಾದರೂ ಚರ್ಚೆಗೆ ಬರಲಿ ಎಂದು ಸವಾಲು ಹಾಕಿದರು.

ಮಳವಳ್ಳಿಗೆ ದೇವೇಗೌಡರು, ಕುಮಾರಸ್ವಾಮಿ ಕೊಟ್ಟಷ್ಟು ಅನುದಾನ, ಅಭಿವೃದ್ಧಿ ಕೆಲಸಗಳು ಕಾಂಗ್ರೆಸ್‌ನಿಂದಲೂ ಮಾಡಲು ಸಾಧ್ಯವಾಗಿಲ್ಲ. ಜಾತ್ಯಾತೀತ ಪದ ತೆಗೆಯಬೇಕು ಎಂದಿದ್ದೀರಲ್ಲ. ಮೊದಲು ನೀವು ಅದನ್ನು ತೆಗೆದು ಹಾಕಿ. ಎಸ್ಸಿ, ಎಸ್ಟಿ ಸಮುದಾಯಕ್ಕೆ ಎಷ್ಟು ಅನ್ಯಾಯ ಮಾಡಿದ್ದೀರಾ ಎಂಬುದು ಗೊತ್ತಿದೆ ಎಂದು ತಿಳಿಸಿದರು.

ದಲಿತ ಸಮುದಾಯ ಅರ್ಥ ಮಾಡಿಕೊಳ್ಳಬೇಕು. ಕಾಂಗ್ರೆಸ್ ಪಕ್ಷ ಮಾರಕವಾದ ಪಕ್ಷ. ಸುಳ್ಳು ಹೇಳುವ ಪಕ್ಷ ಎಂದು ಡಾ.ಬಿ.ಆರ್.ಅಂಬೇಡ್ಕರ್ ಅವರೇ ಹೇಳಿದ್ದರು. ಅದೊಂದು ಪಕ್ಷ ಅಲ್ಲ. ಸಂಘಟನೆಯ ಹೆಸರಾಗಿತ್ತು. ಗಾಂಧೀಜಿಯವರು ಸಂಘಟನೆ ಮಾಡಲು ಹೆಸರಿಟ್ಟುಕೊಂಡಿದ್ದರು. ನಂತರ ನೆಹರು ಅದನ್ನು ಪಕ್ಷವನ್ನಾಗಿ ಪರಿವರ್ತಿಸಿದರು. ಆದ್ದರಿಂದ ಕಾಂಗ್ರೆಸ್ ಪಕ್ಷವನ್ನು ಬಿಟ್ಟು ಜಾತ್ಯಾತೀತ ಪಕ್ಷ ಜೆಡಿಎಸ್ ಅನ್ನು ಬೆಂಬಲಿಸಬೇಕು. ಪಕ್ಷ ಸಂಘಟನೆಗೆ ಮುಂದಾಗಬೇಕು. ದಲಿತರಿಗೆ ನ್ಯಾಯ ಸಿಗುವುದೇ ಜೆಡಿಎಸ್ ಪಕ್ಷದಲ್ಲಿ ಮಾತ್ರ ಎಂಬುದನ್ನು ಮರೆಯಬಾರದು ಎಂದರು.

ವೇದಿಕೆಯಲ್ಲಿ ಮಾಜಿ ಶಾಸಕ ಜಿ.ಬಿ.ಶಿವಕುಮಾರ್, ಜೆಡಿಎಸ್ ಮುಖಂಡ ಬಿ.ಆರ್.ರಾಮಚಂದ್ರು, ಜಿಲ್ಲಾಧ್ಯಕ್ಷ ಡಿ.ರಮೇಶ್, ಮಹಿಳಾ ಘಟಕ ಅಧ್ಯಕ್ಷ ಮಂಜುಳಾ ಉದಯಶಂಕರ್, ಎಸ್ಸಿ, ಎಸ್ಟಿ ಘಟಕದ ಜಿಲ್ಲಾಧ್ಯಕ್ಷ ಸಾತನೂರು ಜಯರಾಂ ಸೇರಿದಂತೆ ಮತ್ತಿತರರಿದ್ದರು.

ಇಂದು, ನಾಳೆ ನೀರು ಸರಬರಾಜಿನಲ್ಲಿ ವ್ಯತ್ಯಯ

ಮಂಡ್ಯ.ಫೆ.21– ಶ್ರೀರಂಗಪಟ್ಟಣ ತಾಲೂಕು ವ್ಯಾಪ್ತಿಗೆ ಸೇರಿದ 66/11 ಕೆವಿ ವಿದ್ಯುತ್ ಉಪ ವಿತರಣಾ ಕೇಂದ್ರದ ನಿರ್ವಹಣಾ ಕಾಮಗಾರಿಯನ್ನು ಸೆಸ್ಕ್ ವತಿಯಿಂದ ಹಮ್ಮಿಕೊಂಡಿರುವುದರಿಂದ ಫೆ.22 ಮತ್ತು 23 ರಂದು ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಮಂಡ್ಯ ಉಪ ವಿಭಾಗ ಕನನೀಸ ಮತ್ತು ಒಚ ಮಂಡಳಿಯ ನಿರ್ವಹಣಾ ಸಹಾಯಕ ಕಾರ್ಯಪಾಲಕ ಅಭಿಯಂತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫೆ.28, ರಾಷ್ಟ್ರೀಯ ವಿಜ್ಞಾನ ದಿನಾಚರಣೆ

ಮಂಡ್ಯ.ಫೆ.21– ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು Indigenous Technologies for Societal Development ಎಂಬ ವಿಷಯದ ಮೇಲೆ ಫೆ.28ರಂದು ಅಕಾಡೆಮಿ ಕಚೇರಿಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಭಾಗವಹಿಸಬಹುದಾಗಿದ್ದು, Drawing & Painting ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು google form - https://forms.gle/e5UbmGWkkaC1utgLA ಮೂಲಕ ನೋಂದಾಯಿಸಿಕೊಳ್ಳ ಬಹುದಾಗಿದ್ದು, ಮಾಹಿತಿಗಾಗಿ ಅಕಾಡೆಮಿಯ ವೆಬ್‌ಸೈಟ್ http://wwwkstacademy.in ಅನ್ನು ವೀಕ್ಷಿಸಬಹುದಾಗಿದೆ.

ಕೆ.ಆರ್.ಪೇಟೆಯಲ್ಲಿ ಭಾರತ್ ಅಕ್ಕಿ ವಿತರಣೆ



ಕೆ.ಆರ್.ಪೇಟೆ, ಫೆ.21– ಪಟ್ಟಣದ ಶಕ್ತಿದೇವತೆ ಶ್ರೀ ಮಾರೀಗುಡಿ ವೃತ್ತದಲ್ಲಿ ಭಾರತ್ ಅಕ್ಕಿ ವಿತರಣಾ ಕಾರ್ಯಕ್ರಮಕ್ಕೆ ಪುರಸಭಾ ಸದಸ್ಯ ಕೆ.ಎಸ್.ಪ್ರಮೋದ್ ಕುಮಾರ್ ಚಾಲನೆ ನೀಡಿದರು.

ಅಕ್ಕಿ ವಿತರಣೆಗೆ ಚಾಲನೆ ನೀಡಿ ಪ್ರಮೋದ್ ಕುಮಾರ್ ಮಾತನಾಡಿ, ನರೇಂದ್ರ ಮೋದಿಯವರು ಪ್ರಧಾನ ಮಂತ್ರಿಯಾದ ನಂತರ ಎಲ್ಲಾ ಕ್ಷೇತ್ರದಲ್ಲಿಯೂ ಉತ್ತಮ ಸಾಧನೆ ಮಾಡಿ ವಿಶ್ವದ ಗಮನ ಸೆಳೆಯುತ್ತಿರುವುದು ಎಲ್ಲರಿಗೂ ತಿಳಿದಿದೆ. ಈಗ ಮಧ್ಯಮ ವರ್ಗದ ಜನರಿಗೆ ಅನುಕೂಲವಾಗುವಂತೆ ಕೇಂದ್ರ ಸರ್ಕಾರ ದೇಶದ ಮೂಲೆ ಮೂಲೆಗಳಲ್ಲಿ ಅತ್ಯಂತ ರಿಯಾಯಿತಿ ದರದಲ್ಲಿ ಅಂದರೆ ಪ್ರತಿ ಕೆ.ಜಿ.ಗೆ 29 ರೂ. ನಂತೆ ಅಕ್ಕಿಯನ್ನು ವಿತರಣೆ ಮಾಡುವ ಮೂಲಕ ಬಡವರು ಹಾಗೂ ಮಧ್ಯಮ ವರ್ಗದ ಜನರಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆ. ಸಮಾಜದ ಕೊನೆಯ ವ್ಯಕ್ತಿಯ ಸಮಸ್ಯೆ ಬಗೆಹರಿಸಲು ಸದಾಕಾಲ ಶ್ರಮಿಸುತ್ತಿರುವ ನರೇಂದ್ರ ಮೋದಿ ಅವರಿಗೆ ಮತ್ತು ಅವರ ಸಂಪುಟ ಸದಸ್ಯರಿಗೆ ಧನ್ಯವಾದವನ್ನು ಜನರ ಪರವಾಗಿ ಅರ್ಪಿಸುತ್ತೇನೆ ಎಂದು ತಿಳಿಸಿದರು.

ಈ ಸಮಯದಲ್ಲಿ ಪುರಸಭೆಯ ಮಾಜಿ ಸದಸ್ಯ ಕೆ.ಎಸ್. ಹರಪ್ರಸಾದ್, ಆಟೋ ಮಂಜು, ಕ್ಯಾಂಟೀನ್ ಕುಮಾರ್, ಗಿರೀಶ್, ನಾಣಿ, ಮುರುಗೇಶ್, ಟೈಲರ್ ರಮೇಶ್ ಸೇರಿದಂತೆ ನೂರಾರು ಮುಖಂಡರು ಹಾಗೂ ಮಹಿಳೆಯರು ಉಪಸ್ಥಿತರಿದ್ದರು.

ಕೇವಲ ಒಂದು ಗಂಟೆ ಅವಧಿಯಲ್ಲಿ 3 ಸಾವಿರ ಚೀಲ ಅಕ್ಕಿಯನ್ನು ಬಡವರಿಗೆ ತಲಾ 290 ರೂ.ಗಳಿಗೆ ವಿತರಣೆ ಮಾಡಲಾಯಿತು ಎಂದು ಅವರು ತಿಳಿಸಿದರು.

ಮಾ.9, ರಾಷ್ಟ್ರೀಯ ಲೋಕ್ ಅದಾಲತ್

ಮಂಡ್ಯ: ರಾಜ್ಯದಾದ್ಯಂತ ಮಾ.9 ರಂದು ರಾಷ್ಟ್ರೀಯ ಲೋಕ್ ಅದಾಲತ್ ಅನ್ನು ಹಮ್ಮಿಕೊಳ್ಳಲಾಗಿದ್ದು, ಈ ನಿಟ್ಟಿನಲ್ಲಿ ಜಿಲ್ಲೆಯಲ್ಲಿಯೂ ಸಹ ಮಾ.9 ರಂದು ರಾಷ್ಟ್ರೀಯ ಲೋಕ್-ಅದಾಲತ್ತನ್ನು ಹಮ್ಮಿಕೊಳ್ಳಲಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ವಾಣಿ.ಎ ಶೆಟ್ಟಿ ತಿಳಿಸಿದ್ದಾರೆ.

ಲೋಕ್ ಅದಾಲತ್ ಮುಖಾಂತರ ಪ್ರಕರಣಗಳನ್ನು ಇತ್ಯರ್ಥಗೊಳಿಸುವ ಪೂರ್ವಭಾವಿ ಬೈಠಕ್‌ಗಳನ್ನು ನಡೆಸಿದ್ದು, ಆಸ್ತಿ ವಿವಾದಗಳನ್ನು ಒಳಗೊಂಡಂತೆ ಸಿವಿಲ್ ವ್ಯಾಜ್ಯಗಳು, ಮೋಟಾರು ವಾಹನಗಳ ಪ್ರಕರಣಗಳು, MMRD ಪ್ರಕರಣಗಳು, ರಾಜಿ ಆಗಬಹುದಾದಂತಹ ಕ್ರಿಮಿನಲ್ ಮತ್ತು ಚೆಕ್ ಬೌನ್ಸ್ ಪ್ರಕರಣಗಳನ್ನು ರಾಜಿಗೆ ತೆಗೆದುಕೊಂಡು ಆಯಾಯ ನ್ಯಾಯಾಲಯಗಳಲ್ಲಿ ಜನತಾ ನ್ಯಾಯಾಲಯಗಳನ್ನು ಮಾಡಿ ಪ್ರಕರಣಗಳನ್ನು ಇತ್ಯರ್ಥಗೊಳಿಸುವ ಪ್ರಯತ್ನ ಮಾಡಲಾಗಿದೆ.

ಡಿಯುಡಬ್ಲ್ಯುಜೆ ಕಾರ್ಯದರ್ಶಿಯಾಗಿ ಲೋಕೇಶ್ ಆಯ್ಕೆ



ಮಂಡ್ಯ, ಫೆ.21– ಮಂಡ್ಯ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಕಾರ್ಯದರ್ಶಿಯಾಗಿ ಪಾಂಡವಪುರ ವರದಿಗಾರ ಸಿ.ಎ.ಲೋಕೇಶ್ ಚಿನಕುರಳಿ ಆಯ್ಕೆಯಾದರು.

ಒಡಂಬಡಿಕೆಯಂತೆ ಕೆಲ ಪದಾಧಿಕಾರಿಗಳು ರಾಜೀನಾಮೆ ನೀಡಿದ್ದರಿಂದ ತೆರವಾಗಿದ್ದ ಸ್ಥಾನಕ್ಕೆ ಲೋಕೇಶ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದು, ಉಳಿದಂತೆ ಪ್ರಧಾನ ಕಾರ್ಯದರ್ಶಿಯಾಗಿ ಆನಂದ್, ಉಪಾಧ್ಯಕ್ಷರಾಗಿ ಕೆ.ಎನ್.ನವೀನ್ ಕುಮಾರ್, ನಿರ್ದೇಶಕರಾಗಿ ಕಾಳೇನಹಳ್ಳಿ ಆನಂದ್ ಆಯ್ಕೆಯಾಗಿದ್ದಾರೆ.

ನೂತನ ಪದಾಧಿಕಾರಿ ಅಭಿನಂದನೆ ಸಂದರ್ಭದಲ್ಲಿ ರಾಜ್ಯ ಪತ್ರಕರ್ತರ ಸಂಘದ ಕಾರ್ಯದರ್ಶಿಗಳಾದ ಮತ್ತೀಕೆರೆ ಜಯರಾಮ್, ಸೋಮಶೇಖರ್ ಕೆರಗೋಡು, ಜಿಲ್ಲಾಧ್ಯಕ್ಷ ಬಿ.ಪಿ.ಪ್ರಕಾಶ್, ರಾಷ್ಟ್ರೀಯ ಮಂಡಳಿ ಸದಸ್ಯ ಜೆ.ಎಂ.ಬಾಲಕೃಷ್ಣ, ಮಾಜಿ ಪ್ರಧಾನ ಕಾರ್ಯದರ್ಶಿ ಎಂ.ಕೆ.ಮೋಹನ್‌ರಾಜ್, ಪತ್ರಕರ್ತರಾದ ಚನ್ನಮಾದೇಗೌಡ, ಕುಮಾರಸ್ವಾಮಿ, ಅಶೋಕ್, ಶಿವರಾಜ್, ರವಿ, ಶೇಷು, ಪ್ರತಾಪ್, ನಂಜುಂಡಸ್ವಾಮಿ ಇತರರಿದ್ದರು.

ಒಂದನೇ ಪುಟದಿಂದ

ವಿಧಾನಸಭೆಯಲ್ಲಿ ಅಂಗೀಕಾರ

ಸದಸ್ಯರಾಗಿರುತ್ತಾರೆ ಎಂದು ವಿಧೇಯಕದಲ್ಲಿ ಉಲ್ಲೇಖಿಸಲಾಗಿದೆ.

ಮೂವರು ಸಚಿವರು ಉಪಾಧ್ಯಕ್ಷರು: ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆಯ ಸಚಿವರು, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು, ಪ್ರವಾಸೋದ್ಯಮ ಇಲಾಖೆ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ. ಚಾಮುಂಡೇಶ್ವರಿ ಕ್ಷೇತ್ರದ ಐತಿಹಾಸಿಕ ಹಿನ್ನೆಲೆ ಮತ್ತು ಸ್ಥಳ ಪುರಾಣದ ಬಗ್ಗೆ ಹೆಚ್ಚಿನ ಪರಿಚಯವಿರುವ ಅತೀಗಣ್ಯ ವ್ಯಕ್ತಿಗಳ ಪೈಕಿ ಐವರನ್ನು ಸದಸ್ಯರನ್ನಾಗಿ ರಾಜ್ಯ ಸರ್ಕಾರ ನಾಮನಿರ್ದೇಶನ ಮಾಡುತ್ತದೆ. ಅವರಲ್ಲಿ ಕನಿಷ್ಠ ಒಬ್ಬರು ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿದವರಾಗಿರಬೇಕು ಹಾಗೂ ಒಬ್ಬರು ಮಹಿಳಾ ಸದಸ್ಯರಿರಬೇಕು ಎಂದು ಪ್ರಾಧಿಕಾರ ರಚನೆ ವಿಧೇಯಕದಲ್ಲಿ ಹೇಳಲಾಗಿದೆ. ಶ್ರೀ ಚಾಮುಂಡೇಶ್ವರಿ ಕ್ಷೇತ್ರವನ್ನು ಭಾಗಶಃ ಅಥವಾ ಪೂರ್ಣವಾಗಿ ಪ್ರತಿನಿಧಿಸುವ ಹಾಗೂ ಅದರ ಎಲ್ಲೆಯೊಳಗೆ ತಮ್ಮ ಚುನಾವಣಾ ಕ್ಷೇತ್ರವನ್ನು ಹೊಂದಿರುವ ಸಂಸತ್ ಸದಸ್ಯರು ಮತ್ತು ವಿಧಾನಸಭಾ ಸದಸ್ಯರು, ಲೋಕೋಪಯೋಗಿ ಇಲಾಖೆಯ ಸಂಪರ್ಕ ಮತ್ತು ಕಟ್ಟಡ ವಿಭಾಗದ ಮುಖ್ಯ ಅಭಿಯಂತರರು ಅಥವಾ ಅವರ ಪ್ರತಿನಿಧಿ, ಆರ್ಥಿಕ ಇಲಾಖೆಯ ಕಾರ್ಯದರ್ಶಿ ಅಥವಾ ಸರ್ಕಾರದ ಉಪ ಕಾರ್ಯದರ್ಶಿ ದರ್ಜೆಗೆ ಕಡಿಮೆ ಇಲ್ಲದ ಅವರ ಪ್ರತಿನಿಧಿ, ಕಂದಾಯ ಇಲಾಖೆ (ಮುಜರಾಯಿ) ಕಾರ್ಯದರ್ಶಿ ಅಥವಾ ಸರ್ಕಾರಿ ಉಪ ಕಾರ್ಯದರ್ಶಿ ದರ್ಜೆಗೆ ಕಡಿಮೆ ಇಲ್ಲದ ಆತನ ಪ್ರತಿನಿಧಿ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ ಆಯುಕ್ತರು, ಮೈಸೂರು ಜಿಲ್ಲಾಧಿಕಾರಿಗಳು, ಪುರಾತತ್ವ ಮತ್ತು ವಸ್ತುಸಂಗ್ರಹಾಲಯಗಳ ನಿರ್ದೇಶಕರು, ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕರು ಪದನಿಮಿತ್ತ ಸದಸ್ಯರಾಗಿದ್ದರೆ ದೇವಸ್ಥಾನದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

ಮೂರು ವರ್ಷಕ್ಕೆ ನಾಮನಿರ್ದೇಶನ: ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಸದಸ್ಯರು ಮೂರು ವರ್ಷಗಳ ಅವಧಿಗೆ ಅಧಿಕಾರವನ್ನು ಹೊಂದಿರುತ್ತಾರೆ. ಹೀಗೆ ನಾಮನಿರ್ದೇಶಿತರಾದ ಯಾವುದೇ ಸದಸ್ಯ ತನ್ನ ಸಹಿಯೊಂದಿಗೆ ಸರ್ಕಾರಕ್ಕೆ ಬರೆಯುವ ಮೂಲಕ ರಾಜೀನಾಮೆ ಸಲ್ಲಿಸಬಹುದು. ಆದರೆ ರಾಜೀನಾಮೆ ಅಂಗೀಕಾರವಾಗುವವರೆಗೂ ಅಧಿಕಾರದಲ್ಲಿ ಮುಂದುವರೆಯತಕ್ಕದ್ದು. ಸರ್ಕಾರೇತರ ಸದಸ್ಯರು ಭತ್ಯೆಯನ್ನು ಪಡೆಯತಕ್ಕದ್ದು ಎಂದು ಉಲ್ಲೇಖಿಸಲಾಗಿದೆ.

ಅನರ್ಹತೆ: ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನೊಳಗೊಳ್ಳುವ ಅಥವಾ ಅಪರಾಧಿ ಎಂದು ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದರೆ ಅಥವಾ ಅಸ್ವಸ್ಥ ಚಿತ್ತದವನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯದಿಂದ ಹಾಗೆಂದು ಘೋಷಿತನಾಗಿದ್ದರೆ, ಅವಿಮುಕ್ತ ದಿವಾಳಿಯಾಗಿದ್ದರೆ, ಕೇಂದ್ರ ಅಥವಾ ರಾಜ್ಯ ಸರ್ಕಾರದ ಒಡೆತನ ಹೊಂದಿರುವ ಅಥವಾ ನಿಯಂತ್ರಣ ಹೊಂದಿರುವ ನಿಕಾಯ ಅಥವಾ ನಿಗಮದ ಸೇವೆಯಿಂದ ವಜಾ ಮಾಡಲ್ಪಟ್ಟ ವ್ಯಕ್ತಿ, ಪ್ರಾಧಿಕಾರದ ಆದೇಶದಿಂದ ಮಾಡಲಾದ ಯಾವುದೇ ಕಾಮಗಾರಿಯಲ್ಲಿ ಪ್ರಾಧಿಕಾರದೊಡನೆ ಅಥವಾ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಸ್ವಯಂ ತಾನೇ ಅಥವಾ ಒಬ್ಬ ಪಾಲುದಾರನ ಇಲ್ಲವೇ ಏಜೆಂಟನ ಮೂಲಕ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಯಾವುದೇ ಷೇರನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದವರು, ಪ್ರಾಧಿಕಾರದ ಪರವಾಗಿ ವೇತನ ಪಡೆಯುವ ನ್ಯಾಯವಾದಿಯಾಗಿ ನಿಯೋಜಿತನಾಗಿದ್ದರೆ ಅಥವಾ ಪ್ರಾಧಿಕಾರದ ವಿರುದ್ಧವಾಗಿ ನ್ಯಾಯವಾದಿಯ ನಿಯೋಜನೆಯನ್ನು ಒಪ್ಪಿಕೊಂಡಿದ್ದರೆ ಅಂತಹ ವ್ಯಕ್ತಿಗಳು ಸದಸ್ಯರಾಗಿ ನೇಮಕ ಹೊಂದಲು ಅನರ್ಹರಾಗಿರುತ್ತಾರೆ ಎಂದು ವಿಧೇಯಕದಲ್ಲಿ ಉಲ್ಲೇಖಿಸಲಾಗಿದೆ.

ಚಾಮುಂಡೇಶ್ವರಿ ದೇವಸ್ಥಾನದಲ್ಲೇ ಕಚೇರಿ: ಶ್ರೀ ಚಾಮುಂಡೇಶ್ವರಿ ಕ್ಷೇತ್ರದ ಅಭಿವೃದ್ಧಿ ಪ್ರಾಧಿಕಾರವು ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ತನ್ನ ಕಚೇರಿಯನ್ನು ಹೊಂದಿರುತ್ತದೆ. ಈ ಪ್ರಾಧಿಕಾರವು ಶಾಶ್ವತ ಉತ್ತರಾಧಿಕಾರ ಮತ್ತು ಮೊಹರನ್ನು ಹೊಂದಿರುವ ಚರ ಮತ್ತು ಸ್ಥಿರ ಸ್ವತ್ತುಗಳನ್ನು ಆರ್ಜಿಸುವ, ಧಾರಣೆ ಮಾಡುವ ಹಾಗೂ ವಿಲೇ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರುತ್ತದೆ.

ಚಾಮುಂಡಿಬೆಟ್ಟದ ವ್ಯಾಪ್ತಿ ಅನ್ವಯ: 'ಚಾಮುಂಡೇಶ್ವರಿ ಕ್ಷೇತ್ರ' ಎಂದರೆ ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಮತ್ತು ಮೈಸೂರು ಜಿಲ್ಲೆಯ, ಮೈಸೂರು ತಾಲೂಕಿನ ಚಾಮುಂಡೇಶ್ವರಿ ಬೆಟ್ಟಗಳಲ್ಲಿ ಅದಕ್ಕೆ ಸೇರಿಕೊಂಡ ಎಲ್ಲಾ ಅಧೀನ ದೇವಸ್ಥಾನಗಳು, ಚಾಮುಂಡೇಶ್ವರಿ ಬೆಟ್ಟಗಳ ಇಡೀ ಪ್ರದೇಶ ಮತ್ತು ಶ್ರೀ ಚಾಮುಂಡೇಶ್ವರಿ ಕ್ಷೇತ್ರದ ಅಭಿವೃದ್ಧಿಗಾಗಿ ಸರ್ಕಾರವು ಕಾಲ ಕಾಲಕ್ಕೆ ಆರ್ಜಿಸಬಹುದಾದ ಭೂ ಪ್ರದೇಶ ಹಾಗೂ ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಘೋಷಿಸಬಹುದಾದಂತಹ ಇತರ ಪ್ರದೇಶಗಳು ಚಾಮುಂಡೇಶ್ವರಿ ಕ್ಷೇತ್ರ ಎಂದು ಕರೆಯಲ್ಪಡುತ್ತದೆ ಎಂದು ವಿಧೇಯಕದಲ್ಲಿ ಉಲ್ಲೇಖಿಸಲಾಗಿದೆ.

ಅಭಿವೃದ್ಧಿ ಮತ್ತು ನಿರ್ವಹಣೆ ಹೊಣೆ: ಈ ಪ್ರಾಧಿಕಾರವು ಚಾಮುಂಡೇಶ್ವರಿ ಕ್ಷೇತ್ರದ ಅಭಿವೃದ್ಧಿ ಮತ್ತು ಅದರ ನಿರ್ವಹಣೆಗೆ ಸಂಬಂಧಿಸಿದ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವ ಅಧಿಕಾರ ಹೊಂದಿರುತ್ತದೆ. ಶ್ರೀ ಚಾಮುಂಡೇಶ್ವರಿ ಕ್ಷೇತ್ರದ ಅಭಿವೃದ್ಧಿ ಪ್ರಾಧಿಕಾರ ನಿಧಿ ಎಂದು ಕರೆಯಲ್ಪಡುವ ಒಂದು ನಿಧಿಯನ್ನು ರಚಿಸಲ್ಪಡಲಾಗುತ್ತದೆ ಹಾಗೂ ಈ ನಿಧಿಯ ವಿನಿಯೋಗ ಹಾಗೂ ಪ್ರಾಸಂಗಿಕ ವಿಷಯಗಳನ್ನು ಪ್ರಾಧಿಕಾರ ನಿರ್ವಹಿಸುತ್ತದೆ.

ಪ್ರಾಧಿಕಾರದ ಅಧಿಕಾರೇತರ ಸದಸ್ಯರಿಗೆ ಪಾವತಿಸುವ ಭತ್ಯೆಗಳ ಕುರಿತು ನಿಯಮಗಳನ್ನು ರಚಿಸುವುದು, ಅಧಿನಿಯಮದ ಯಾವುದೇ ಉದ್ದೇಶಗಳನ್ನು ನೆರವೇರಿಸಲು ಅವಶ್ಯಕ ಅಥವಾ ಯುಕ್ತವೆಂದು ಪರಿಗಣಿಸುವಂತಹ ಎಲ್ಲಾ ಕರಾರುಗಳನ್ನು ಮಾಡಿಕೊಳ್ಳುವ ಕುರಿತು ನಿಯಮಗಳನ್ನು ರಚಿಸಲು, ನೌಕರರನ್ನು ನೇಮಕ ಮಾಡಿಕೊಳ್ಳುವ ಕುರಿತು ಹಾಗೂ ನೌಕರರ ಸಂಬಳ, ಭತ್ಯೆ ಮತ್ತು ಇತರ ಸೇವಾ ಷರತ್ತುಗಳ ಕುರಿತು ನಿಯಮಗಳನ್ನು ರಚಿಸಲು, ಸಮಿತಿಯ ಸಭೆಗಳ ಸ್ಥಳ ಕಾರ್ಯವಿಧಾನ ಮತ್ತು ಸಮಯದ ಕುರಿತು ನಿಯಮಗಳನ್ನು ರಚಿಸಲು, ಪ್ರಾಧಿಕಾರದ ವಾರ್ಷಿಕ ಆಯ-ವ್ಯಯವನ್ನು ಸಿದ್ಧಪಡಿಸುವ ನಮೂನೆ ಮತ್ತು ಸಮಯದ ಕುರಿತು ನಿಯಮಗಳನ್ನು ರಚಿಸಲು, ಲೆಕ್ಕಪತ್ರಗಳ ಪುಸ್ತಕಗಳನ್ನು ಸಿದ್ಧಪಡಿಸುವ ಮತ್ತು ಪ್ರಕಟಿಸುವ ವಿಧಾನದ ಕುರಿತು ನಿಯಮಗಳನ್ನು ರಚಿಸಲು, ವಾರ್ಷಿಕ ವರದಿಯನ್ನು ಸಿದ್ಧಪಡಿಸುವ ನಮೂನೆ ಮತ್ತು ಸಮಯ ಕುರಿತು ನಿಯಮಗಳನ್ನು ರಚಿಸಲು, ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಕುರಿತು ನಿಯಮಗಳನ್ನು ರಚಿಸಲು ಈ ಅಧಿಸೂಚನೆಯು ವಿಧೇಯಕವು ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ನೀಡಿದೆ.

ಪ್ರಸ್ತಾಪ ಸಲ್ಲಿಸಲಾಗಿತ್ತು!

'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ, ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಕೆ.ಆರ್.ಕ್ಷೇತ್ರದ ಮಾಜಿ ಶಾಸಕರಾದ ಎಸ್.ಎ.ರಾಮದಾಸ್, ಎಂ.ಕೆ.ಸೋಮಶೇಖರ್, ಚಾಮರಾಜ ಕ್ಷೇತ್ರದ ಮಾಜಿ ಶಾಸಕ ಎಲ್.ನಾಗೇಂದ್ರ, ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ಮೈಲ್ಯಾಕ್ ಮಾಜಿ ಅಧ್ಯಕ್ಷ ರಘು ಕೌಟಿಲ್ಯ, ಸಮಾಜ ಚಿಂತಕ ಪರಶುರಾಮ ಗೌಡ, ಪರಿಸರ ವಾದಿ ಯು.ಎನ್.ರವಿಕುಮಾರ್ ಮತ್ತು ವಕೀಲ ಗೋವಿಂದ ಅವರನ್ನು ಒಳಗೊಂಡಿತ್ತು.

100 ಮೀ. ವ್ಯಾಪ್ತಿಯಲ್ಲಿ ಸಿಗರೇಟ್ ನಿಷೇಧ

ಹಾಗೂ 3 ವರ್ಷಕ್ಕೆ ವಿಸ್ತರಣೆ ಮಾಡುವ ಜೈಲು ಶಿಕ್ಷೆ ಮತ್ತು 50 ಸಾವಿರದಿಂದ 1 ಲಕ್ಷ ರೂ.ವರೆಗೆ ದಂಡ ವಿಧಿಸಲಾಗುತ್ತದೆ. ವಿಧೇಯಕ ಮಂಡಿಸಿದ ದಿನೇಶ್ ಗುಂಡೂರಾವ್: ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು 2024ರ ಸಿಗರೇಟ್ ಸೇವನೆ ಮತ್ತು ಜಾಹೀರಾತು ನಿಷೇಧ, ವ್ಯಾಪಾರ ಮತ್ತು ವಾಣಿಜ್ಯ ಉತ್ಪಾದನೆ ಮತ್ತು ಸರಬರಾಜು ತಿದ್ದುಪಡಿ ವಿಧೇಯಕವನ್ನು ಮಂಡನೆ ಮಾಡಿದರು. ಈ ವೇಳೆ ಮಾತನಾಡಿದ ಸಚಿವ ದಿನೇಶ್ ಗುಂಡೂರಾವ್, ಹುಕ್ಕಾಬಾರ್‌ಗಳನ್ನು ನಿಷೇಧ ಮಾಡಲಾಗಿದೆ. ಸಾರ್ವಜನಿಕ ಸ್ಥಳದಲ್ಲಿ ಸಿಗರೇಟ್ ಸೇದಬಾರದು ಅಂತಿದೆ. ಆದರೆ, ಅನೇಕ ಬಾರ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಹುಕ್ಕಾ ಬಾರ್‌ಗಳನ್ನು ಆರಂಭಿಸಿದ್ದಾರೆ. ಸಿಗರೇಟ್ ಸೇದೋದೇ ತಪ್ಪು ಅಂತ ಹೇಳಿದರೆ, ಮತ್ತೊಂದು ರೂಪದಲ್ಲಿ ತಂದಿದ್ದಾರೆ. ಇದಕ್ಕೆ ಕಡಿವಾಣ ಹಾಕಲು ಮುಂದಾಗಿದ್ದೇವೆ ಎಂದು ಹೇಳಿದರು.

ಕಾನೂನಿನಲ್ಲಿ 18 ವರ್ಷದೊಳಗಿನವರಿಗೆ ಸಿಗರೇಟ್ ಮಾರಬಾರದು ಎಂದು ಇತ್ತು. ಅದನ್ನು 21 ವರ್ಷಕ್ಕೆ ಅಂತ ಏರಿಸಲಾಗಿದೆ. ಶಾಲಾ– ಕಾಲೇಜುಗಳ ಮೂರು ಮೀಟರ್ ಒಳಗೆ ಮಾರಾಟ ಮಾಡಬಾರದು ಅಂತ ನಿಯಮ ಇದೆ. ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟ್ ಸೇದುವವರಿಗೆ ಇನ್ನೂರು ದಂಡ ಇತ್ತು. ಈಗ ಸಿಗರೇಟ್ ಸೇದುವವರಿಗೆ 1000 ರೂ. ದಂಡ ಹಾಕಲಾಗುವುದು. ಆರೋಗ್ಯ ಕಾಪಾಡುವುದು ನಮ್ಮ ಕರ್ತವ್ಯ. ಯುವಕರು ಹುಕ್ಕಾ ಬಾರ್‌ಗೆ ಹೋಗಿ ಅಡಿಕ್ಟ್ ಆಗುತ್ತಿದ್ದಾರೆ. ಯುವ ಜನತೆ ಇದನ್ನು ಫ್ಯಾಷನ್ ಮಾಡಿಕೊಂಡಿದ್ದಾರೆ. ಇದರಿಂದ ಬೇರೆ ರೀತಿಯ ಅಡ್ಡ ಪರಿಣಾಮ ಆಗುತ್ತಿದೆ ಎಂದು ದಿನೇಶ್ ಗುಂಡೂರಾವ್ ಕಳವಳ ವ್ಯಕ್ತಪಡಿಸಿದರು.

ಒಳ್ಳೆಯ ನಿರ್ಧಾರ ಎಂದ ವಿರೋಧ ಪಕ್ಷ: ಈ ವೇಳೆ ವಿಪಕ್ಷ ನಾಯಕ ಅಶೋಕ್ ಮಾತನಾಡಿ, ಇದು ಒಳ್ಳೆಯ ನಿರ್ಧಾರವಾಗಿದೆ. ಇನ್ನೆರಡು ನಿಯಮಗಳನ್ನು ಸೇರಿಸಿ. ಶಾಲಾ–ಕಾಲೇಜುಗಳ ನೂರು ಮೀಟರ್ ಒಳಗೆ ಮಾರಾಟ ಮಾಡಿದರೆ ಸಾವಿರ ಅಲ್ಲ, ಹತ್ತು ಸಾವಿರ ರೂಪಾಯಿ ದಂಡ ಹಾಕಲಾಗುವುದು ಎಂಬುದನ್ನು ಸೇರ್ಪಡೆ ಮಾಡಿ ಎಂದು ಸಲಹೆ ನೀಡಿದರು. ಶಾಸಕ ಸುರೇಶ್ ಕುಮಾರ್ ಮಾತನಾಡಿ, ಅಪರೂಪಕ್ಕೆ ಒಳ್ಳೆಯ ಬಿಲ್ ತಂದಿದ್ದಾರೆ ಎಂದು ಹೇಳಿದರು. ಈ ವೇಳೆ ಮಧ್ಯಪ್ರವೇಶ ಮಾಡಿದ ಶಾಸಕ ಶಿವಲಿಂಗೇಗೌಡ, ಹುಕ್ಕಾ ಬಾರ್ ಅಂದ್ರೇನು, ಸ್ವಲ್ಪ ವಿವರ ನೀಡಿ ಎಂದು ಕೇಳಿದರು. ಅದಕ್ಕೆ ಪ್ರತಿಕ್ರಿಯೆ ನೀಡಿದ ಸ್ಪೀಕರ್ ಯು.ಟಿ. ಖಾದರ್, ಗೂಗಲ್ ಮಾಡಿ ಸಿಗುತ್ತದೆ ಎಂದು ಹೇಳಿ ಕೂರಿಸಿದರು.

ಕಚೇರಿಗಳಲ್ಲಿ ಜನರ ಪರದಾಟ

ಸರ್ಟಿಫೈಡ್ ಪ್ರತಿ ಶುಲ್ಕ, ಸಂಘ ಸಂಸ್ಥೆಗಳ ನೋಂದಣಿ, ಎಸ್ಟಿಮೇಟೆಡ್ ಗೈಡೆನ್ಸ್ ವ್ಯಾಲ್ಯೂ ಮತ್ತು ಕೆ–2 ಚಲನ್ ಜನರೇಟ್‌ನಂತಹ ಪ್ರಕ್ರಿಯೆಗಳೇ ನಡೆಯದಿರುವುದರಿಂದ ಇಂದು ಉಪನೋಂದಣಾಧಿಕಾರಿ ಕಚೇರಿಗಳಲ್ಲಿ ಯಾವುದೇ ನೋಂದಣಿ ವಹಿವಾಟುಗಳು ನಡೆಯಲಿಲ್ಲ. ಈ ಸಮಸ್ಯೆ ಕೇವಲ ಮೈಸೂರು ನಗರ ಜಿಲ್ಲೆಯಲ್ಲದೇ, ರಾಜ್ಯಾದ್ಯಂತ ಎಲ್ಲಾ ಉಪ ನೋಂದಣಾಧಿಕಾರಿ ಕಚೇರಿಗಳಲ್ಲೂ ಕಂಡು ಬಂದಿದ್ದು, ಸಾರ್ವಜನಿಕರು ಸಂಜೆವರೆಗೂ ಕಾಯ್ದು ಹೈರಾಣಾಗಿ ಅವ್ಯವಸ್ಥೆಯಿಂದ ಹಿಡಿಶಾಪ ಹಾಕಿ ಹಿಂದಿರುಗಿದರು. ಮೈಸೂರಿನ ಡಾ. ರಾಜಕುಮಾರ್ ರಸ್ತೆಯ ಪೂರ್ವ ಉಪ ನೋಂದಣಾಧಿಕಾರಿ ಕಚೇರಿ, ವಿಜಯ ನಗರ ವಾಟರ್ ಟ್ಯಾಂಕ್ ಬಳಿಯ ಮೈಸೂರು ಪಶ್ಚಿಮ, ನಜರ್‌ಬಾದಿನ ಮಿನಿ ವಿಧಾನಸೌಧದ ಮೈಸೂರು ಉತ್ತರ, ರಾಮಕೃಷ್ಣನಗರದ ಮೈಸೂರು ದಕ್ಷಿಣ, ಮುಡಾ ಕಚೇರಿ ಕಟ್ಟಡದಲ್ಲಿರುವ ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಸರ್ವರ್ ಸಮಸ್ಯೆಯಿಂದ ಯಾವುದೇ ವಹಿವಾಟು ನಡೆಯದೇ ಅಧಿಕಾರಿಗಳು, ಸಿಬ್ಬಂದಿ ಸಹ ಪರದಾಡುತ್ತಿದ್ದರು. ಅದೇ ರೀತಿ ಜಿಲ್ಲೆಯ ತಿ. ನರಸೀಪುರ, ಬನ್ನೂರು, ನಂಜನಗೂಡು, ಕೆ.ಆರ್. ನಗರ, ಮಿರ್ಲೆ, ಬೆಟ್ಟದಪುರ, ಪಿರಿಯಾಪಟ್ಟಣ, ಹುಣಸೂರು ಹಾಗೂ ಹೆಚ್.ಡಿ. ಕೋಟೆ ಉಪನೋಂದಣಾ ಧಿಕಾರಿ ಕಚೇರಿಗಳಲ್ಲಿ ಆಸ್ತಿಗಳ ನೋಂದಣಿ ಗಾಗಿ ಬಂದಿದ್ದವರು ಕೆಲಸವಾಗದೇ ನಿರಾಶ ರಾಗಿ ಹಿಂದಿರುಗಬೇಕಾಯಿತು. 2023ರ ಸೆಪ್ಟೆಂಬರ್ ಮಾಹೆಯಲ್ಲಿ ಹಳೆಯ ಕಾವೇರಿ 1.0 ಆಸ್ತಿ ನೋಂದಣಿ ಆನ್‌ಲೈನ್ ಸರ್ವೀಸ್ ಪೋರ್ಟಲ್ ಅನ್ನು ಸರಳೀಕರಿಸಿ ಕಾವೇರಿ 2.0 ಪೋರ್ಟಲ್ ಆಗಿ ಸ್ಟ್ಯಾಂಪ್ಸ್ ಅಂಡ್ ರಿಜಿಸ್ಟ್ರೇಷನ್ ಇಲಾಖೆಯು ಅಪ್‌ಗ್ರೇಡ್ ಮಾಡಿತ್ತು. ಸಾರ್ವಜನಿಕರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಉನ್ನತೀಕರಣಗೊಳಿಸಿದರೂ, ಇದೀಗ ಆಗಿಂದಾಗ್ಗೆ ಈ ಪೋರ್ಟಲ್ ಸರ್ವರ್ ಡೌನ್ ಆಗಿ ತೊಂದರೆ ಉಂಟಾಗುತ್ತಿದೆ ಎಂದು ಉಪ ನೋಂದಣಾಧಿಕಾರಿಗಳು ತಿಳಿಸಿದ್ದಾರೆ. ಇಂದು ಸಂಜೆ ವೇಳೆಗೆ 10 ನಿಮಿಷ ವೆಬ್‌ಸೈಟ್ ಓಪನ್ ಆಯಿತಾದರೂ, ಪ್ರಕ್ರಿಯೆ ಆರಂಭ ಮಾಡುವಷ್ಟರಲ್ಲಿ ಮತ್ತೆ ಸರ್ವರ್ ಡೌನ್ ಆಯಿತು. ಬೆಂಗಳೂ ರಿನ ಕೇಂದ್ರದಲ್ಲಿ ಸರ್ವರ್ ಸಮಸ್ಯೆ ನಿವಾರಿಸಲು ತಂತ್ರಜ್ಞರು ಪ್ರಯತ್ನಿಸುತ್ತಿ ದ್ದರಾದರೂ ಸರಿಯಾಗದ ಕಾರಣ, ಇಂದು ದಿನಪೂರ್ತಿ ಯಾವುದೇ ವಹಿ ವಾಟುಗಳು ನಡೆಯಲಿಲ್ಲ.

ಸ್ಪರ್ಧೆ ಬಗ್ಗೆ ಯೋಚನೆ ಮಾಡಿ ಹೇಳ್ತೀನಿ

ಚಿಕಿತ್ಸಾ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ತಂದಿದ್ದೀರಾ. ಇದೇ ರೀತಿ ರಾಷ್ಟ್ರಮಟ್ಟದಲ್ಲೂ ಈ ರೀತಿಯ ಸುಧಾರಣೆ ಯಾಕೆ ತರಬಾರದು ಎಂದು ಹೇಳುತ್ತಿದ್ದಾರೆ. ಮುಂದೆ ಸ್ಪರ್ಧೆಯ ಬಗ್ಗೆ ತೀರ್ಮಾನ ಮಾಡಿದರೆ ಹೇಳುತ್ತೀನಿ ಎಂದು ಸ್ಪಷ್ಟನೆ ನೀಡಿದರು. ನಾನು ಈಗಲೂ ಆಲೋಚನೆಯಲ್ಲಿಯೇ ಇದ್ದೀನಿ. ಲೋಕಸಭೆ ಪ್ರವೇಶ ಕೇವಲ ರಾಜಕೀಯ ಮೂಲಕವೇ ಅಲ್ಲ. ನನ್ನ ಅರ್ಥದಲ್ಲಿ ಲೋಕಸಭೆನೇ ಬೇರೆ, ರಾಜಕೀಯವೇ ಬೇರೆ. ಸದ್ಯ ಆಲೋಚನೆಯಲ್ಲಿ ಇದ್ದೀನಿ. ಮುಂದೆ ಈ ಬಗ್ಗೆ ಸ್ಪಷ್ಟ ನಿಲುವು ಹೇಳುತ್ತೇನೆ ಎಂದರು. ಆರೋಗ್ಯ ಕ್ಷೇತ್ರದಲ್ಲಿ ಮಾಡಿರೋದು ಜನ ಸೇವೆ. ರಾಷ್ಟ್ರಮಟ್ಟದಲ್ಲಿ ಜನಸೇವೆಗೆ ಅವಕಾಶವಿದೆ ಹೋಗಿ ಎನ್ನುತ್ತಿದ್ದಾರೆ. ಒಂದು ಜಿಲ್ಲೆಗೆ ಹೋದಾಗ ಆ ಜಿಲ್ಲೆಯವರು ಹೇಳುತ್ತಾರೆ. ನಾಳೆ ಮೈಸೂರಿಗೆ ಹೋಗುತ್ತಿದ್ದೇನೆ. ಹೋದಲ್ಲಿ ಎಲ್ಲಾ ಅಲ್ಲಿ ನಿಲ್ಲುತ್ತೀರಾ ಎಂದು ಜನರು ಕೇಳುತ್ತಿದ್ದಾರೆ. ಈ ರಾಜಕೀಯ ಕ್ಷೇತ್ರಕ್ಕೆ ಹೋಗಬೇಕಾ ಬೇಡವಾ ಎಂಬ ನಿರ್ಧಾರವೇ ಮಾಡಿಲ್ಲ ಎಂದು ತಿಳಿಸಿದರು.

ಇನ್ನು ನೋಂದಣಿಗೆ ಇ–ಆಸ್ತಿ ಕಡ್ಡಾಯ

ಮಾಡಿಕೊಳ್ಳಲು ಇದು ಸಹಕಾರಿಯಾಗಿದೆ. ಉಪನೋಂದಣಿ ಕಚೇರಿಯಿಂದ ನೀಡುವ ಸೇವೆಗಳನ್ನು ಸಾರ್ವಜನಿಕರು ಆನ್‌ಲೈನ್ ಮುಖಾಂತರ ಪಡೆಯಬಹುದಾಗಿದೆ.

ಸಾರ್ವಜನಿಕರು ತಮ್ಮ ಆಸ್ತಿಯ ವಿವರ, ಮೂಲ ದಾಖಲೆಗಳನ್ನು ಆನ್‌ಲೈನ್ ಮೂಲಕ ನೇರವಾಗಿ ಉಪನೋಂದಣಾಧಿಕಾರಿಗೆ ಕಳುಹಿಸಬಹುದಾಗಿದೆ. ಅಧಿಕಾರಿಗಳು ಪರಿಶೀಲಿಸಿದ ನೋಂದಣಿಗೆ ತಗಲುವ ವೆಚ್ಚವನ್ನು ಆನ್‌ಲೈನ್ ಮೂಲಕ ಪಾವತಿಸಿ ನಮಗೆ ಬೇಕಾದ ದಿನಾಂಕ, ಸಮಯವನ್ನು ನಿಗದಿಪಡಿಸಿಕೊಳ್ಳಲು ಅವಕಾಶವಿದೆ. ನಿಗದಿತ ದಿನಾಂಕದಂದು ಕೆಲವೇ ನಿಮಿಷದಲ್ಲಿ ಭಾವಚಿತ್ರ, ಸಹಿ, ಹೆಬ್ಬೆಟ್ಟಿನ ಗುರುತು ತೆಗೆದುಕೊಂಡು ನೋಂದಣಿ ಮಾಡಿಕೊಡಲಾಗುತ್ತದೆ.

ವಿಧಾನಸಭೆಯಲ್ಲಿ ಕರ್ನಾಟಕ ಸ್ಟ್ಯಾಂಪ್ ವಿಧೇಯಕ ಅಂಗೀಕಾರ: ವಿಧಾನಸಭೆಯಲ್ಲಿ ಕರ್ನಾಟಕ ಸ್ಟ್ಯಾಂಪ್(ತಿದ್ದುಪಡಿ) ವಿಧೇಯಕ ಅಂಗೀಕಾರವಾಗಿದೆ. ಪಾರದರ್ಶಕತೆ ಕಾಯ್ದುಕೊಳ್ಳಲು ಡಿಡಿ ವ್ಯವಸ್ಥೆ ತೆಗೆದುಹಾಕಿ ಡಿಜಿಟಲ್ ಪಾವತಿ ವ್ಯವಸ್ಥೆ ಅನುಷ್ಠಾನ ಮಾಡಲಾಗಿದೆ. ಈ ಮೂಲಕ ಪಾರದರ್ಶಕತೆ ಹಾಗೂ ಸೋರಿಕೆ ತಡೆಗಟ್ಟಲು ಅನುಕೂಲವಾಗಲಿದೆ.

ಮಂಡ್ಯ ಬಿಟ್ಟು ಬೇರೆಲ್ಲೂ ಹೋಗಲ್ಲ

ಇರುವ ಪಕ್ಷ. ಯಾವುದಾದರೂ ಕಾರ್ಯಕ್ರಮಗಳಲ್ಲಿ ಸಿಕ್ಕಾಗ ಪಕ್ಷಕ್ಕೆ ಕರೆದಿದ್ದಾರೆ. ಆದರೆ ಅದನ್ನ ಅಧಿಕೃತ ಆಹ್ವಾನ ಎನ್ನಲು ಆಗಲ್ಲ. ಚಲುವರಾಯಸ್ವಾಮಿ ನನ್ನನ್ನು ವೈಯಕ್ತಿಕವಾಗಿ ಕೇಳಿದರೆ ಹೇಳುತ್ತೇನೆ. ಆದರೆ ಕರೆದವರ ಹೆಸರು ಬಹಿರಂಗ ಮಾಡಿ ಮುಜುಗರ ಮಾಡಲ್ಲ. ನಾಟಿ ನಾವು ಮಾಡುವ ಅಡುಗೆಯಲ್ಲಿಟ್ಟು ಕೊಳ್ಳಬೇಕು. ಪಾರ್ಲಿಮೆಂಟಿಗೆ ಅದು ಅನ್ವಯ ಆಗೋಲ್ಲ ಎಂದು ತಿರುಗೇಟು ನೀಡಿದರು.

ಈ ನೆಲ, ಜಲ, ಜನರ ಸಮಸ್ಯೆ ಬಗ್ಗೆ ಧ್ವನಿ ಎತ್ತುವ ಕನಿಷ್ಠ ಅರ್ಹತೆ ಇರಬೇಕು. ಸ್ವಾಭಿಮಾನ ಪದ ಕಳೆದ ಚುನಾವಣೆಯಿಂದ ಟ್ರೆಂಡ್ ಆಗಿದೆ, ಒಳ್ಳೆಯದು. ಯಾವುದೇ ನಿರೀಕ್ಷೆಗಳಿಲ್ಲದೆ ರಾಜಕೀಯಕ್ಕೆ ಬಂದವಳು ನಾನು. ಜನರ ಒತ್ತಾಯದ ಮೇರೆಗೆ ರಾಜಕೀಯಕ್ಕೆ ಬಂದೆ. ಅಂಬರೀಶ್ ಅವರ ಮೇಲಿನ ಜನರ ಅಭಿಮಾನ ನನ್ನ ರಾಜಕೀಯಕ್ಕೆ ಕರೆದುಕೊಂಡು ಬಂತು. ನನ್ನ ಗಮನಕ್ಕೆ ಬಂದ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಿದ್ದೇನೆ. ನನ್ನ ಕೈಲಾದಷ್ಟು ಪ್ರಯತ್ನ ಮಾಡಿದ್ದೇನೆ. ನನ್ನ ಸ್ಪರ್ಧೆ ಬಗ್ಗೆ ಕನ್ಫರ್ಮ್ ಮಾಡಬೇಕಿರುವುದು ಜನ, ಪಕ್ಷ ಎಂದು ಹೇಳಿದರು.

ಬಿಜೆಪಿಯಿಂದಲೂ ನನಗೆ ಬೆಂಗಳೂರು ಉತ್ತರದ ಬಗ್ಗೆ ಮಾತಾಡಿಲ್ಲ. ನಾನು ಮಂಡ್ಯ ಬಿಟ್ಟು ಬೇರೆ ಎಲ್ಲೂ ಹೋಗಲ್ಲ. ಮಂಡ್ಯವನ್ನು ಬಿಜೆಪಿ ಉಳಿಸಿಕೊಳ್ಳಬೇಕು. ಬಿಜೆಪಿ ಮಂಡ್ಯ ಟಿಕೆಟ್ ಉಳಿಸಿಕೊಳ್ಳುತ್ತೆ ಎಂಬ ವಿಶ್ವಾಸ ಇದೆ ಎಂದರು.

ಬೇಬಿಬೆಟ್ಟದ ಟ್ರಯಲ್ ಬ್ಲಾಸ್ಟ್‌ಗೆ ವಿರೋಧ: ಬೇಬಿಬೆಟ್ಟ ಟ್ರಯಲ್ ಬ್ಲಾಸ್ಟ್ ವಿಚಾರದ ಬಗ್ಗೆ ಮಾತನಾಡಿ, ಟ್ರಯಲ್ ಬ್ಲಾಸ್ಟ್‌ಗೆ ನನ್ನ ವಿರೋಧವಿದೆ. ಕೆಆರ್‌ಎಸ್ ಸುತ್ತಮುತ್ತ ಗಣಿಗಾರಿಕೆ ಮಾಡದಂತೆ ಕೋರ್ಟ್ ಆದೇಶ ಇದೆ. ಗಣಿಗಾರಿಕೆ ಮಾಡಬಾರದು ಎಂದ ಮೇಲೆ ಟ್ರಯಲ್ ಬ್ಲಾಸ್ಟ್ ಅಗತ್ಯ ಏನಿದೆ.? ಟ್ರಯಲ್ ಬ್ಲಾಸ್ಟ್‌ಗೂ ಅಲ್ಲಿ ನಡೆಯುವ ಗಣಿಗಾರಿಕೆಗೂ ವ್ಯತ್ಯಾಸ ಇದೆ. ಟ್ರಯಲ್ ಬ್ಲಾಸ್ಟ್ ನಡೆಸಿ ಏನು ತೊಂದರೆ ಇಲ್ಲ ಎನ್ನಬಹುದು. ಗಣಿಗಾರಿಕೆಯಿಂದ ಕೆಆರ್‌ಎಸ್ ಡ್ಯಾಂಗೆ ಅಪಾಯವಿದೆ. ಬೇಬಿಬೆಟ್ಟದಲ್ಲಿ ನಡೆಯುತ್ತಿದ್ದದ್ದು ಅಕ್ರಮ ಗಣಿಗಾರಿಕೆ. ಹಾಗಾಗಿ ಟ್ರಯಲ್ ಬ್ಲಾಸ್ಟ್‌ಗೆ ನನ್ನ ವಿರೋಧವಿದೆ ಎಂದರು. ಬೇಬಿಬೆಟ್ಟ ರಾಜಮನೆತನಕ್ಕೆ ಸೇರಿದ್ದು ಅನ್ನೋ ವಿಚಾರ ಕೋರ್ಟ್‌ನಲ್ಲಿದೆ. ಹೀಗಿರುವಾಗ ಟ್ರಯಲ್ ಬ್ಲಾಸ್ಟ್ ನಡೆಸೋದು ಎಷ್ಟು ಸರಿ. ಟ್ರಯಲ್ ಬ್ಲಾಸ್ಟ್ ವಿರುದ್ಧ ನನ್ನ ಹೋರಾಟ ಮುಂದುವರೆಯಲಿದೆ. ಶಾಸಕ ದರ್ಶನ್ ಪುಟ್ಟಣ್ಣಯ್ಯ ಹೇಳಿಕೆ ನನಗೆ ಆಶ್ಚರ್ಯ ತಂದಿದೆ. ಅಕ್ರಮ ಗಣಿಗಾರಿಕೆ ವಿರುದ್ಧ ನನ್ನ ಹೋರಾಟಕ್ಕೆ ಸ್ಪೂರ್ತಿ ರೈತ ಸಂಘ. ಈಗ ಅವರ ಪಕ್ಷದ ಶಾಸಕರೇ ಹೀಗೆ ಹೇಳುತ್ತಿದ್ದಾರೆ ಅಂದರೆ ವಿರೋಧಿಸಬೇಕು. ಕೆಆರ್‌ಎಸ್ ಡ್ಯಾಂ ಸುತ್ತ ಗಣಿಗಾರಿಕೆ ಮಾಡೋದು ಅಪಾಯ ಎಂದು ಕೋರ್ಟ್ ಹೇಳಿದೆ ಎಂದು ಹೇಳಿದರು.

ಫೆ.24, ಮೈಸೂರಲ್ಲಿ ಅಂತರ ರಾಷ್ಟ್ರೀಯ ವಿಚಾರ ಸಂಕಿರಣ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಎಂ.ದೇವಿಕಾ ಮಾತನಾಡಿದರು.

ಮೈಸೂರು, ಫೆ.21(ಜಿಎ)–ಮೈಸೂರಿನ ಕೃಷ್ಣಮೂರ್ತಿಪುರಂನ ಶಾರದಾ ವಿಲಾಸ ಕಾಲೇಜಿನಲ್ಲಿ ಫೆ.24ರಂದು ಬೆಳಿಗ್ಗೆ 9ಕ್ಕೆ 'ನ್ಯೂರೋ ಡಿಜನರೇಟಿವ್ ಡಿಸಾರ್ಡರ್ಸ್ ಅಂಡ್ ಇನ್ಫ್ಲೆಮೇಷನ್' ಎಂಬ ವಿಷಯದ ಅಂತರರಾಷ್ಟ್ರೀಯ ವಿಚಾರ ಸಂಕಿರಣ ನಡೆಯಲಿದೆ ಎಂದು ಕಾಲೇಜಿನ ಪ್ರಾಂಶುಪಾಲೆ ಎಂ.ದೇವಿಕಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಅಮೇರಿಕಾದ ಪೆನ್ಸಿಲ್ವೇನಿಯ ಸ್ಟೇಟ್ ಯುನಿವರ್ಸಿಟಿಯ ಉಪನ್ಯಾಸಕ ಕೆ.ಸಂದೀಪ್ ಪ್ರಭು ಮುಖ್ಯ ಭಾಷಣ ಮಾಡಲಿದ್ದಾರೆ. ಪ್ರಭು ಸೇರಿದಂತೆ ನಾಲ್ವರು ಸಂಪನ್ಮೂಲ ವ್ಯಕ್ತಿಗಳು ವಿಷಯ ಕುರಿತು ತಮ್ಮ ವಿಚಾರ ಮಂಡಿಸಲಿದ್ದಾರೆ ಎಂದು ವಿವರಿಸಿದರು.

ನರಮಂಡಲದ ಸಮಸ್ಯೆಯಿಂದ ಉಂಟಾಗುವ ಡಿಮೆನ್ಶಿಯಾ, ಅಲ್ಜೈಮರ್ ಮುಂತಾದ ಕಾಯಿಲೆಗಳ ಹಾಗೂ ಅದನ್ನು ನಿರ್ವಹಿಸುವ ವಿಧಾನಗಳ ಕುರಿತು ವಿಚಾರ ಸಂಕಿರಣ ಬೆಳಕು ಬೀರಲಿದೆ. ವಿವಿಧ ಭಾಗಗಳಿಂದ ವಿದ್ಯಾರ್ಥಿಗಳು ಹಾಗೂ ಸಂಶೋಧನಾ ಅಭ್ಯರ್ಥಿಗಳು ಭಾಗವಹಿಸುವರು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಸಸ್ಯಶಾಸ್ತ್ರ ವಿಭಾಗದ ಉಪನ್ಯಾಸಕ ಬಿ.ಎಂ.ಯಶವಂತ್, ಸೂಕ್ಷ್ಮ ಜೀವಶಾಸ್ತ್ರ ವಿಭಾಗದ ಮುಖ್ಯಸ್ಥ ಆರ್.ಎ.ಮಂಜುನಾಥ್, ಕನ್ನಡ ಉಪನ್ಯಾಸಕ ಆನಂದ್ ಉಪಸ್ಥಿತರಿದ್ದರು.

ಕನ್ನಡ ಚಿತ್ರರಂಗದ ಸಿಬ್ಬಂದಿಗಾಗಿ ಕರ್ನಾಟಕ ಫಿಲಂ ಅಸೋಸಿಯೇಷನ್ ಅಸ್ತಿತ್ವಕ್ಕೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಫಿಲಂ ಅಸೋಸಿಯೇಷನ್ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು,ಫೆ.21(ಜಿಎ)–ಕನ್ನಡ ಚಿತ್ರರಂಗ ಸಿಬ್ಬಂದಿಯ ಅನುಕೂಲಕ್ಕಾಗಿ ಕರ್ನಾಟಕ ಫಿಲಂ ಅಸೋಸಿಯೇಷನ್ ಎಂಬ ನೂತನ ಸಂಸ್ಥೆಯನ್ನು ಸ್ಥಾಪಿಸಲಾಗಿದೆ ಎಂದು ಅಸೋಸಿಯೇಷನ್ ಅಧ್ಯಕ್ಷ ಎಂ.ಎಸ್.ರವೀಂದ್ರ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಚಿತ್ರರಂಗಕ್ಕೆ ಸಂಬಂಧಪಟ್ಟ ಎಲ್ಲ ವಿಭಾಗದವರಿಗೂ ಸಂಸ್ಥೆಯಿಂದ ಸದಸ್ಯತ್ವ ಹಾಗೂ ಗುರುತಿನ ಚೀಟಿ ನೀಡಲಾಗುವುದು. ಭವಿಷ್ಯದಲ್ಲಿ ಅವರು ಎದುರಿಸುವ ಎಲ್ಲ ರೀತಿಯ ಸಮಸ್ಯೆಗಳಿಗೆ ಸಹಕರಿಸುವುದು ತಮ್ಮ ಉದ್ದೇಶವಾಗಿದೆ ಎಂದರು.

ಸದಸ್ಯತ್ವ ಪಡೆದುಕೊಳ್ಳುವ ಆಸಕ್ತರು ಮೊ.ಸಂ. 99008 44344 ಸಂಪರ್ಕಿಸಬಹುದು ಎಂದರು ಸುದ್ದಿಗೋಷ್ಠಿಯಲ್ಲಿ ಸಂಘದ ಸಂಪರ್ಕಾಧಿಕಾರಿ ಎನ್.ಪ್ರಹ್ಲಾದ್, ಸದಸ್ಯೆ ರಾಧಮ್ಮ, ನಟರಾದ ನಂಜುಂಡಸ್ವಾಮಿ, ಧನ್ಯಕುಮಾರ್ ಉಪಸ್ಥಿತರಿದ್ದರು.

ಭೂ, ಜಲ ಸಾಹಸ ಕ್ರೀಡೆಗಳಿಗೆ ಅರ್ಜಿ ಆಹ್ವಾನ

ಮೈಸೂರು,ಫೆ.21–ಮೈಸೂರು ಜಿಲ್ಲೆಯ ವ್ಯಾಪ್ತಿಯ ಭೂ ಸಾಹಸ ಮತ್ತು ಜಲ ಸಾಹಸ ಕ್ರೀಡೆಗಳನ್ನು 15 ವರ್ಷ ಮೇಲ್ಪಟ್ಟ ಯುವಕ, ಯುವತಿಯರಿಗೆ (ಪ್ರತಿಯೊಂದು ಕ್ರೀಡೆಯಲ್ಲಿಯೂ 50 ಕ್ರೀಡಾಪಟುಗಳಿಗೆ) ನಡೆಸಲಾಗುತ್ತಿದ್ದು, ಅರ್ಜಿಯನ್ನು ಆಹ್ವಾನಿಸಲಾಗಿದೆ. ಮೈಸೂರು ಜಿಲ್ಲೆಯಿಂದ ಭಾಗವಹಿಸಲು ಇಚ್ಛಿಸುವ ಅಭ್ಯರ್ಥಿಗಳು ಫೆ.29 ರೊಳಗೆ ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಚಾಮುಂಡಿ ವಿಹಾರ ಕ್ರೀಡಾಂಗಣದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ದೂ.ಸಂ: 0821–2564179ನ್ನು ಮತ್ತು ಅಥ್ಲೆಟಿಕ್ಸ್ ತರಬೇತುದಾರರಾದ ರಾಮಸ್ವಾಮಿ ಅವರ ಮೊ: 9449300330 ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ–ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉದ್ಯೋಗ ಖಾತ್ರಿ ಯೋಜನೆಯಡಿ ಅವ್ಯವಹಾರ, ಪ್ರತಿಭಟನೆ



ಮೈಸೂರು ಜಿಪಂ ಮುಂಭಾಗ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಅವ್ಯವಹಾರವಾಗಿದೆ ಎಂದು ಆರೋಪಿಸಿ ಗ್ರಾಪಂ ಸದಸ್ಯ ಬಸವರಾಜು ಪ್ರತಿಭಟನೆ ನಡೆಸಿದರು.

ಮೈಸೂರು, ಫೆ.21(ಜಿಎ)–ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತುಂಬಲ ಗ್ರಾಮ ಪಂಚಾಯಿತಿಯಲ್ಲಿ 14 ಮತ್ತು 15ನೇ ಹಣಕಾಸು ಯೋಜನೆ ಹಾಗೂ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಅವ್ಯವಹಾರ, ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿ ತುಂಬಲ ಗ್ರಾಮ ಪಂಚಾಯಿತಿ ಸದಸ್ಯ ಬಸವರಾಜು ಜಿಪಂ ಮುಂಭಾಗ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಿದರು.

ತುಂಬಲ ಗ್ರಾ.ಪಂ ಅಭಿವೃದ್ಧಿ ಅಧಿಕಾರಿ ಧನಂಜಯ ಅವರು 14 ಮತ್ತು 15ನೇ ಹಣಕಾಸು ಯೋಜನೆ ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಅವ್ಯವಹಾರ ನಡೆಸಿದ್ದಾರೆ. ಸಾಮಾನ್ಯ ಸಭೆಯಲ್ಲಿ ತುಂಬಲ ಗ್ರಾ.ಪಂ ಸದಸ್ಯರಿಗೆ ತಿಳಿಸದೆ ಅನುದಾನವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ. ಈ ಕುರಿತು 2023ರಲ್ಲಿ ಜಿ.ಪಂ ಸಿಇಒಗೆ ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಹೀಗಾಗಿ ಕೂಡಲೇ ಧನಂಜಯ ಅವರನ್ನು ಸೇವೆಯಿಂದ ವಜಾಗೊಳಿಸಿ ಕಾನೂನು ರೀತಿ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಮೈಸೂರು ಜಿಲ್ಲಾದ್ಯಂತ ಸಂಚಾರಿ ನೇತ್ರ ಚಿಕಿತ್ಸಾ ಘಟಕ ಸೇವೆ

ಸಮುದಾಯ ಆರೋಗ್ಯ ಕೇಂದ್ರಗಳು ಮಾತ್ರವಲ್ಲ ದೂರದ ಗ್ರಾಮಗಳಲ್ಲೂ ಕಣ್ಣಿನ ಪೊರೆ ಉಚಿತ ತಪಾಸಣಾ ಶಿಬಿರ



ಮೈಸೂರಿಗೆ ಇತ್ತೀಚೆಗೆ ಬಂದ 'ಸಂಚಾರಿ ನೇತ್ರ ಚಿಕಿತ್ಸಾ ಘಟಕ'ದ ವಾಹನಕ್ಕೆ ಜಿಲ್ಲಾ ಪಂಚಾಯಿತಿ ಸಿಇಓ ಕೆ.ಎಂ.ಗಾಯತ್ರಿ ಹಸಿರು ನಿಶಾನೆ ತೋರಿದರು. ಈ ವೇಳೆ ಡಿಎಚ್‌ಓ ಡಾ.ಪಿ.ಸಿ.ಕುಮಾರಸ್ವಾಮಿ, ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಸೇರಿದಂತೆ ಆರೋಗ್ಯ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.

ಈ ಹಿಂದೆ ಆರೋಗ್ಯ ಇಲಾಖೆಯಿಂದ ವಾಹನ ಸೌಲಭ್ಯವಿಲ್ಲದ ಕಾರಣದಿಂದಾಗಿ ನಗರ ವ್ಯಾಪ್ತಿಯಲ್ಲಿ ಮಾತ್ರ ತಪಾಸಣೆ ಮಾಡಲಾಗುತ್ತಿತ್ತು. ಆದರೆ, ಈಗ ರಾಷ್ಟ್ರೀಯ ಅಂಧತ್ವ ನಿಯಂತ್ರಣಾ ಕಾರ್ಯಕ್ರಮದಡಿ ಮೈಸೂರು ಜಿಲ್ಲೆಗೆ ಒಂದು ಸಂಚಾರಿ ನೇತ್ರ ಘಟಕದಿಂದ ಬಸ್ ನೀಡಿರುವುದರಿಂದ ಗ್ರಾಮಾಂತರ ಭಾಗದ ಜನರಿಗೆ ಮತ್ತು ಶಾಲಾ ವಿದ್ಯಾರ್ಥಿಗಳಿಗೆ ಮತ್ತಷ್ಟು ಅನುಕೂಲವಾಗಲಿದ್ದು, ಮುಂದಿನ ದಿನಗಳಲ್ಲಿ ಶಿಬಿರಗಳ ಸಂಖ್ಯೆಯನ್ನು ಹೆಚ್ಚಿಸಲಾಗುವುದು
–ಡಾ.ಪಿ.ಸಿ.ಕುಮಾರಸ್ವಾಮಿ, ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ

ಮೈಸೂರು,ಫೆ.21(ಜಿಎ)–ಮೈಸೂರಿಗೆ ಆಗಮಿಸಿದ 'ಸಂಚಾರಿ ನೇತ್ರ ಚಿಕಿತ್ಸಾ ಘಟಕ'ದ ಬಸ್. ಇನ್ನು ಮುಂದೆ ಮೈಸೂರು ಜಿಲ್ಲೆಯ ಸಮುದಾಯ ಆರೋಗ್ಯ ಕೇಂದ್ರ ಮತ್ತು ದೂರದ ಗ್ರಾಮಗಳಲ್ಲಿ ಕಣ್ಣಿನ ಪೊರೆ ಉಚಿತ ತಪಾಸಣಾ ಶಿಬಿರ ನಡೆಯಲಿದೆ.

ಈ ಹಿಂದೆ ಆರೋಗ್ಯ ಇಲಾಖೆಯಿಂದ ವಾಹನ ಸೌಲಭ್ಯವಿಲ್ಲದ ಕಾರಣ ನಗರ ವ್ಯಾಪ್ತಿಯಲ್ಲಿ ಮಾತ್ರ ತಪಾಸಣೆ ಮಾಡಲಾಗುತ್ತಿತ್ತು. ಆದರೆ, ಈಗ ರಾಷ್ಟ್ರೀಯ ಅಂಧತ್ವ ನಿಯಂತ್ರಣಾ ಕಾರ್ಯಕ್ರಮದಡಿ ಮೈಸೂರು ಜಿಲ್ಲೆಗೆ ಒಂದು ಸಂಚಾರಿ ನೇತ್ರ ಘಟಕದ ಬಸ್ ಅನ್ನು ರಾಜ್ಯ ಸರ್ಕಾರ ನೀಡಿದ್ದು, ಇದರಿಂದ ಜಿಲ್ಲೆಯ ಒಂಭತ್ತು ಸಮುದಾಯ ಆರೋಗ್ಯ ಕೇಂದ್ರ ಮತ್ತು ದೂರದ ಗ್ರಾಮಗಳಲ್ಲಿ ಕಣ್ಣಿನ ತಪಾಸಣೆ ನಡೆಸಲು ಅನುಕೂಲವಾಗಲಿದೆ.

ಸಂಚಾರಿ ನೇತ್ರ ಚಿಕಿತ್ಸಾ ಘಟಕವು ಮೈಸೂರು ನಗರದ ಜಯನಗರ, ಮೈಸೂರು ಗ್ರಾಮಾಂತರದ ಜಯಪುರ, ನಂಜನಗೂಡಿನ ಹುಲ್ಲಹಳ್ಳಿ, ತಿ.ನರಸೀಪುರದ ತಲಕಾಡು, ಮೂಗೂರು, ಬನ್ನೂರು, ಕೆ.ಆರ್.ನಗರದ ಸಾಲಿಗ್ರಾಮ, ಹೆಚ್.ಡಿ.ಕೋಟೆಯ ಸರಗೂರಿನ ಮೈಸೂರು ಜಿಲ್ಲೆಯ ಈ 9 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ನಿಗದಿತ ದಿನಗಳಲ್ಲಿ ಸಂಚರಿಸಿ, ತಪಾಸಣೆ ವೇಳೆ ಆಯ್ಕೆಯಾದ ಪೊರೆ ರೋಗಿಗಳನ್ನು ಹತ್ತಿರದ ತಾಲೂಕು ಆಸ್ಪತ್ರೆ ಹಾಗೂ ಜಿಲ್ಲಾಸ್ಪತ್ರೆಗೆ ಕರೆತಂದು ಶಸ್ತ್ರಚಿಕಿತ್ಸೆಯನ್ನು ನಡೆಸಿ, ಶಸ್ತ್ರಚಿಕಿತ್ಸೆಯಾದ ನಂತರ ಫಲಾನುಭವಿಗಳನ್ನು ಪುನಃ ಕರೆತಂದ ಸ್ಥಳಕ್ಕೆ ಬಿಡುವ ವ್ಯವಸ್ಥೆಯನ್ನು ಇಲಾಖೆ ಮಾಡಿಕೊಂಡಿದೆ.

ಆರೋಗ್ಯ ಇಲಾಖೆ ನಿಗದಿಪಡಿಸಿರುವ ದಿನಗಳಂತೆ ತಿಂಗಳ ಮೊದಲನೇ ವಾರ 'ಸಂಚಾರಿ ನೇತ್ರ ಚಿಕಿತ್ಸಾ ಘಟಕ'ವು ಸೋಮವಾರದಿಂದ ಗುರುವಾರದವರೆಗೂ ಮೈಸೂರು ನಗರದ ಜಯನಗರ ಮತ್ತು ಗ್ರಾಮಾಂತರ ಕೇಂದ್ರವಾದ ಜಯಪುರದಲ್ಲಿ ಸಂಚರಿಸಲಿದೆ. ತಿಂಗಳ ಎರಡನೇ ವಾರ ನಂಜನಗೂಡಿನ ತಗಡೂರು ಮತ್ತು ಹುಲ್ಲಹಳ್ಳಿಯಲ್ಲಿ ತಪಾಸಣೆ ನಡೆಸಲಿದೆ. ತಿಂಗಳ ಮೂರನೇ ವಾರದಂದು ತಿ.ನರಸೀಪುರ ತಾಲೂಕಿನ ತಲಕಾಡು, ಮೂಗೂರು ಮತ್ತು ಬನ್ನೂರಿನಲ್ಲಿ ಸಂಚರಿಸಲಿದ್ದು, ತಿಂಗಳ ನಾಲ್ಕನೇ ವಾರ ಕೆ.ಆರ್.ನಗರದ ಸಾಲಿಗ್ರಾಮ ಮತ್ತು ಹೆಚ್.ಡಿ.ಕೋಟೆಯ ಸರಗೂರಿನ ಸಮುದಾಯದ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ತಪಾಸಣೆ ನಡೆಸಲಿದ್ದಾರೆ.

'ಸಂಚಾರಿ ನೇತ್ರ ಚಿಕಿತ್ಸಾ ಘಟಕ'ದ ವಾಹನದಲ್ಲಿ ಒಬ್ಬರು ನೇತ್ರ ತಜ್ಞರು, ನೇತ್ರಾಧಿಕಾರಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳು ಮತ್ತು ಶುಶ್ರೂಷಣಾಧಿಕಾರಿಗಳು ಇರಲಿದ್ದಾರೆ. ವಾಹನದಲ್ಲಿಯೂ ತಪಾಸಣೆಗೆ ಅನುಕೂಲವಾಗುವಂತೆ ಎಲ್ಲಾ ರೀತಿಯ ಸಲಕರಣೆಗಳನ್ನು ನೀಡಲಾಗಿದೆ. ಕಣ್ಣಿನ ಪೊರೆ, ಡಯಾಬಿಟಿಕ್ ರೆಟಿನೋಪತಿ, ಗ್ಲುಕೋಮಾ, ಕಾರ್ನಿಯ ಅಸ್ಪಷ್ಟತೆ ಮುಂತಾದ ಸಮಸ್ಯೆಗಳ ತಪಾಸಣೆ ಮಾಡಲಾಗುತ್ತದೆ. ಶಾಲೆಗಳಿಗೂ ತೆರಳಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಕಣ್ಣಿನ ತಪಾಸಣೆ ಮಾಡಲು ಸಹಕಾರಿಯಾಗಿದೆ. ಜೊತೆಗೆ ಆಡಿಯೋ, ವಿಡಿಯೋ ಮತ್ತು ಪೋಸ್ಟರ್ ಪ್ರದರ್ಶನಗಳ ಮೂಲಕ ಮಾಹಿತಿ ನೀಡುವ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ.

ಮೊದಲ ಹಂತವಾಗಿ ರಾಜ್ಯದ ಬೆಳಗಾವಿ, ಬೆಂಗಳೂರು ಗ್ರಾಮಾಂತರ, ಕೋಲಾರ, ಹಾಸನ, ಉಡುಪಿ, ತುಮಕೂರು, ಬೆಂಗಳೂರು ನಗರ, ಬೀದರ್, ಬಳ್ಳಾರಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಚಾಮರಾಜನಗರ, ಚಿಕ್ಕಮಗಳೂರು, ಹಾವೇರಿ, ಕೊಪ್ಪಳ, ಕಲಬುರಗಿ ಮತ್ತು ಧಾರವಾಡ ಸೇರಿದಂತೆ 17 ಜಿಲ್ಲೆಗಳಲ್ಲಿ ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಪ್ರಸಕ್ತ ವರ್ಷ ದಾವಣಗೆರೆ, ಮಂಡ್ಯ, ಮೈಸೂರು ಸೇರಿದಂತೆ ಹೆಚ್ಚುವರಿಯಾಗಿ ಎಂಟು ಜಿಲ್ಲೆಗಳಿಗೆ ಸಂಚಾರಿ ಘಟಕದ ಸೇವೆಗಳು ಲಭ್ಯವಾಗಲಿದೆ.

ಗ್ರಾಮೀಣ ಮತ್ತು ನಗರ ಪ್ರದೇಶದಿಂದ ದೂರದಲ್ಲಿರುವ ಪ್ರದೇಶಗಳಿಗೆ ಕಣ್ಣಿನ ಆರೈಕೆ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಒದಗಿಸಲು ಈ ಸಂಚಾರಿ ಘಟಕಗಳು ಅಗತ್ಯವಾಗಿ ನೆರವಾಗಲಿದೆ.

ರಾಷ್ಟ್ರೀಯ ಅಂಧತ್ವ ನಿಯಂತ್ರಣಾ ಕಾರ್ಯಕ್ರಮದ ಫಲಾನುಭವಿಗಳು

2022–23ರಲ್ಲಿ 437 ಮಂದಿ
2023ರಿಂದ 24ರ ಜನವರಿ ಅಂತ್ಯದವರೆಗೆ 476 ಮಂದಿ

2022–23ನೇ ಸಾಲಿನಲ್ಲಿ ಶಾಲೆಗಳಲ್ಲಿ	
ತಪಾಸಣೆ	– 1,11,974
ಕಣ್ಣಿನ ಸಮಸ್ಯೆ ಇರುವವರು	– 2,329
ಕನ್ನಡಕ ಪಡೆದುಕೊಂಡವರು	– 1,972
2023–24ರ ಜನವರಿವರೆಗೆ	
ತಪಾಸಣೆ	– 1,98,436
ಕಣ್ಣಿನ ಸಮಸ್ಯೆ ಇರುವವರು	– 4,800
ಕನ್ನಡಕ ಪಡೆದುಕೊಂಡವರು	– 4,800
2022–23 ಹಿರಿಯ ನಾಗರಿಕರು	
ದೃಷ್ಟಿ ದೋಷ	– 3,302
ಕನ್ನಡಕ ಪಡೆದುಕೊಂಡವರು	– 3200
2023–24	
ದೃಷ್ಟಿ ದೋಷ	– 8,792
ಕನ್ನಡಕ ಪಡೆದುಕೊಂಡವರು	– 7,500

ಅನಿವಾಸಿ ಭಾರತೀಯರ ಸಚಿವಾಲಯ ಪ್ರಾರಂಭ

- ಗೃಹ ಸಚಿವ ಡಾ.ಜಿ. ಪರಮೇಶ್ವರ್ ವಿಧಾನಸಭೆಯಲ್ಲಿ ಘೋಷಣೆ
- 15ಕ್ಕೂ ಅಧಿಕ ಮಂದಿ ಅನಿವಾಸಿ ಭಾರತೀಯರಿಂದ ಕಲಾಪ ವೀಕ್ಷಣೆ
- ಕೇರಳ ರಾಜ್ಯ ಮಾದರಿ ಅನಿವಾಸಿ ಭಾರತೀಯರಿಗೆ ಅನುಕೂಲ



ಬೆಂಗಳೂರು, ಫೆ.21(ಕೆಎಂಶಿ)–ಕೇರಳ ಮಾದರಿಯಲ್ಲಿ ಅನಿವಾಸಿ ಭಾರತೀಯರ ಸಚಿವಾಲಯ ತೆರೆಯುವುದಾಗಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ವಿಧಾನಸಭೆಗಿಂದು ಭರವಸೆ ನೀಡಿದರು.

ಸಭಾಧ್ಯಕ್ಷರ ಗ್ಯಾಲರಿಯಲ್ಲಿ ಅನಿವಾಸಿ ಭಾರತೀಯರ ಸಮಿತಿ ಉಪಾಧ್ಯಕ್ಷರಾದ ಆರತಿ ಕೃಷ್ಣ ನೇತೃತ್ವದಲ್ಲಿ 15ಕ್ಕೂ ಹೆಚ್ಚು ವಿವಿಧ ರಾಷ್ಟ್ರಗಳ ಅನಿವಾಸಿ ಭಾರತೀಯರು ಸದನ ಕಲಾಪಗಳನ್ನು ವೀಕ್ಷಿಸುತ್ತಿರುವ ವಿಚಾರವನ್ನು ಸದನದ ಗಮನಕ್ಕೆ ತಂದು, ಎಲ್ಲ ಶಾಸಕರು ಹಾಗೂ ಸರ್ಕಾರದ ಪರವಾಗಿ ಅತಿಥಿಗಳನ್ನು ಸ್ವಾಗತಿಸುವುದಾಗಿ ಪರಮೇಶ್ವರ್ ತಿಳಿಸಿದರು.

ವಿಧಾನಸಭಾ ಚುನಾವಣೆ ಪೂರ್ವದಲ್ಲಿ ಪ್ರಣಾಳಿಕೆ ಸಿದ್ಧಪಡಿಸುವಾಗ ಪ್ರತ್ಯೇಕ ಸಚಿವಾಲಯ ಬೇಡಿಕೆಯನ್ನು ಅನಿವಾಸಿ ಭಾರತೀಯರು ಇಟ್ಟಿದ್ದರು. ಅದರಂತೆ ಪ್ರಣಾಳಿಕೆಯಲ್ಲೂ ವಿಚಾರವನ್ನು ಸೇರಿಸಿದ್ದೆವು, ಮುಂದಿನ ದಿನಗಳಲ್ಲಿ ಪ್ರತ್ಯೇಕ ಸಚಿವಾಲಯ ಮಾಡುತ್ತೇವೆ ಎಂದರು.

ಕಾನೂನಾತ್ಮಕವಾಗಿ ಅವರಿಗೆ ಅಗತ್ಯವಿರುವ ಸಹಾಯ ಮಾಡುತ್ತೇವೆ. ಕಲ್ಯಾಣ ಕೆಲಸಗಳನ್ನು ಮಾಡುತ್ತೇವೆ. ಕೆನಡಾ, ಯುಕೆ, ಆಸ್ಟ್ರೇಲಿಯಾ, ಅಮೆರಿಕ ಸೇರಿದಂತೆ ವಿವಿಧ ರಾಷ್ಟ್ರಗಳ ಅನಿವಾಸಿ ಭಾರತೀಯರು ಸದನದ ಕಲಾಪ ವೀಕ್ಷಿಸುತ್ತಿದ್ದಾರೆ. ಅವರನ್ನು ಸ್ವಾಗತಿಸುವುದಾಗಿ ತಿಳಿಸಿದರು.

ಅನಿವಾಸಿ ಭಾರತೀಯರು ಬೇರೆ ಬೇರೆ ದೇಶಗಳಲ್ಲಿ ಉದ್ಯೋಗ ಕಟ್ಟಿಕೊಂಡಿದ್ದಾರೆ. ಅನೇಕರು ಉದ್ಯಮಿಗಳಾಗಿ ಯಶಸ್ವಿಯಾಗಿದ್ದಾರೆ. ಶೇ.60ರಿಂದ 80ರಷ್ಟು ಮಂದಿ ಹೊರ ರಾಷ್ಟ್ರದಲ್ಲಿ ಗಳಿಸಿದ ಆದಾಯವನ್ನು ಭಾರತಕ್ಕೆ ಮರಳಿ ತರುವ ಮನಸ್ಸು ಮಾಡಿದ್ದಾರೆ.

ಅನಿವಾಸಿ ಭಾರತೀಯರು ಗಳಿಸಿದ ಆದಾಯದ ಒಂದು ಪಾಲನ್ನು ನಮ್ಮ ಸಮಾಜದ ಅಭಿವೃದ್ಧಿಗೆ ಕೊಡುಗೆಯಾಗಿ ನೀಡುತ್ತಿದ್ದಾರೆ. ರಾಜ್ಯ ಮತ್ತು ರಾಷ್ಟ್ರದ ಅಭಿವೃದ್ಧಿಯಲ್ಲಿ ಪರೋಕ್ಷವಾಗಿ ಕೊಡುಗೆ ನೀಡುತ್ತಿದ್ದಾರೆ ಎಂದರು.

ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ಅನಿವಾಸಿ ಭಾರತೀಯ ಕನ್ನಡಿಗರು ಅಧಿವೇಶನ ವೀಕ್ಷಿಸಲು ಅವಕಾಶ ಮಾಡಿಕೊಟ್ಟಿರುವುದನ್ನು ಸ್ವಾಗತಿಸುತ್ತೇನೆ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯವರು ಅತೀ ಹೆಚ್ಚು ಸಂಖ್ಯೆಯಲ್ಲಿ ವಿದೇಶದಲ್ಲಿ ನೆಲೆಸಿದ್ದು, ಅಲ್ಲಿ ತಮ್ಮದೇ ಆದ ಸಂಘಗಳನ್ನು ಕಟ್ಟಿಕೊಂಡಿದ್ದಾರೆ. ಆದರೂ ತಮ್ಮ ಊರಿನ ಸಂಪ್ರದಾಯ, ಸಂಬಂಧವನ್ನು ಮರೆತಿಲ್ಲ, ಅನಿವಾಸಿ ಭಾರತೀಯರಲ್ಲಿ ಎಲ್ಲ ಜಾತಿ–ಧರ್ಮೀಯರು ಇದ್ದಾರೆ. ರಾಜಕೀಯ, ಸಾಮಾಜಿಕ, ಕೈಗಾರಿಕಾ ವಲಯದಲ್ಲೂ ದೊಡ್ಡ ಮಟ್ಟದಲ್ಲಿ ಹೊರದೇಶದಲ್ಲಿ ಸಾಧನೆ ಮಾಡಿದ್ದಾರೆ ಎಂದರು.

ವಿರೋಧ ಪಕ್ಷದ ಉಪನಾಯಕ ಅರವಿಂದ್ ಬೆಲ್ಲದ್ ಮಾತನಾಡಿ, ಭಾರತೀಯರು ಬಹಳ ಹಿಂದಿನಿಂದಲೂ ವಿದೇಶಗಳಿಗೆ ಹೋಗುವ ಪರಿಪಾಠವಿದೆ. ಜಗತ್ತಿನ ಎಲ್ಲೆಡೆ ಭಾರತೀಯ ಸಂಸ್ಕೃತಿಯ ಕುರುಹುಗಳಿವೆ, ತವರಿಗೆ ಹೆಮ್ಮೆ ತರುವ ಕೆಲಸವನ್ನು ಮಾಡಿದ್ದಾರೆ. ಅವರೊಂದಿಗೆ ಹೆಚ್ಚು ಸಂಪರ್ಕ ಹೊಂದುವುದರಿಂದ ರಾಜ್ಯದ ಅಭಿವೃದ್ಧಿಗೂ ಅನುಕೂಲವಾಗಲಿದೆ, ಪ್ರಧಾನಿ ನರೇಂದ್ರ ಮೋದಿ ದೇಶ ಮುನ್ನಡೆಸುವ ರೀತಿ, ಭಾರತೀಯರ ಸಾಧನೆ ವಿದೇಶಗಳಲ್ಲೂ ಹೆಮ್ಮೆ ಪಡುವಂತಾಗಿದೆ ಎಂದರು.

ಸಚಿವರಾದ ಎಂ.ಬಿ.ಪಾಟೀಲ್, ಪ್ರಿಯಾಂಕ್ ಖರ್ಗೆ, ಶಾಸಕರಾದ ಎನ್.ಎ.ಹ್ಯಾರೀಸ್, ಡಾ.ರಂಗನಾಥ್, ಅನಿವಾಸಿ ಭಾರತೀಯರ ಸೇವೆಯ ಗುಣಗಾನ ಮಾಡಿದರು.

ವಿವಿಧ ಹುದ್ದೆಗಳ ಆಯ್ಕೆಗೆ ನೇರ ಸಂದರ್ಶನ


ಮೈಸೂರು,ಫೆ.21–ಪಿ.ಎಂ ಅಭಿಮ್ ಯೋಜನೆಯಡಿ ಮೈಸೂರು ನಗರದ ಆಯುಷ್ಮತಿ ಕ್ಲಿನಿಕ್‌ಗಳಲ್ಲಿ ಪ್ರಸ್ತುತ ಖಾಲಿ ಇರುವ ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞರು–01, ಮಕ್ಕಳ ತಜ್ಞರು–01, ಶಸ್ತ್ರಚಿಕಿತ್ಸಕರು–01, ಮತ್ತು ಕಣ್ಣು ತಪಾಸಣಾ ತಜ್ಞರು–01 ಹುದ್ದೆಗಳ ಆಯ್ಕೆಗೆ ಫೆ.26ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಚೇರಿಯಲ್ಲಿ ನೇರ ಸಂದರ್ಶನ ಏರ್ಪಡಿಸಲಾಗಿದೆ. ಆಸಕ್ತರು ಹುದ್ದೆಗೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳೊಂದಿಗೆ ಸಂದರ್ಶನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿಎಲ್, ಎಲ್‌ಎಲ್ ಮಾನ್ಯತೆ ಮುಗಿದಿದ್ದರೂ, ಸಿಂಧುತ್ವದ ಅವಧಿ ಫೆ.29ರವರೆಗೆ ವಿಸ್ತರಣೆ

ಹೊಸದಿಲ್ಲಿ: ಕಲಿಕಾ ಪರವಾನಗಿ (ಎಲ್‌ಎಲ್), ಚಾಲನಾ ಪರವಾನಗಿ (ಡಿಎಲ್) ಮತ್ತು ಕಂಡಕ್ಟರ್ ಪರವಾನಗಿಯ ಮಾನ್ಯತೆಯನ್ನು ಫೆ.29ರ ತನಕ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ವಿಸ್ತರಣೆ ಮಾಡಿದೆ. ಮಾನ್ಯತೆ ಅವಧಿ ಮುಕ್ತಾಯವಾಗಿದ್ದರೂ, ಇಂಥ ಪರವಾನಗಿಗಳನ್ನು ಮಾನ್ಯ ಮಾಡುವಂತೆ ಅಧಿಕಾರಿಗಳಿಗೆ ಸಚಿವಾಲಯವು ಸೂಚನೆ ನೀಡಿದೆ.

ರಸ್ತೆ ಸಚಿವಾಲಯದ 'ಸಾರಥಿ' (ಪರಿವಾಹನ್ ಸಾರಥಿ) ಪೋರ್ಟಲ್‌ನಲ್ಲಿ ಕೆಲವು ತಾಂತ್ರಿಕ ಸಮಸ್ಯೆಗಳು ಕಂಡುಬಂದಿವೆ. ಹೀಗಾಗಿ ಕಲಿಕಾ ಪರವಾನಗಿ, ಚಾಲನಾ ಪರವಾನಗಿ ಮತ್ತು ಕಂಡಕ್ಟರ್ ಪರವಾನಗಿಯ ಮಾನ್ಯತೆಯನ್ನು ಈ ತಿಂಗಳ ಕೊನೆಯ ತನಕ ವಿಸ್ತರಿಸಿ ಆದೇಶ ಹೊರಡಿಸಲಾಗಿದೆ. ಜನವರಿ 31ರಿಂದ ಫೆಬ್ರವರಿ 12ರವರೆಗೆ ಸಾರಥಿ ಪೋರ್ಟಲ್‌ನಲ್ಲಿ ಕೆಲವು ಸಮಸ್ಯೆಗಳು ಸೃಷ್ಟಿಯಾಗಿದ್ದವು. ಅರ್ಜಿದಾರರು ಪರವಾನಗಿ ಸಂಬಂಧಿತ ಸೇವೆಗಳನ್ನು ಪಡೆಯುವಲ್ಲಿ ಅಡೆತಡೆಗಳನ್ನು ಎದುರಿಸಿದ್ದಾರೆ. ಹೀಗಾಗಿ ಅವಧಿಯನ್ನು ವಿಸ್ತರಿಸಲಾಗಿದೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ತನ್ನ ಸುತ್ತೋಲೆಯಲ್ಲಿ ತಿಳಿಸಿದೆ.

ಜನವರಿ 31 ಮತ್ತು ಫೆಬ್ರವರಿ 15ರ ನಡುವೆ ಅವಧಿ ಮುಗಿದಿರುವ ಕಲಿಕಾ ಪರವಾನಗಿ, ಚಾಲನಾ ಪರವಾನಗಿ ಮತ್ತು ಕಂಡಕ್ಟರ್ ಪರವಾನಗಿಗಳ ಸಿಂಧುತ್ವವನ್ನು ಫೆ.29



ರವರೆಗೆ ಯಾವುದೇ ದಂಡವನ್ನು ವಿಧಿಸದೆ ಮಾನ್ಯವೆಂದು ಪರಿಗಣಿಸಲಾಗುವುದು ಎಂದು ರಸ್ತೆ ಸಾರಿಗೆ ಸಚಿವಾಲಯ ತಿಳಿಸಿದೆ.

ಪರಿವಾಹನ್ ಪೋರ್ಟಲ್‌ನಲ್ಲಿ ಆನ್‌ಲೈನ್ ಸೇವೆಗಳು ಭಾಗಶಃ ಸ್ಥಗಿತ ಅಥವಾ ದುರ್ಬಲಗೊಂಡಿದ್ದವು. ಹೀಗಾಗಿ ಅರ್ಜಿದಾರರಿಗೆ ಶುಲ್ಕ ಪಾವತಿ, ಚಾಲನಾ ಪರವಾನಗಿ ನವೀಕರಣ, ಕಲಿಯುವವರ ಪರವಾನಗಿಗಾಗಿ ಬುಕಿಂಗ್ ಸ್ಲಾಟ್, ಚಾಲನಾ ಕೌಶಲ್ಯ ಪರೀಕ್ಷೆ ಇತ್ಯಾದಿ ಸೇವೆಗಳಿಗೆ ಅರ್ಜಿ ಸಲ್ಲಿಸಲು ಸಾಧ್ಯವಾಗಲಿಲ್ಲ. ನಾಗರಿಕರಿಗೆ ಯಾವುದೇ ಅನಾನುಕೂಲತೆ ಉಂಟಾಗದಂತೆ ಕ್ರಮ ಜರುಗಿಸಲಾಗಿದೆ.

ಯಾರಿಗೆ ಅನ್ವಯ?: ಜನವರಿ 31 ಮತ್ತು ಫೆ.15ರ ನಡುವೆ ನಿಮ್ಮ ಕಲಿಕಾ ಪರವಾನಗಿ, ಚಾಲನಾ ಪರವಾನಗಿ ಮತ್ತು ಕಂಡಕ್ಟರ್ ಪರವಾನಗಿ ಅವಧಿ ಮುಕ್ತಾಯವಾಗಿದೆಯೇ? ಈ ಅವಧಿಗೆ ಸಂಬಂಧಿಸಿದ ಪರವಾನಗಿಗಳನ್ನು ಮಾನ್ಯವೆಂದು ಪರಿಗಣಿಸಲಾಗುತ್ತದೆ. ಸಾರಿಗೆ ಅಧಿಕಾರಿಗಳು ಮತ್ತು ಪೊಲೀಸರು ನಿಮ್ಮ ಮೇಲೆ ಯಾವುದೇ ಕ್ರಮ ಜರುಗಿಸುವಂತಿಲ್ಲ. ಫೆ.29ರವರೆಗೆ ಯಾವುದೇ ದಂಡವನ್ನು ವಿಧಿಸದಂತೆ ಸಾರಿಗೆ ಸಚಿವಾಲಯದ ಆದೇಶದಲ್ಲಿ ಹೇಳಲಾಗಿದೆ.

ಗೌರವಧನ ಹೆಚ್ಚಳಕ್ಕೆ ಆಗ್ರಹಿಸಿ ಮೈಸೂರಲ್ಲಿ ಅಂಗನವಾಡಿ ಕಾರ್ಯಕರ್ತರ ಪ್ರತಿಭಟನೆ



ಮೈಸೂರು ಜಿಪಂ ಕಚೇರಿ ಮುಂಭಾಗ ಅಂಗನವಾಡಿ ಕಾರ್ಯಕರ್ತೆಯರು 6ನೇ ಗ್ಯಾರಂಟಿ ಜಾರಿಗೊಳಿಸಬೇಕೆಂದು ಒತ್ತಾಯಿಸಿ ಬುಧವಾರ ಪ್ರತಿಭಟನೆ ನಡೆಸಿದರು.

ಮೈಸೂರು,ಫೆ.21(ಜಿಎ)–ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಗೌರವ ಧನ ಹೆಚ್ಚಳ ಮಾಡುವ ಸರ್ಕಾರದ 6ನೇ ಗ್ಯಾರಂಟಿ ಜಾರಿಗೊಳಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ ವತಿಯಿಂದ ಜಿಲ್ಲಾ ಪಂಚಾಯತ್ ಮುಂಭಾಗ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಪ್ರಸಕ್ತ 2024–25ನೇ ಸಾಲಿನಲ್ಲಿ ಮಂಡಿಸಿರುವ ರಾಜ್ಯ ಬಜೆಟ್‌ನಲ್ಲಿ ವಿವಿಧ ಯೋಜನೆಗಳಲ್ಲಿ ಸ್ಕೀಂ ನೌಕರರಾಗಿ ದುಡಿಯುತ್ತಿರುವ ಮಹಿಳಾ ಸಮುದಾಯವನ್ನು ನಿರ್ಲಕ್ಷಿಸಿರುವುದು ಖಂಡನೀಯ. ಚುನಾವಣೆ ಸಂದರ್ಭದಲ್ಲಿ ಪ್ರಣಾಳಿಕೆಯಲ್ಲಿ ತಿಳಿಸಿದಂತೆ, ಪ್ರಿಯಾಂಕಾ ಗಾಂಧಿ ಘೋಷಿಸಿದ 6ನೇ ಗ್ಯಾರಂಟಿಯಾದ ಅಂಗನವಾಡಿ ಕಾರ್ಯಕರ್ತೆಯರಿಗೆ 15 ಸಾವಿರ ಹಾಗೂ ಸಹಾಯಕಿಯರಿಗೆ 10 ಸಾವಿರಕ್ಕೆ ಗೌರವ ಧನ ಹೆಚ್ಚಳ ಹಾಗೂ 3 ಲಕ್ಷ ಇಡುಗಂಟು ನೀಡುವ ಭರವಸೆ ಮರೆತಿರುವುದು ಸರಿಯಲ್ಲ ಎಂದು ಕಿಡಿಕಾರಿದರು.

ಸರ್ಕಾರ ಚುನಾವಣೆಗೂ ಮುನ್ನ ನೀಡಿದ ಭರವಸೆಯನ್ನು ಪ್ರಸಕ್ತ ಆರ್ಥಿಕ ವರ್ಷದಿಂದಲೇ ಜಾರಿಗೊಳಿಸಬೇಕು. ಬಜೆಟ್‌ಗೆ ಅನುಮೋದನೆ ಪಡೆಯುವ ಪೂರ್ವದಲ್ಲೇ ಅಂಗನವಾಡಿಗಳಲ್ಲಿ ದುಡಿಯುತ್ತಿರುವ ಮಹಿಳಾ ಸಮುದಾಯಕ್ಕೆ ಗೌರವಧನ ಹೆಚ್ಚಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಪ್ರಧಾನ ಕಾರ್ಯದರ್ಶಿ ಗಿರಿಜಾ, ಸದಸ್ಯರಾದ ಜಯಮ್ಮ, ನಸ್ರೀನ್ ತಾಜ್, ಅನುಷಾ, ಧನಲಕ್ಷ್ಮೀ, ಮಮತಾ ರಾಜೇಶ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಕೇಂದ್ರದ ತೆರಿಗೆ ಅನ್ಯಾಯ ಖಂಡಿಸಿ ಕರ್ನಾಟಕ ಜನರಂಗದ ನೇತೃತ್ವದಲ್ಲಿ 48 ಗಂಟೆಗಳ ಅಹೋರಾತ್ರಿ ಧರಣಿ ಆರಂಭ



ಮೈಸೂರಿನ ಚಿಕ್ಕ ಗಡಿಯಾದ ಮುಂಭಾಗ ಕೇಂದ್ರ ಸರ್ಕಾರ ರಾಜ್ಯಕ್ಕೆ ನೀಡಬೇಕಾದ ತೆರಿಗೆ ಪಾಲಿನಲ್ಲಿ ಅನ್ಯಾಯ ಮಾಡುತ್ತಿದೆ ಎಂದು 'ಕರ್ನಾಟಕ ಜನರಂಗ'ದ ನೇತೃತ್ವದಲ್ಲಿ ಅಹೋರಾತ್ರಿ ಧರಣಿ ಆರಂಭವಾಯಿತು.

ಮೈಸೂರು,ಫೆ21(ಜಿಎ)–ಕೇಂದ್ರ ಸರ್ಕಾರ ರಾಜ್ಯಕ್ಕೆ ನೀಡಬೇಕಾದ ತೆರಿಗೆ ಪಾಲಿನಲ್ಲಿ ಅನ್ಯಾಯ ಎಸಗಿರುವುದು. ಬರ ಪರಿಹಾರ ಇನ್ನೂ ಬಿಡುಗಡೆ ಮಾಡದಿರುವುದನ್ನು ಖಂಡಿಸಿ 'ಕರ್ನಾಟಕ ಜನರಂಗ'ದ ನೇತೃತ್ವದಲ್ಲಿ ವಿವಿಧ ಪ್ರಗತಿಪರ ಸಂಘಟನೆಗಳು ನಗರದ ಚಿಕ್ಕಗಡಿಯಾರದ ಎದುರು ಬುಧವಾರ 48 ಗಂಟೆಗಳ ಅಹೋರಾತ್ರಿ ಧರಣಿ ಆರಂಭಿಸಿದವು.

ರಾಜ್ಯಕ್ಕೆ ನೀಡಬೇಕಿರುವ 1.87 ಲಕ್ಷ ಕೋಟಿ ತೆರಿಗೆ ಪಾಲನ್ನು ನೀಡದೆ ವಂಚಿಸಿರುವ ಕೇಂದ್ರ ಸರ್ಕಾರಕ್ಕೆ ಧಿಕ್ಕಾರ, ನಮ್ಮ ತೆರಿಗೆ ನಮ್ಮ ಹಕ್ಕು ಇಲ್ಲ ಎನ್ನಲು ನೀವ್ಯಾರು? ಕರ್ನಾಟಕ ಅನ್ಯಾಯ ಪ್ರಶ್ನಿಸುತ್ತಿದೆ ಉತ್ತರ ನೀಡಿ' ಘೋಷಣೆಗಳನ್ನು ಧರಣಿನಿರತರು ಕೂಗಿದರು. ಧರಣಿಯಲ್ಲಿ ಚಿಂತಕರು, ಸಾಹಿತಿಗಳು, ಕಲಾವಿದರು, ವಕೀಲರು, ರೈತರು, ಪೌರಕಾರ್ಮಿಕರು, ದಸಂಸ, ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ಒಡನಾಡಿ, ಪಿಯುಸಿಎಲ್, ಕಮ್ಯುನಿಸ್ಟ್, ಕಾರ್ಮಿಕ ಒಕ್ಕೂಟ ಸೇರಿದಂತೆ ವಿವಿಧ ಸಂಘಟನೆಗಳ ಸದಸ್ಯರು ಪಾಲ್ಗೊಂಡಿದ್ದಾರೆ.

ಧರಣಿಗೆ ರಂಗಕರ್ಮಿ ಕೋಟಿಗಾನಹಳ್ಳಿ ರಾಮಯ್ಯ ನಗಾರಿ ಬಾರಿಸಿ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಅವರು, ದಕ್ಷಿಣದ ರಾಜ್ಯಗಳಿಗೆ ತೆರಿಗೆ ಪಾಲಿನ ಹಣ ನೀಡದೇ ಒಕ್ಕೂಟ ಸರ್ಕಾರ ಅನ್ಯಾಯ ಮಾಡುತ್ತಿದೆ. ಭಾರತವನ್ನು ಭೀಕರ ಭಾರತವಾಗಿ ಮಾಡಲಾಗುತ್ತಿದೆ. ಆರ್ಥಿಕ ದರೋಡೆ ನಡೆಸುತ್ತಿದೆ. ಜನರ ದನಿಯನ್ನು ಹತ್ತಿಕ್ಕಲಾಗುತ್ತಿದೆ. ಆರ್‌ಎಸ್‌ಎಸ್ ಪ್ರತಿಪಾದಿಸುತ್ತಿರುವ ರಾಷ್ಟ್ರೀಯತೆಯು ವೈಷ್ಣವ ರಾಷ್ಟ್ರೀಯತೆಯಷ್ಟೇ. ಅಲ್ಲಿ ಶೈವವೂ ಇಲ್ಲ. ಬಹುಜನರೂ ಇಲ್ಲ. ಸರಸ್ವತಿ ನದಿ ನಾಗರಿಕತೆಯ ಸಾಮಾಜಿಕ ತಾರತಮ್ಯವನ್ನು ಮತ್ತೆ ಜಾರಿಗೊಳಿಸುವುದೇ ಈಗಿನ ಸರ್ಕಾರದ ಉದ್ದೇಶವಾಗಿದೆ ಎಂದರು.

ರಂಗಕರ್ಮಿ ಸಿ.ಬಸವಲಿಂಗಯ್ಯ ಮಾತನಾಡಿ, ರಘುರಾಮ, ಸೀತಾ ರಾಮ, ಜಾನಕಿರಾಮ, ಅಯೋಧ್ಯಾರಾಮ, ಗಾಂಧಿ ರಾಮ ಈಗಿನ ಸರ್ಕಾರಕ್ಕೆ ಬೇಕಿಲ್ಲ. ಜೈ ಶ್ರೀರಾಮ ಎನ್ನುತ್ತಿದೆ. ಒಂದು ದೇಶ, ಒಂದು ಭಾಷೆ, ಒಂದು ಧರ್ಮ, ಒಂದು ಸಂಸ್ಕೃತಿ, ಒಬ್ಬ ನಾಯಕ ಎಂದು ಹೇಳಲಾಗುತ್ತಿದೆ. ವಿರೋಧ ಪಕ್ಷವನ್ನೇ ಇಲ್ಲವಾಗಿಸಲಾಗುತ್ತಿದೆ. ಏಕೆಂದರೆ ಯಾರೂ ಪ್ರಶ್ನಿಸಬಾರದೆಂಬ ಸರ್ವಾಧಿಕಾರಿ ಧೋರಣೆ ಆಳುವವರದ್ದಾಗಿದೆ' ಎಂದರು.

ದೇಶವೆಂದರೆ ಜನ. ಜನರೇ ಭಾರತ. ಯಾವೊಬ್ಬ ಪ್ರಜೆಗೂ ಅನ್ಯಾಯವಾಗಬಾರದು. ಭಾರತವು ಒಂದೇ ಗಣರಾಜ್ಯದಿಂದ ಆಗಿರುವ ದೇಶವಲ್ಲ. ರಾಜ್ಯಗಳು ತೆರಿಗೆ ನೀಡದಿದ್ದರೆ ಒಕ್ಕೂಟ ಸರ್ಕಾರದ ಬಳಿ ಹಣವಿರುವುದಿಲ್ಲ. ಪ್ರಭುಗಳು ಇಲ್ಲಿ ಆಳುತ್ತಿಲ್ಲ. ಜನರೇ ಆಳುತ್ತಿರುವುದು. ಅದು ಅಧಿಕಾರದಲ್ಲಿದ್ದವರಿಗೆ ಗೊತ್ತಾಗಬೇಕಿದೆ ಎಂದು ಹೇಳಿದರು.

ಧರಣಿಯಲ್ಲಿ ರಂಗಕರ್ಮಿಗಳಾದ ಎಚ್.ಜನಾರ್ಧನ್(ಜನ್ನಿ), ಮೈಮ್ ರಮೇಶ್, ಸಂಚಾಲಕ ಟಿ.ಗುರುರಾಜ್ ಕೃಷ್ಣಪ್ರಸಾದ್, ಕಾಂಗ್ರೆಸ್‌ನ ಬಿ.ಜೆ.ವಿಜಯಕುಮಾರ್, ಸಿಪಿಐ(ಎಂ)ನ ಜಗದೀಶ್ ಸೂರ್ಯ, ಲ.ಜಗನ್ನಾಥ್, ಕೆ.ಬಸವರಾಜ್, ದಸಂಸದ ಆಲಗೂಡು ಶಿವಕುಮಾರ್, ಚಿಂತಕರಾದ ಭೂಮಿಗೌಡ, ಮಹೇಶ್ ಚಂದ್ರಗುರು, ಸುರೇಖಾ, ನಾ.ದಿವಾಕರ, ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮ್, ಮೈಸೂರು ವಿವಿ ಸಂಶೋಧಕರ ಸಂಘದ ಹರೀಶ್, ಪ್ರದೀಪ್, ನಟರಾಜ್ ಶಿವಣ್ಣ, 'ನೆಲೆ ಹಿನ್ನೆಲೆ' ಸಂಘಟನೆಯ ಕೆ.ಆರ್.ಗೋಪಾಲಕೃಷ್ಣ, ರೈತಸಂಘದ ರಾಜು, ಕಲ್ಲಹಳ್ಳಿ ಕುಮಾರ್ ಪಾಲ್ಗೊಂಡಿದರು.

ಜಿಲ್ಲಾಧಿಕಾರಿ ಕಚೇರಿ ಎದುರು ಸಿಎನ್‌ಸಿ ಧರಣಿ



ಮಡಿಕೇರಿಯ ಜಿಲ್ಲಾಧಿಕಾರಿ ಕಚೇರಿ ಎದುರು ಬುಧವಾರ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಕಾರ್ಯಕರ್ತರು ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ಧರಣಿ ನಡೆಸಿದರು.

ಮಡಿಕೇರಿ, ಫೆ.21–ವಿಶ್ವಸಂಸ್ಥೆಯ ಅಂತಾರಾಷ್ಟ್ರೀಯ ಮಾತೃಭಾಷಾ ದಿನವಾದ ಬುಧವಾರ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸಿದರು.

ಧರಣಿಯ ನೇತೃತ್ವ ವಹಿಸಿದ್ದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಮಾತನಾಡಿ, 2024ರ ವಿಶ್ವ ಮಾತೃಭಾಷಾ ದಿನದಂದು ಯುನೆಸ್ಕೋ ಜಗತ್ತಿನಾದ್ಯಂತ ಮಾತೃಭಾಷೆಗಳಲ್ಲಿ ವೈವಿಧ್ಯ ಭಾಷೆಗಳ ಶಿಕ್ಷಣ ಕಲಿಕೆಗೆ ಆದ್ಯತೆ ಎಂಬ ಘೋಷವಾಕ್ಯವನ್ನು ಮೊಳಗಿಸಿದ್ದು, ಕೊಡವ ಭಾಷೆಯನ್ನು ಸಂವಿಧಾನದ 8ನೇ ಶೆಡ್ಯೂಲ್‌ಗೆ ಸೇರಿಸಬೇಕೆಂದು ಒತ್ತಾಯಿಸಿದರು.

ಕೊಡವ ಭಾಷೆಯನ್ನು ವಿಶ್ವಸಂಸ್ಥೆಯ ಅಧಿಕೃತ ಭಾಷೆಗಳಲ್ಲೊಂದಾಗಿ ಪರಿಗಣಿಸಬೇಕು. ಪ್ರತಿವರ್ಷ ಆಕ್ಸ್‌ಫರ್ಡ್ ಡಿಕ್ಷನರಿಯೂ ಜಗತ್ತಿನ ವಿವಿಧ ಭಾಷೆಗಳ 15 ಸಾವಿರ ಹೊಸ ಪದಗಳನ್ನು ಆಯ್ಕೆ ಮಾಡಿ ಅಳವಡಿಸಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ. ಈ ಆಕ್ಸ್‌ಫರ್ಡ್ ಡಿಕ್ಷನರಿಯಲ್ಲಿ ಕೊಡವ ಭಾಷೆಯ ಪದಗಳನ್ನು ಸೇರಿಸುವ ಮೂಲಕ ಕೊಡವ ಭಾಷೆ ಮತ್ತು ಆಕ್ಸ್‌ಫರ್ಡ್ ಡಿಕ್ಷನರಿ ಎರಡನ್ನು ಕೂಡ ಸಮೃದ್ಧ ಮತ್ತು ಶ್ರೀಮಂತಗೊಳಿಸಬೇಕು ಎಂಬ ಬೇಡಿಕೆಯೊಂದಿಗೆ ಒಟ್ಟು 27 ಹಕ್ಕೊತ್ತಾಯವನ್ನು ಮಂಡಿಸಿದರು.

ಕೊಡವ ಭೂ ರಾಜಕೀಯ ಸ್ವಾಯತ್ತತೆ ಕಲ್ಪಿಸಬೇಕು. ಕೊಡವ ತಕ್ಕ್ ಮಾತೃಭಾಷೆ ಹೊಂದಿರುವ ಕೊಡಗಿನ ಆದಿಮ ಸಂಜಾತ ಕೊಡವ ಬುಡಕಟ್ಟು ಕುಲವನ್ನು ಪ್ರಿಮೇಟಿವ್ ಟ್ರೈಬ್ ಎಂದು ಪರಿಗಣಿಸಬೇಕು ಮತ್ತು ಕೊಡವ ಬುಡಕಟ್ಟು ಕುಲವನ್ನು ಎಸ್‌ಟಿ ಪಟ್ಟಿಗೆ ಸೇರಿಸಿ, ಸಂವಿಧಾನ ಭದ್ರತೆ ನೀಡಬೇಕು ಎಂದು ಒತ್ತಾಯಿಸಿದರು.

'ಕೊಡಗರು' ಎಂದು ಕಾಗುಣಿತ ದೋಷದಿಂದ ವಿರೂಪಗೊಂಡಿದ್ದ ಕೊಡವ ಸಮುದಾಯದ ಸೂಚಕ ಪದವನ್ನು ಕೊಡಗರು ಬದಲಿಗೆ 'ಕೊಡವ' ಎಂದು ನಮೂದಿಸಲು ಸಿಎನ್‌ಸಿಯ ಪ್ರಯತ್ನದಿಂದ ಡಾ.ದ್ವಾರಕನಾಥ್ ನೇತೃತ್ವದ ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗ ಶಿಫಾರಸು ಮಾಡಿದ್ದರೂ ಹಿಂದಿನ ಸರ್ಕಾರದ ವಿಳಂಬದಿಂದ ಗಜೆಟ್ ನೋಟಿಫಿಕೇಷನ್ ಆಗಿಲ್ಲ. ಆದರೆ, ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಸಿಎನ್‌ಸಿ ಮನವಿಗೆ ತಕ್ಷಣ ಸ್ಪಂದಿಸಿ 'ಕೊಡವ' ಎಂದು ನಮೂದಿಸಲು ಗಜೆಟ್ ನೋಟಿಫಿಕೇಷನ್ ಹೊರಡಿಸುವ ಮೂಲಕ ಕೊಡವರ ಅಭಿನಂದನೆಗೆ ಪಾತ್ರವಾಗಿದೆ ಎಂದರು. ನಂತರ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಯಿತು. ಇದೇ ವೇಳೆ ಕೊಡವ ಕೊಡವತಿಯರು ಸಂವಿಧಾನಿಕ ಹಕ್ಕೊತ್ತಾಯಗಳ ಸಾಧನೆಗಾಗಿ ಗುರು–ಕಾರೋಣ, ಧಾರ್ಮಿಕ ಸಂಸ್ಕಾರ ಕೋವಿ, ಸೂರ್ಯ–ಚಂದ್ರ, ಭೂದೇವಿ, ದೈವಿಕ ಜಲದೇವಿ ಕಾವೇರಿ ಮತ್ತು ವನದೇವತೆ ಹೆಸರಿನಲ್ಲಿ ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಧರಣಿಯಲ್ಲಿ ಬೊಪ್ಪಂಡ ಬೊಳ್ಳಮ್ಮ ನಾಣಯ್ಯ, ಚೋಳಪಂಡ ಜ್ಯೋತಿ ನಾಣಯ್ಯ, ಅಜ್ಜಿನಿಕಂಡ ಇನಿತಾ ಮಾಚಯ್ಯ, ಕಾಂಡೇರ ಸುರೇಶ್, ಬಾಚರಣಿಯಂಡ ಚಿಪ್ಪಣ್ಣ, ಅಜ್ಜಿಕುಟ್ಟೀರ ಲೋಕೇಶ್, ಚಂಬಂಡ ಜನತ್, ಕಿರಿಯಮಾಡ ಶೆರಿನ್, ಪುಟ್ಟಿಚಂಡ ದೇವಯ್ಯ, ಮಣವಟ್ಟಿರ ಚಿಣ್ಣಪ್ಪ, ಕೂಪದಿರ ಸಾಬು, ನಂದಿನೆರವಂಡ ಅಪ್ಪಯ್ಯ, ನಂದಿನೆರವಂಡ ವಿಜು, ಚೋಳಪಂಡ ನಾಣಯ್ಯ, ಪುದಿಯೊಕ್ಕಡ ಕಾಶಿ, ಬೇಪಡಿಯಂಡ ದಿನು, ಬೇಪಡಿಯಂಡ ಬಿದ್ದಪ್ಪ, ಅಜ್ಜಿನಿಕಂಡ ಸನ್ನಿ, ಅಪ್ಪೆಯಂಗಡ ಮಾಲೆ, ಕೋಡಿರ ರತನ್, ಮಣವಟ್ಟಿರ ಸ್ವರೂಪ್, ನಂದೇಟಿರ ಸುಬ್ಬಯ್ಯ, ಮೇದುರ ಕಂಠಿ, ಅಪ್ಪರಂಡ ಪ್ರಸಾದ್, ಅವರೆಮಾದಂಡ ಚಂಗಪ್ಪ ಪಾಲ್ಗೊಂಡಿದ್ದರು.

ಕಲ್ಯಾಟಂಡ ಐನ್‌ಮನೆ ಅಭಿವೃದ್ಧಿ ಸಂಘದ ಅಧ್ಯಕ್ಷರಾಗಿ ಕಲ್ಯಾಟಂಡ ಮುತ್ತಪ್ಪ ಆಯ್ಕೆ

ಮಡಿಕೇರಿ, ಫೆ.21–ನಾಪೋಕ್ಲು ಕುಂಜಿಲ ಗ್ರಾಮದ 'ಕಲ್ಯಾಟಂಡ ಐನ್‌ಮನೆ ಅಭಿವೃದ್ಧಿ ಸಂಘದ' ನೂತನ ಅಧ್ಯಕ್ಷರಾಗಿ ಕಲ್ಯಾಟಂಡ ಮುತ್ತಪ್ಪ ಆಯ್ಕೆಯಾಗಿದ್ದಾರೆ.

ಸಂಘದ ನಿರ್ಗಮಿತ ಅಧ್ಯಕ್ಷ ಡಾ.ಕಲ್ಯಾಟಂಡ ಚಿಣ್ಣಪ್ಪ ಸಂಘದ ಅಭಿವೃದ್ಧಿಗೆ ತಮ್ಮದೇ ಸೇವೆ ಸಲ್ಲಿಸಿ, ಫೆ.18ರಂದು ಐನ್‌ಮನೆಯಲ್ಲಿ ನಡೆದ ಸಭೆಯಲ್ಲಿ ನೂತನ ಅಧ್ಯಕ್ಷರಿಗೆ ಅಧಿಕಾರ ಹಸ್ತಾಂತರಿಸಿ, ಶುಭ ಹಾರೈಸಿದರು.

ಇದೇ ವೇಳೆ ಕೋಶಾಧಿಕಾರಿಯಾಗಿ ಕಲ್ಯಾಟಂಡ ಗಣೇಶ್ ಮುತ್ತಪ್ಪ, ಕಾರ್ಯದರ್ಶಿಯಾಗಿ ಕಲ್ಯಾಟಂಡ ಎಸ್.ಚಂಗಪ್ಪ, ಸಹ ಕಾರ್ಯದರ್ಶಿಯಾಗಿ ಕಲ್ಯಾಟಂಡ ಪ್ರಿನ್ಸ್ ಗಣಪತಿ ಅವರು ಅಧಿಕಾರ ಸ್ವೀಕರಿಸಿದರು.

ಸಂಜೀವಿನಿ ಒಕ್ಕೂಟದ ಸಂಘಗಳಿಗೆ 1.18 ಕೋಟಿ ರೂ.


ಕೆದಮುಳ್ಳೂರು ಗ್ರಾಮ ಪಂಚಾಯಿತಿ ಆವರಣದಲ್ಲಿ ನಡೆದ ಸಂಜೀವಿನಿ ಒಕ್ಕೂಟದ ಮಾಸಿಕ ಸಂತೆ ಮತ್ತು ಮಾರಾಟ ಮೇಳದಲ್ಲಿ ತರಕಾರಿ ಹಾಗೂ ಮನೆಗಳಲ್ಲೇ ತಯಾರಿಸಿದ ಉತ್ಪನ್ನಗಳನ್ನು ಖರೀದಿಸಲಾಯಿತು.

ವಿರಾಜಪೇಟೆ, ಫೆ.21–ಸಂಜೀವಿನಿ ಒಕ್ಕೂಟದ 26 ಸಂಘಗಳಿದ್ದು, ಬೇಡಿಕೆ ಆಧಾರದ ಮೇಲೆ 10ಕ್ಕೂ ಹೆಚ್ಚು ಸಂಘಗಳಿಗೆ 1 ಕೋಟಿ 18 ಲಕ್ಷ ರೂ. ನೀಡಲಾಗಿದ್ದು, ಸದಸ್ಯರು ಈ ಅನುದಾನವನ್ನು ಸದುಪಯೋಗ ಪಡಿಸಿಕೊಂಡು ಅಭಿವೃದ್ಧಿ ಹೊಂದಬೇಕು ಎಂದು ಸಂಜೀವಿನಿ ಒಕ್ಕೂಟದ ತಾಲೂಕು ವಲಯ ಮೇಲ್ವಿಚಾರಕ ಸೋಮಶೇಖರ್ ಹೇಳಿದರು.

ಕೆದಮುಳ್ಳೂರು ಗ್ರಾಮ ಪಂಚಾಯಿತಿ ಆವರಣದಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಸಂಜೀವಿನಿ–ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ, ಜಿಲ್ಲಾ, ತಾಲೂಕು ಪಂಚಾಯಿತಿ ವತಿಯಿಂದ ನಡೆದ ಗ್ರಾಪಂ ಮಟ್ಟದ ಸಂಜೀವಿನಿ ಒಕ್ಕೂಟದ ಮಾಸಿಕ ಸಂತೆ ಮತ್ತು ಮಾರಾಟ ಮೇಳದಲ್ಲಿ ಮಾತನಾಡಿದ ಅವರು, ಸಂಜೀವಿನಿ ಸಂಘದ ಸದಸ್ಯರಿಗೆ ಸರ್ಕಾರದ ಮೂಲಕ 10.5 ಲಕ್ಷರೂ ಸಿಐಎಫ್ ಅನುದಾನ ಬಂದಿದೆ. ಇದನ್ನು ಅಭಿವೃದ್ಧಿ ಕಾರ್ಯಗಳಿಗೆ ಬಳಸಬೇಕು. ಇದರೊಂದಿಗೆ 15 ಸಾವಿರ ರೂ. ಸುತ್ತುನಿಧಿ ಕೊಡಿಸಲಾಗುತ್ತಿದೆ. ತಾಲೂಕು ಮಟ್ಟದ ಸಂಘದ ಸದಸ್ಯರು ಬೆಳೆದ ಉತ್ಪನ್ನಗಳನ್ನು ಮಾರಾಟ ಮಾಡಲು ಸಂಜೀವಿನಿ ಒಕ್ಕೂಟ ಬದ್ಧವಾಗಿದೆ ಎಂದರು.

ಪಿಡಿಓ ಬಿ.ವಾಣಿ ಮಾತನಾಡಿ, ಸಂಜೀವಿನಿ ಒಕ್ಕೂಟದಿಂದ ಸಾಲ ಪಡೆದ ಮಹಿಳೆಯರು ಸ್ವಉದ್ಯೋಗದೊಂದಿಗೆ ಮನೆಯಲ್ಲೇ ಉತ್ಪನ್ನಗಳನ್ನು ತಯಾರಿಸಿ ನಂತರ ಮಾರಾಟದಿಂದ ಲಾಭಗಳಿಸಬೇಕು. ಹೈನುಗಾರಿಕೆ, ಕೋಳಿ, ಹಂದಿ ಸಾಕಾಣಿಕೆ, ಟೈಲರಿಂಗ್, ಅಡಕೆ ಪ್ಲೇಟ್‌ಗಳು, ಸಿಹಿತಿಂಡಿ ಪದಾರ್ಥ ಇತ್ಯಾದಿಗಳನ್ನು ತಯಾರಿಸುವ ಮೂಲಕ ಸ್ವಉದ್ಯೋಗ ದಿಂದ ಗ್ರಾಮೀಣ ಪ್ರದೇಶದ ಮಹಿಳೆಯರು ಅಭಿವೃದ್ಧಿ ಹೊಂದಲು ಸಾಧ್ಯವಿದೆ ಎಂದು ತಿಳಿಸಿದರು.

ಗ್ರಾಪಂ ಅಧ್ಯಕ್ಷ ಎಂ.ಕೆ.ಉತ್ತಪ್ಪ ಮಾತನಾಡಿ, ಮಹಿಳೆಯರು ಸಂಘ ಸಂಸ್ಥೆಗಳ ಮೂಲಕ ಸ್ವಉದ್ಯೋಗದೊಂದಿಗೆ ಸ್ವಾವಲಂಬಿಗಳಾಗಿ ಜೀವನ ನಡೆಸಬೇಕು. ಮಹಿಳೆಯರು ಕಂಪ್ಯೂಟರ್ ಶಿಕ್ಷಣ ಪಡೆಯುವುದು ಹಾಗೂ ಆಟೋ ಚಾಲಕರಾಗಿಯೂ ಉತ್ತಮ ಬದುಕು ಸಾಗಿಸುವಂತೆ ಹೇಳಿದರು.

ಗ್ರಾಪಂ ಸದಸ್ಯರಾದ ಎಂ.ಎಂ.ಇಸ್ಮಾಯಿಲ್, ತಾಯಮ್ಮ, ಮೀನಾಕ್ಷಿ, ಜಯಂತಿ, ವಿಮಲಾ, ಸಂಜೀವಿನಿ ಒಕ್ಕೂಟದ ಅಧ್ಯಕ್ಷೆ ಪಿ.ಎನ್.ಸಾವಿತ್ರಿ, ಕಾರ್ಯದರ್ಶಿ ಎ.ಪಿ.ವಿಮಲಾ, ಖಜಾಂಚಿ ಪಿ.ಎಸ್.ಸುಮಾ, ವಿಕೇಂದ್ರೀಕೃತ ತರಬೇತುದಾರರಾದ ಕೆ.ಪಿ.ಶೈನಿ, ಸಮುದಾಯ ಸಂಪನ್ಮೂಲ ವ್ಯಕ್ತಿ ಎಂ.ಎಂ.ರೇವತಿ, ಜಿಪಂನ ಕೃಷಿ ಸಹಾಯಕಿ ಎಂ.ಎಸ್.ರಮ್ಯ, ಸಂಜೀವಿನಿ ಒಕ್ಕೂಟದ ಸದಸ್ಯರು ಉಪಸ್ಥಿತರಿದ್ದರು.

ಅನಧಿಕೃತ ಖಾಸಗಿ ಕ್ಲಿನಿಕ್‌ಗೆ ಬೀಗ


ಸುಂಟಿಕೊಪ್ಪದ ಅನಧಿಕೃತ ಮೆಡಿಕಲ್ ಸೆಂಟರ್ ಖಾಸಗಿ ಕ್ಲಿನಿಕ್‌ಗೆ ಜಿಲ್ಲಾ ಮತ್ತು ತಾಲೂಕು ಆರೋಗ್ಯ ಅಧಿಕಾರಿಗಳು ಬೀಗ ಹಾಕಿದರು.

ಸುಂಟಿಕೊಪ್ಪ: ಪಟ್ಟಣದಲ್ಲಿ ಅನಧಿಕೃತವಾಗಿ ನಡೆಸುತ್ತಿದ್ದ ಖಾಸಗಿ ಕ್ಲಿನಿಕ್‌ಗೆ ಜಿಲ್ಲಾ ಮತ್ತು ತಾಲೂಕು ಆರೋಗ್ಯ ಅಧಿಕಾರಿಗಳ ತಂಡ ಬುಧವಾರ ಭೇಟಿ ನೀಡಿ, ಪರವಾನಗಿ ಹೊಂದಿಲ್ಲದ ಕಾರಣ ಕ್ಲಿನಿಕ್ ಅನ್ನು ಮುಚ್ಚಿಸಿದೆ.

ಇಲ್ಲಿನ ಆಸ್ಪತ್ರೆ ರಸ್ತೆಯ ಮೆಡಿಕಲ್ ಸೆಂಟರ್ ಖಾಸಗಿ ಕ್ಲಿನಿಕ್‌ಗೆ ಮಾಹಿತಿ ಮೇರೆಗೆ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಆನಂದ್ ಹಾಗೂ ಸೋಮವಾರಪೇಟೆ ತಾಲೂಕು ಆರೋಗ್ಯಾಧಿಕಾರಿ ಹಿಂದೂದಾರ್ ಹಾಗೂ ಸಿಬ್ಬಂದಿ ಭೇಟಿ ನೀಡಿ, ಪರಿಶೀಲಿಸಿದಾಗ ಯಾವುದೇ ಪರವಾನಗಿ ಪಡೆಯದಿರುವುದು ಪತ್ತೆಯಾಗಿದೆ. ಈ ಹಿನ್ನೆಲೆಯಲ್ಲಿ ಕ್ಲಿನಿಕ್‌ಗೆ ಬೀಗ ಹಾಕಲಾಯಿತು. ಜಿಲ್ಲಾ ಆರೋಗ್ಯಾಧಿಕಾರಿ ಡಾ.ಆನಂದ್ ಮಾತನಾಡಿ, ರಾಜ್ಯದ ಎಲ್ಲಾ ಖಾಸಗಿ ವೈದ್ಯಕೀಯ ಸಂಸ್ಥೆಗಳು ಆನ್‌ಲೈನ್ ಮೂಲಕ ಕೆಪಿಎಂಇ ಕಾಯ್ದೆ ಪ್ರಕಾರ ನೋಂದಣಿ ಮಾಡಿಸಬೇಕು. ಬಳಿಕ ಇಲಾಖೆಯಿಂದ ಪರಿಶೀಲನೆ ನಡೆಸಿ ಅವರಿಗೆ ಪರವಾನಗಿ ನೀಡಲಾಗುತ್ತದೆ. ಆದರೆ, ಸುಂಟಿಕೊಪ್ಪದ ಮೆಡಿಕಲ್ ಸೆಂಟರ್ ಖಾಸಗಿ ಕ್ಲಿನಿಕ್ ಸರ್ಕಾರದ ಗಮನಕ್ಕೆ ತರದೆ ರೋಗಿಗಳಿಗೆ ಚಿಕಿತ್ಸೆ ನೀಡುವುದು, ಔಷಧ ವಿತರಿಸುತ್ತಿರುವುದು ಕಂಡುಬಂದಿದೆ. ಕೆಪಿಎಂಇ ಕಾಯ್ದೆ ಪ್ರಕಾರ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಸಭೆ ನಡೆಸಿ, ಕ್ಲಿನಿಕ್ ಮಾಲೀಕರ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಚಿರತೆ ದಾಳಿಗೆ ಎರಡು ಹಸು ಬಲಿ


ಚಿರತೆ ದಾಳಿಯಿಂದ ಹಸುಗಳನ್ನು ಕಳೆದುಕೊಂಡು ನಷ್ಟ ಅನುಭವಿಸುವಂತಾಗಿದೆ. ಸರ್ಕಾರ ಹಾಗೂ ಸಂಬಂಧಪಟ್ಟ ಅರಣ್ಯ ಇಲಾಖೆ ಸೂಕ್ತ ಪರಿಹಾರ ನೀಡಬೇಕು ಎಂದು ಹಸುಗಳ ಮಾಲೀಕ ಯೂಸುಫ್ ಹಾಜಿ ಮನವಿ ಮಾಡಿದ್ದಾರೆ.

ನಾಪೋಕ್ಲು,ಫೆ.21–ಮೇಯಲು ಬಿಟ್ಟಿದ್ದ ಎರಡು ಹಸುಗಳ ಮೇಲೆ ಚಿರತೆ ದಾಳಿ ನಡೆಸಿ, ಕೊಂದುಹಾಕಿರುವ ಘಟನೆ ಸಮೀಪದ ಕೇಮಾಟ್‌ನಲ್ಲಿ ತಡವಾಗಿ ಬೆಳಕಿಗೆ ಬಂದಿದ್ದು, ಇದರಿಂದ ಜನರಲ್ಲಿ ಆತಂಕ ಸೃಷ್ಟಿಯಾಗಿದೆ.

ಹೊದ್ದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊದವಾಡ ಕೇಮಾಟ್‌ನ ಕಾಳಪ್ಪಮಾಡು ಎಂಬಲ್ಲಿ ಗ್ರಾಮದ ಯೂಸುಫ್ ಹಾಜಿ ಅವರಿಗೆ ಸೇರಿದ ಹಸುವನ್ನು ಮೇಯಲು ಬಿಟ್ಟಿದ್ದ ವೇಳೆ ಚಿರತೆ ದಾಳಿ ನಡೆಸಿದೆ. ನಂತರ ಕೊಟ್ಟಿಗೆಗೆ ಬಂದಿದ್ದ ಚಿರತೆ ಹಸುವಿನ ಮೇಲೆ ದಾಳಿ ನಡೆಸಿ, ಗಾಯಗೊಳಿಸಿದ್ದು, ಹಸು ಚಿಂತಾಜನಕ ಸ್ಥಿತಿಯಲ್ಲಿದೆ.

ಕಳೆದ ವಾರ ಯೂಸುಫ್ ಹಾಜಿ ಅವರಿಗೆ ಸೇರಿದ 4 ಹಸುಗಳನ್ನು ಎಂದಿನಂತೆ ಕಾವೇರಿ ನದಿ ದಡದಲ್ಲಿ ಮೇಯಲು ಬಿಡಲಾಗಿತ್ತು. ಆದರೆ, ಹಸುಗಳು ಕಾಣೆಯಾಗಿದ್ದವು. ನಂತರ ಕಾವೇರಿ ನದಿ ದಡದಲ್ಲಿ ಯೂಸುಫ್ ಹಾಜಿ ಹುಡುಕಾಟ ನಡೆಸಿದಾಗ ಅವರಿಗೆ ಚಿರತೆಯ ಹೆಜ್ಜೆ ಗುರುತು ಪತ್ತೆಯಾಗಿವೆ. ಅಲ್ಲೇ ಹಸುವಿನ ಕಳೇಬರ ಸಿಕ್ಕಿದೆ.

ಗ್ರಾಮದಲ್ಲಿ ಚಿರತೆ ದಾಳಿಯಿಂದ ಆತಂಕಗೊಂಡ ಗ್ರಾಮಸ್ಥರು, ಅರಣ್ಯ ಇಲಾಖೆಗೆ ಮಾಹಿತಿ ನೀಡಿದರು. ನಂತರ ಸ್ಥಳಕ್ಕೆ ಭೇಟಿ ನೀಡಿದ ಅರಣ್ಯ ಇಲಾಖಾಧಿಕಾರಿಗಳು ಪರಿಶೀಲನೆ ನಡೆಸಿದರು. ಚಿರತೆ ದಾಳಿಯಿಂದ ಗಾಯಗೊಂಡ ಹಸುವಿಗೆ ನಾಪೋಕ್ಲು ಪಶು ಆಸ್ಪತ್ರೆಯ ವೈದ್ಯಾಧಿಕಾರಿಗಳು ಚಿಕಿತ್ಸೆ ನೀಡಿದ್ದಾರೆ.

ನಾನು ಹೈನುಗಾರಿಕೆ ನಡೆಸಿ, ಹಾಲು ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದು, ಚಿರತೆ ದಾಳಿಯಿಂದ ಹಸುಗಳನ್ನು ಕಳೆದುಕೊಂಡು ನಷ್ಟ ಅನುಭವಿಸುವಂತಾಗಿದೆ. ಸರ್ಕಾರ ಹಾಗೂ ಸಂಬಂಧಪಟ್ಟ ಅರಣ್ಯ ಇಲಾಖೆ ಸೂಕ್ತ ಪರಿಹಾರ ನೀಡಬೇಕು ಎಂದು ಹಸುಗಳ ಮಾಲೀಕ ಯೂಸುಫ್ ಹಾಜಿ ಮನವಿ ಮಾಡಿದ್ದಾರೆ.

ಪೆಟ್ರೋಲ್ ಬಂಕ್ ಜಾಗದಲ್ಲಿ ಅಸ್ಥಿಪಂಜರ ಪತ್ತೆ



ಸುಂಟಿಕೊಪ್ಪ, ಫೆ.21–ಪಟ್ಟಣದ ಹೃದಯ ಭಾಗದಲ್ಲಿರುವ ಪೆಟ್ರೋಲ್ ಬಂಕ್ ಜಾಗದಲ್ಲಿ ಹೊಸ ಟ್ಯಾಂಕ್ ಅಳವಡಿಸಲು ಜೆಸಿಬಿಯಿಂದ ಬುಧವಾರ ಗುಂಡಿ ತೆಗೆಯುತ್ತಿದ್ದಾಗ ವ್ಯಕ್ತಿಯ ತಲೆ ಬುರುಡೆ ಹಾಗೂ ಅಸ್ಥಿಪಂಜರ ದೊರೆತಿದೆ.

ಬ್ರಿಟಿಷರ ಕಾಲದಲ್ಲಿ ಈ ಪ್ರದೇಶ ಸ್ಮಶಾನವಾಗಿದ್ದು, ದಾಖಲಾತಿಗಳಲ್ಲಿ ಕ್ರೈಸ್ತ ಸ್ಮಶಾನ ಎಂದು ನಮೂದಾಗಿದೆ ಎನ್ನಲಾಗಿದೆ. ಅಂದಿನ ಕಾಲಘಟ್ಟದಲ್ಲಿ ಈ ಪ್ರದೇಶ ಮಡಿಕೇರಿಯ ಸಂತ ಮೈಕಲ್ ಚರ್ಚ್‌ನ ಅಧೀನಕ್ಕೊಳಪಟ್ಟಿತ್ತು. ಸುಂಟಿಕೊಪ್ಪದಲ್ಲಿ ದೇವಾಲಯ ನಿರ್ಮಾಣಗೊಂಡ ನಂತರ ಮಾದಾಪುರ ರಸ್ತೆಯಲ್ಲಿ ನೂತನ ನಿವೇಶನ ಖರೀದಿಸಿ ಕ್ರೈಸ್ತ ಸಮಾಧಿಯನ್ನು ಸ್ಥಳಾಂತರಿಸಲಾಯಿತು ಎನ್ನಲಾಗಿದೆ. ಸುಂಟಿಕೊಪ್ಪ ಹೃದಯ ಭಾಗದಲ್ಲಿರುವ ಖಾಲಿ ಜಾಗದಲ್ಲಿ 1950ರಲ್ಲಿ ಪೆಟ್ರೋಲ್ ಬಂಕ್ ಅನ್ನು ಆರಂಭಿಸಲಾಗಿತ್ತು.

ಇಂದಿಗೂ ಪೆಟ್ರೋಲ್ ಬಂಕ್ ಇದ್ದು, ಹೊಸ ಟ್ಯಾಂಕ್ ಅಳವಡಿಸುವ ಸಲುವಾಗಿ ಜೆಸಿಬಿ ಮೂಲಕ ಆಳವಾದ ಗುಂಡಿ ತೆಗೆಯುತ್ತಿದ್ದಾಗ ತಲೆ ಬುರುಡೆ ಹಾಗೂ ಅಸ್ಥಿಪಂಜರ ಸಿಕ್ಕಿವೆ.

ಬೇಗೂರಿನಲ್ಲಿ ಸಂವಿಧಾನ ಜಾಗೃತಿ ಜಾಥಾ


ಬೇಗೂರು ಗ್ರಾಮದಲ್ಲಿ ಸಂವಿಧಾನ ಜಾಗೃತಿ ಜಾಥಾ ನಡೆಸಲಾಯಿತು.

ಬೇಗೂರು(ಗುಂಡ್ಲುಪೇಟೆ), ಫೆ.21–ಬೇಗೂರು ಗ್ರಾಮದಲ್ಲಿ ಬುಧವಾರ ಸಂವಿಧಾನ ಜಾಗೃತಿ ಜಾಥಾವನ್ನು ಅದ್ಧೂರಿಯಾಗಿ ನಡೆಸಲಾಯಿತು.

ಗ್ರಾಮದ ಹೊರವಲಯದ ಶ್ರೀ ಬಂಡಿಗೆರೆ ಮಹದೇಶ್ವರಸ್ವಾಮಿ ದೇವಸ್ಥಾನದ ಮುಂಭಾಗ ಸೇರಿದ ಡೊಳ್ಳು ಕುಣಿತ, ಗೊರವರ ಕುಣಿತ, ವೀರಗಾಸೆ ಹಾಗೂ ಕಂಸಾಳೆ ಸೇರಿದಂತೆ ವಿವಿಧ ಜನಪದ ಕಲಾತಂಡಗಳು ಹಾಗೂ ವಾದ್ಯಮೇಳಗಳೊಂದಿಗೆ ಕಳಸವನ್ನೊತ್ತ ಬಾಲಕಿಯರು ಜಾಥಾಕ್ಕೆ ಸ್ವಾಗತಿಸಿದರು. ನಂತರ ಮಹದೇಶ್ವರಸ್ವಾಮಿಗೆ ಪೂಜೆ ಸಲ್ಲಿಸಿ, ಗ್ರಾಮದ ಕಡೆಗೆ ಹೊರಟ ಮೆರವಣಿಗೆಗೆ ಆಟೋ ಚಾಲಕರು ಅಂಬೇಡ್ಕರ್‌ದೊಂದಿಗೆ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಸರ್ಕಾರಿ ಪ್ರಾಥಮಿಕ ಶಾಲೆ, ಐಟಿಐ ಕಾಲೇಜು, ಸರ್ಕಾರಿ ಪದವಿಪೂರ್ವ ಕಾಲೇಜು ಮುಂತಾದ ಶಾಲೆಗಳಿಂದ ವಿದ್ಯಾರ್ಥಿಗಳು ಜಾಥಾದಲ್ಲಿ ಭಾಗವಹಿಸಿದ್ದರು.

ಗ್ರಾಪಂ ಅಧ್ಯಕ್ಷೆ ಜಯಮ್ಮ, ನೋಡಲ್ ಅಧಿಕಾರಿ ಭಾಸ್ಕರ್, ಉಪಾಧ್ಯಕ ಬಿ.ಆರ್.ಮಹದೇವಸ್ವಾಮಿ, ಪಿಡಿಓ ಗುರುಪ್ರಸಾದ್, ಗ್ರಾಪಂ ಮಾಜಿ ಅಧ್ಯಕ್ಷ ರಾಜಶಟ್ಟಿ, ಸದಸ್ಯರಾದ ಮಹದೇವಶೆಟ್ಟಿ, ಪುನಿತ್, ಸೋಮಣ್ಣ ಗುರುಸ್ವಾಮಿ, ಮಡಿಕೇರಿ ಮಂಜು, ಮಹೇಶ್, ಚಿಕ್ಕತಾಯಮ್ಮ, ಲೀಲಾವತಿ, ನಾಗಮ್ಮ, ಮಾನವ ಬಂಧುತ್ವ ವೇದಿಕೆ ಅಧ್ಯಕ್ಷ ಮಾಡ್ರಳ್ಳಿ ಸುಭಾಷ್, ಮುತ್ತಣ್ಣ, ಗ್ರಾಮದ ಅಂಬೇಡ್ಕರ್ ಯುವಕ ಸಂಘದ ಪದಾಧಿಕಾರಿಗಳು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಹಾಜರಿದ್ದರು

ಸಂವಿಧಾನ ಆಶಯವನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಿ


ಚಾಮರಾಜನಗರ ಜಿಲ್ಲಾಡಳಿತ ಭವನದ ಮುಂಭಾಗದ ಸಂವಿಧಾನ ಜಾಗೃತಿ ಜಾಥಾ ಅಂಗವಾಗಿ ಹಮ್ಮಿಕೊಂಡಿರುವ ಚಿತ್ರಕಲಾ ಶಿಬಿರದಲ್ಲಿ ಜಿಲ್ಲಾಧಿಕಾರಿ ಶಿಲ್ಪನಾಗ್ ಸಂವಿಧಾನ ಪೀಠಿಕೆ ಬೋಧಿಸಿದರು.

ಚಾಮರಾಜನಗರ, ಫೆ.21–ಸಂವಿಧಾನದ ಆಶಯಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಜಿಲ್ಲಾ ಚಿತ್ರಕಲಾವಿದರ ಸಂಘ, ಡಾ.ಬಿ.ಆರ್.ಅಂಬೇಡ್ಕರ್ ಸಂಘಗಳ ಒಕ್ಕೂಟ ಹಾಗೂ ಪವನ್ ಸೇವಾ ಟ್ರಸ್ಟ್ ವತಿಯಿಂದ ಸಂವಿಧಾನ ಜಾಗೃತಿ ಜಾಥಾ ಅಂಗವಾಗಿ ಹಮ್ಮಿಕೊಂಡಿದ್ದ ರಾಷ್ಟ್ರಮಟ್ಟದ ಚಿತ್ರಕಲಾ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಅಂಬೇಡ್ಕರ್ ಶ್ರೇಷ್ಠ ಸಂವಿಧಾನ ರಚಿಸಿರುವ ಕಾರಣದಿಂದ ದೇಶದಲ್ಲಿ ಎಲ್ಲರೂ ಸ್ವಾತಂತ್ರ್ಯವಾಗಿ ಬದುಕುತ್ತಿದ್ದೇವೆ ಎಂದರು.

ಸಂವಿಧಾನ ನಮ್ಮೆಲ್ಲರ ರಕ್ಷಕವಚ. ಸರ್ವರಿಗೂ ಸಮಾನತೆ ಇರುವ ಸಂವಿಧಾನ ಬಗ್ಗೆ ಮಾತನಾಡುವುದರಿಂದ ಒಳಿತಾಗುವುದಿಲ್ಲ, ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಪ್ರೀತಿ, ಭಾತೃತ್ವದಿಂದ ಒಂದು ಸಮಾಜ ನಿರ್ಮಾಣ ಮಾಡಬೇಕು. ಯಾವುದೇ ದ್ವೇಷ, ಅಸೂಯೆ, ಗುಂಪುಗಾರಿಕೆ ಮಾಡದೆ ಸಮಾನತೆಯಿಂದ ಬದುಕಬೇಕು. ಜಿಲ್ಲೆಯಲ್ಲಿ ಸಂವಿಧಾನ ಜಾಗೃತಿ ಜಾಥಾ ಯಶಸ್ವಿಯಾಗಿದ್ದು, ಮಾ.7ರವರಗೆ ಜಾಥಾ ವಿಸ್ತರಿಸಲಾಗಿದೆ ಎಂದರು.


ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಬಿ.ಮಲ್ಲಿಕಾರ್ಜುನ, ಡಾ.ಬಿ.ಆರ್.ಅಂಬೇಡ್ಕರ್ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸಿ.ಕೆ.ಮಂಜುನಾಥ್, ಶಿಕ್ಷಕಿ ಎಸ್.ಇಂದಿರಾ, ಪ್ರಗತಿಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸಿ.ಎಂ.ಕೃಷ್ಣಮೂರ್ತಿ ಮಾತನಾಡಿದರು. ಇದೇ ವೇಳೆ ಪುಟಾಣಿ ಚಾರಿತ್ರ್ಯ ಸಂವಿಧಾನ ಪೀಠಿಕೆ ಬೋಧಿಸಿದಳು.

ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಚಿತ್ರಕಲಾವಿದರ ಸಂಘದ ಜಿಲ್ಲಾಧ್ಯಕ್ಷ ರವಿತೇಜ್, ಪವನ್ ಸೇವಾ ಸಂಸ್ಥೆ ಅಧ್ಯಕ್ಷ ಸಂಪತ್ ಕುಮಾರ್, ಶ್ರೀರಾಮಚಂದ್ರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಂ.ಎಸ್.ಮಾದಯ್ಯ, ನಗರಸಭಾ ಸದಸ್ಯ ಎಂ.ಮಹೇಶ್, ಚಿತ್ರಕಲಾವಿದರ ಸಂಘದ ಪ್ರಧಾನ ಕಾರ್ಯದರ್ಶಿ ಎನ್.ಅನಿಲ್ ಕುಮಾರ್ ರಾಮಸಮುದ್ರ ಸುರೇಶ್, ಚಿತ್ರಕಲಾವಿದರು, ಕಾಲೇಜು ವಿದ್ಯಾರ್ಥಿಗಳು ಹಾಜರಿದ್ದರು.


ಚಾಮರಾಜನಗರದಲ್ಲಿ ಬೀದಿ ನಾಟಕದ ಮೂಲಕ ಬೀದಿಬದಿ ವ್ಯಾಪಾರಿಗಳಿಗೆ ಜಾಗೃತಿ ಮೂಡಿಸಲಾಯಿತು. ನಗರಸಭೆ ಪೌರಾಯುಕ್ತ ರಾಮದಾಸ್, ನಗರಸಭೆ ಯೋಜನಾಧಿಕಾರಿ ವೆಂಕಟನಾಯಕ್, ಅಭಿಯಾನದ ವ್ಯವಸ್ಥಾಪಕರಾದ ಅಮ್ಜದ್ ಪಾಷಾ, ಡಾ.ಪುಟ್ಟಸ್ವಾಮಿ, ಜಿಲ್ಲಾ ನೆಟ್‌ಬಾಲ್ ಅಸೋಸಿಯೇಷನ್ ಅಧ್ಯಕ್ಷ ವಿ.ಶ್ರೀನಿವಾಸ ಪ್ರಸಾದ್, ನಗರಸಭೆ ಸಿಆರ್‌ಪಿಗಳಾದ ನರ್ಗೀಸ್ ಬಾನು, ರೂಪಾ, ಸಿಬ್ಬಂದಿ ಜ್ಯೋತಿ, ನಿವೇದಿತಾ, ನವೀನ್, ಜಾಗೃತಿ ಕಲಾತಂಡದ ಮಹದೇವಸ್ವಾಮಿ ಬಾಗಳಿ ಇದ್ದರು.

ಗಡಿ ಭಾಗಗಳಲ್ಲಿ ಕಟ್ಟುನಿಟ್ಟಿನ ನೀತಿ ಸಂಹಿತೆ ಪಾಲಿಸಿ

ಜಂಟಿ ಸಮನ್ವಯ ಸಮಿತಿ ಸಭೆಯಲ್ಲಿ ಹಿರಿಯ ಅಧಿಕಾರಿಗಳಿಗೆ ಸೂಚನೆ


ಚಾಮರಾಜನಗರ ತಾಲೂಕಿನ ಸುವರ್ಣಾವತಿಯ ಪ್ರವಾಸಿ ಮಂದಿರದಲ್ಲಿ ಜಿಲ್ಲಾಧಿಕಾರಿ ಶಿಲ್ಪನಾಗ್ ಹಾಗೂ ತಮಿಳುನಾಡಿನ ಈರೋಡ್ ಜಿಲ್ಲಾ ಕಲೆಕ್ಟರ್ ಎಸ್.ರಾಜಗೋಪಾಲ್ ನೇತೃತ್ವದಲ್ಲಿ ಹಿರಿಯ ಅಧಿಕಾರಿಗಳ ಜಂಟಿ ಸಮನ್ವಯ ಸಮಿತಿ ಸಭೆ ನಡೆಯಿತು.

ಚಾಮರಾಜನಗರ, ಫೆ.21–ಲೋಕಸಭಾ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲೆಯ ಗಡಿ ಭಾಗಗಳಲ್ಲಿ ಕಟ್ಟುನಿಟ್ಟಿನ ನೀತಿ ಸಂಹಿತೆ ಪಾಲನೆ ಸಂಬಂಧ ಬುಧವಾರ ತಾಲೂಕಿನ ಸುವರ್ಣಾವತಿಯ ಪ್ರವಾಸಿ ಮಂದಿರದಲ್ಲಿ ಜಿಲ್ಲಾಧಿಕಾರಿ ಶಿಲ್ಪನಾಗ್ ಹಾಗೂ ತಮಿಳುನಾಡಿನ ಈರೋಡ್ ಜಿಲ್ಲಾ ಕಲೆಕ್ಟರ್ ಎಸ್.ರಾಜಗೋಪಾಲ್ ನೇತೃತ್ವದಲ್ಲಿ ಅಂತರ ರಾಜ್ಯ ಗಡಿ ಜಿಲ್ಲೆಗಳ ಹಿರಿಯ ಅಧಿಕಾರಿಗಳ ಜಂಟಿ ಸಮನ್ವಯ ಸಮಿತಿ ಸಭೆ ನಡೆಯಿತು.

ಸಭೆಯಲ್ಲಿ ಚುನಾವಣಾ ಅಕ್ರಮಗಳಿಗೆ ಅವಕಾಶವಾಗದಂತೆ ಗಡಿಭಾಗಗಳಲ್ಲಿ ಕಟ್ಟೆಚ್ಚರ ವಹಿಸಬೇಕು. ಅಕ್ರಮ ಮದ್ಯ, ದಾಖಲೆ ಇಲ್ಲದ ಹಣ, ಆಮಿಷವೊಡ್ಡುವ ಉಡುಗೊರೆ, ವಸ್ತುಗಳ ಸಾಗಣೆ ಮೇಲೆ ನಿಗಾ ಇಡಬೇಕು. ಅಕ್ರಮಗಳು ಕಂಡು ಬಂದ ಕೂಡಲೇ ಜಪ್ತಿ ಮಾಡಿ ನಿಯಮಾನುಸಾರ ಕ್ರಮ ಜರುಗಿಸಬೇಕೆಂದು ಸೂಚಿಸಲಾಯಿತು.

ಗಡಿ ಭಾಗಗಳಲ್ಲಿ ಶಾಶ್ವತ ಚೆಕ್‌ಪೋಸ್ಟ್‌ಗಳೊಂದಿಗೆ ತಾತ್ಕಾಲಿಕ ಚೆಕ್‌ಪೋಸ್ಟ್‌ಗಳು ಸಕ್ರಿಯವಾಗಿ ಕಾರ್ಯ ನಿರ್ವಹಣೆಯಾಗಬೇಕು. ಗಡಿ ಭಾಗದಲ್ಲಿ ಸಂಚರಿಸುವ ವಾಹನಗಳನ್ನು ಕಟ್ಟುನಿಟ್ಟಾಗಿ ತಪಾಸಣೆ ನಡೆಸಬೇಕು. ಯಾವುದೇ ಅಕ್ರಮಗಳು ನಡೆ ಯದಂತೆ ಕಣ್ಗಾವಲು ಇಡಬೇಕು. ಪರಸ್ಪರ ಉಭಯ ಜಿಲ್ಲೆಗಳ ಅಧಿಕಾರಿಗಳ ಸಮನ್ವಯ ಸಹಕಾರದಿಂದ ಯಾವುದೇ ಲೋಪಗಳಿಗೆ ಅವಕಾಶವಾಗದಂತೆ ನೋಡಿಕೊಳ್ಳುವ ಕುರಿತು ವಿಸ್ತೃತವಾಗಿ ಚರ್ಚಿಸಲಾಯಿತು.

ಅರಣ್ಯದಂಚಿನ ಗ್ರಾಮಗಳ ಮೂಲಕ ಸಂಚರಿಸುವ ವಾಹನಗಳ ಮೇಲೂ ನಿಗಾ ಇರಿಸಬೇಕು. ಎಲ್ಲಿಯೂ ಆಗಲಿ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ಪರಿಶೀಲಿಸಬೇಕು. ಉಭಯ ಜಿಲ್ಲೆಗಳಲ್ಲೂ ಕಂಟ್ರೋಲ್ ರೂಂಗೆ ಮಾಹಿತಿ ನೀಡುವ ವ್ಯವಸ್ಥೆಯಾಗಬೇಕು. ಸಂಪರ್ಕ ವ್ಯವಸ್ಥೆ ಅಲಭ್ಯವಾಗುವ ಕಡೆ ಹಾಟ್‌ಲೈನ್ ಸಂಪರ್ಕ ಕಲ್ಪಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಗಡಿ ಭಾಗದ ಗ್ರಾಮಗಳಲ್ಲಿ ಅಕ್ರಮ ಮದ್ಯ ಮಾರಾಟವಾಗದಂತೆ ಎಚ್ಚರಿಕೆ ವಹಿಸಬೇಕು. ಇದಕ್ಕಾಗಿಯೇ ಗಡಿ ಗ್ರಾಮಗಳ ಅಂಗಡಿಗಳಲ್ಲಿ ವ್ಯಾಪಕವಾಗಿ ತಪಾಸಣಾ ಕಾರ್ಯವನ್ನು ಅಬಕಾರಿ ಇಲಾಖೆಯ ಅಧಿಕಾರಿಗಳು ಚುರುಕುಗೊಳಿಸಬೇಕು. ಮಾದಕ ವಸ್ತುಗಳ ಕಾರ್ಯಚಟುವಟಿಕೆಗಳ ಮೇಲೂ ಹೆಚ್ಚಿನ ನಿಗಾ ಇಡಬೇಕು. ಯಾವುದೇ ಅಕ್ರಮಗಳು ನಡೆಯದಂತೆ ಪಾರದರ್ಶಕವಾಗಿ ಚುನಾವಣೆ ನಡೆಯಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಅತ್ಯಂತ ಬಿಗಿಯಾಗಿ ಜಾರಿಗೊಳಿಸಬೇಕು ಎಂದು ಉಭಯ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಈರೋಡ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಜವಾಹರ್, ಚಾಮರಾಜನಗರ ಜಿಲ್ಲೆಯ ಹಿರಿಯ ಅರಣ್ಯ ಅಧಿಕಾರಿಗಳಾದ ದೀಪಾ ಕಂಟ್ರಾಕ್ಟರ್, ಡಾ.ಸಂತೋಷ್, ಸತ್ಯಮಂಗಲ ಹುಲಿ ಸಂರಕ್ಷಿತ ಪ್ರದೇಶದ ಉಪನಿರ್ದೇಶಕ ಕೆ.ಸುಧಾಕರ್, ತಹಶೀಲ್ದಾರ್‌ಗಳಾದ ಬಸವರಾಜು, ರಮೇಶ್ ಬಾಬು, ಮಂಜುಳಾ, ವಿರೂಪಾಕ್ಷ, ಸಹಾಯಕ ಚುನಾವಣಾಧಿಕಾರಿಗಳಾದ ಮಲ್ಲಿಕಾರ್ಜುನ್, ಯೋಗಾ ನಂದ್, ಪ್ರಾದೇಶಿಕ ಸಾರಿಗೆ ಅಧಿಕಾರಿ ಗಾಯತ್ರಿ, ಉಭಯ ಜಿಲ್ಲೆಗಳ ಅಬಕಾರಿ, ಪೊಲೀಸ್, ಕಂದಾಯ ಅಧಿಕಾರಿಗಳು ಉಪಸ್ಥಿತರಿದ್ದರು.

ಸಾಹಿತ್ಯ ಸಂಭ್ರಮದಿಂದ ಮಕ್ಕಳ ಪ್ರತಿಭೆ ಅನಾವರಣ


ಚಾ.ನಗರ ತಾಲೂಕಿನ ಮಂಗಲ ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಆಯೋಜಿಸಿದ್ದ ತಾಲೂಕು ಮಟ್ಟದ ಮಕ್ಕಳ ಸಾಹಿತ್ಯ ಸಂಭ್ರಮಕ್ಕೆ ಜಿಪಂ ಉಪಕಾರ್ಯದರ್ಶಿ ಪಿ.ಲಕ್ಷ್ಮೀ ಚಾಲನೆ ನೀಡಿದರು.

> ಇಂದಿನ ಮಕ್ಕಳಲ್ಲಿ ಟಿವಿ, ಮೊಬೈಲ್ ಬಳಕೆ ಅತಿಯಾಗಿದೆ. ಇದು ಸಲ್ಲದು. ನಿರಂತರ ಕಲಿಕೆಯ ಅಭ್ಯಾಸವನ್ನು ಹೆಚ್ಚಿಸಿಕೊಳ್ಳಬೇಕು. ಮಕ್ಕಳು ತಮ್ಮ ಊರಿನ ಸ್ಥಳೀಯ ಸಾಂಸ್ಕೃತಿಕ ಇತಿಹಾಸವನ್ನು ಅರಿಯಬೇಕು.
>
> –ಕಾಶಿನಾಥ್, ಡಯಟ್ ಪ್ರಾಂಶುಪಾಲ

ಚಾಮರಾಜನಗರ, ಫೆ.21–ಮಕ್ಕಳಲ್ಲಿರುವ ಕಲಾತ್ಮಕ ಸುಪ್ತ ಪ್ರತಿಭೆಗಳ ಮೇಲೆ ಬೆಳಕು ಚೆಲ್ಲಲು ಮಕ್ಕಳ ಸಾಹಿತ್ಯ ಸಂಭ್ರಮ ಶಿಬಿರ ಉತ್ತಮ ವೇದಿಕೆಯಾಗಲಿದೆ ಎಂದು ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಪಿ.ಲಕ್ಷ್ಮೀ ತಿಳಿಸಿದರು.

ತಾಲೂಕಿನ ಮಂಗಲ ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಬುಧವಾರ ಜಿಲ್ಲಾ, ಪಂಚಾಯಿತಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಮಂಗಲ ಗ್ರಾಪಂ, ಭಾರತ ಜ್ಞಾನ ವಿಜ್ಞಾನ ಸಮಿತಿಯ ತಾಲೂಕು ಘಟಕ ಹಾಗೂ ಮೊಬಿಲಿಟಿ ಇಂಡಿಯಾ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ತಾಲೂಕು ಮಟ್ಟದ 3 ದಿನಗಳ 'ಮಕ್ಕಳ ಸಾಹಿತ್ಯ ಸಂಭ್ರಮ' ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮಕ್ಕಳಿಗೆ ಶಾಲೆಗಳಲ್ಲಿ ದೈನಂದಿನ ಪಾಠ, ಪ್ರವಚನದ ಜೊತೆಗೆ ಕಥೆ ಕಟ್ಟುವುದು, ಕವಿತೆ ರಚನೆ, ನಾಟಕಗಳಲ್ಲಿ ಅಭಿನಯ, ಪ್ರಬಂಧ ಚರ್ಚೆ, ವಾಚನ ಮಾಡುವುದು, ಬರಹ, ಅನುಭವ, ಕನಸು–ಕಲ್ಪನೆಗಳನ್ನು ವ್ಯಕ್ತಪಡಿಸುವುದು, ಸಾಹಿತ್ಯಾತ್ಮಕ ಚಟುವಟಿಕೆಗಳು ಸೇರಿದಂತೆ ಹಲವಾರು ಬಗೆಯ ಪ್ರತಿಭಾ ಕಲಾ ಪ್ರಾಕಾರಗಳನ್ನು ಹೊರಸೂಸಲು ಸಾಹಿತ್ಯ ಸಂಭ್ರಮ ಸೂಕ್ತ ವೇದಿಕೆ ಒದಗಿಸಲಿದೆ. ಮಕ್ಕಳ ಉನ್ನತ ಸಾಧನೆಗೆ ಈ ಶಿಬಿರ ಪ್ರೇರಣೆಯಾಗಬೇಕು ಎಂದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರಾಜ್ಯಾದ್ಯಂತ ಮಕ್ಕಳ ಸಾಹಿತ್ಯ ಸಂಭ್ರಮ ಕಾರ್ಯಕ್ರಮ ಅನುಷ್ಠಾನಗೊಳಿಸುತ್ತಿದ್ದು, ಮಕ್ಕಳ ಸಬಲೀಕರಣಕ್ಕಾಗಿ ಉತ್ತಮ ಹೆಜ್ಜೆ ಇಟ್ಟಿದೆ. ಶಿಬಿರಗಳ ನಿರ್ವಹಣೆಗಾಗಿ ನಿಯೋಜಿಸಿರುವ ಸಂಪನ್ಮೂಲ ಶಿಕ್ಷಕರು ಮಕ್ಕಳ ಪ್ರತಿಭೆ ಅನಾ ವರಣಕ್ಕೆ ಪೂರಕವಾಗಿ ಸ್ಪಂದಿಸಬೇಕು. ಮಕ್ಕಳು ಸಹ ತಮಗೆ ದೊರೆತಿರುವ ಸದಾವಕಾಶವನ್ನು ಸದ್ಬಳಕೆ ಮಾಡಕೊಳ್ಳಬೇಕು. ತಂದೆ–ತಾಯಿ, ಗುರು–ಹಿರಿಯರನ್ನು ಗೌರವದಿಂದ ಕಾಣಬೇಕು. ಸಮಾಜಕ್ಕೆ ಉತ್ತಮ ಕೊಡುಗೆ ನೀಡಬೇಕು ಎಂದು ತಿಳಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸೋಮಣ್ಣೇಗೌಡ ಮಾತನಾಡಿ, ಮಕ್ಕಳು ಸಾಹಿತ್ಯಾತ್ಮಕ ಚಟುವಟಿಕೆಗಳ ಬಗ್ಗೆ ಹೆಚ್ಚು ಒಲವು ತೋರಬೇಕು. ಪುಸ್ತಕ ಓದುವ ಸಂಸ್ಕೃತಿಗೆ ಮಕ್ಕಳು ಆದ್ಯತೆ ನೀಡಬೇಕು. ಜಿಲ್ಲೆಯಲ್ಲಿ ಉತ್ತಮ ಸಾಹಿತಿಗಳಿದ್ದಾರೆ. ಅವರನ್ನು ಮಾದರಿಯಾಗಿಸಿಕೊಂಡು ಮುನ್ನಡೆಯಬೇಕು ಎಂದರು.

ಗ್ರಾಪಂ ಅಧ್ಯಕ್ಷ ಎಂ.ಎಸ್.ಅಣ್ಣಪ್ಪಸ್ವಾಮಿ ಮಾತನಾಡಿ, ಮಕ್ಕಳು ಲಭ್ಯವಿರುವ ಸಾಹಿತ್ಯ ಗ್ರಂಥಗಳನ್ನು ಮನನ ಮಾಡಿ ಹೆಚ್ಚಿನ ಅನುಭವ ಪಡೆಯಬೇಕು. ಸಾಹಿತಿಗಳ ಹಾಗೂ ಉನ್ನತ ಸಾಧನೆ ಮಾಡಿರುವವರ ಜೀವನ ಚರಿತ್ರೆಗಳನ್ನು ಅರಿಯಬೇಕು ಎಂದರು.

ಭಾರತ ಜ್ಞಾನ ವಿಜ್ಞಾನ ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ಬಾಬು, ಮಕ್ಕಳ ಸಾಹಿತ್ಯ ಸಂಭ್ರಮ ಕುರಿತು ಮಾತನಾಡಿದರು. ಅಯ್ಯನ ಸರಗೂರು ಮಠದ ಮಹದೇವಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಗ್ರಾಪಂ ಸದಸ್ಯರಾದ ಮಂಜುನಾಥಸ್ವಾಮಿ, ಎಂ.ಮಹೇಶ, ವೈ.ಸಿ.ಮಹದೇವಸ್ವಾಮಿ, ಮಂಜು, ಶಶಿಧರ, ಸುಧಾ, ಸುಮಾ, ಶ್ರುತಿ, ತಾಪಂ ಸಹಾಯಕ ನಿರ್ದೇಶಕ ಉಮೇಶ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಆದಿಶೇಷ ಮೂರ್ತಿ, ಕಾರ್ಯದರ್ಶಿ ನಾಗರಾಜು, ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಕೊಡಗಿನ, ವಿರಾಜಪೇಟೆ ಸಮೀಪವಿರುವ ರೆಸಾರ್ಟ್‌ವೊಂದಕ್ಕೆ ಕೆಲಸಗಾರರು ಬೇಕಾಗಿದ್ದಾರೆ. 1) ಫ್ರಂಟ್ ಆಫೀಸ್ ರಿಸೆಪ್ಷನಿಸ್ಟ್, (2) ರೆಸಾರ್ಟ್ ಮ್ಯಾನೇಜರ್, (3) ಕಿಚನ್ ಅಸಿಸ್ಟೆಂಟ್, (4) ಸೆಕ್ಯೂರಿಟಿ ಗಾರ್ಡ್, (5) ಫೀಮೇಲ್ ಥೆರಪಿಸ್ಟ್. ಸಂಪರ್ಕಿಸಬೇಕಾದ ವಿಳಾಸ: ಆರೆಂಜ್ ವ್ಯಾಲಿ ರೆಸಾರ್ಟ್, ಅರ್ಜಿ ಗ್ರಾಮ, ವಿರಾಜಪೇಟೆ.
9448108299, 9448184444

ಬೇಕಾಗಿದ್ದಾರೆ
V.K.GOLD ಕಂಪನಿಯಲ್ಲಿ ಕೆಲಸ ಮಾಡಲು ಯುವಕ ಮತ್ತು ಯುವತಿಯರು ಬೇಕಾಗಿದ್ದಾರೆ. ಸಂಬಳ: 12000 ರಿಂದ 15000
ರಾಮಸ್ವಾಮಿ ಸರ್ಕಲ್, ಕೃಷ್ಣ ಬೇಕರಿ ಹಿಂಭಾಗ, ಮೈಸೂರು
9845028614

SBIT TRAVELS
Group Tour (All Inclusive Ex: Mysore)
3N4D MALAYSIA - 46,000/-
Apr. 20th | May : 5th, 25th
4N5D THAILAND - 53,000/-
Mar. 20th | Apr: 3rd, 26th | May: 15th, 22nd
4N5D BALI - 69,000/-
Apr: 19th, 28th | May: 10th, 27th
9343524127
(Saraswathipuram, Mysuru)

ದಾಖಲಾತಿ ಕಳೆದಿದೆ
ಶ್ರೀಮತಿ ಎಂ. ಸುಬ್ಬಲಕ್ಷ್ಮಿ, W/o ಟಿ. ಮುರುಗೇಶ, #1360, 22ನೇ ಕ್ರಾಸ್, ಸಂಕ್ರಾಂತಿ ವೃತ್ತ, ಹೆಬ್ಬಾಳ್ 2ನೇ ಹಂತ, ಮೈಸೂರು–570017, ಮುಡಾದಿಂದ ಮಂಜೂರಾಗಿ ಬಂದಿರುವ ಮಂಜೂರಾತಿ ಪತ್ರ, ಹಕ್ಕು ಪತ್ರ, ಸ್ವಾಧೀನ ಪತ್ರ, ಕ್ರಯ ಪತ್ರ, ಕಂದಾಯ ರಶೀದಿ ಮುಂತಾದವುಗಳು ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 9008855397

ಬೇಕಾಗಿದ್ದಾರೆ
ಹುಣಸೂರು ತಾಲ್ಲೂಕಿನಲ್ಲಿರುವ ಮರದೂರು ಗ್ರಾಮದಲ್ಲಿ ತೋಟವನ್ನು ನೋಡಿಕೊಳ್ಳಲು ಅನುಭವವಿರುವ ಕುಟುಂಬವೊಂದು ಬೇಕಾಗಿದೆ.
Call: 78991 73171

WANTED
COMPUTER TYPIST (Male / Female) FOR ADVOCATE OFFICE
Qualification: Typing - English & Kannada (Kan - Nudi / Baraha) in M.S. Word & Excel / Page Maker 9.30 am to 2 pm. Sunday: 10.30 to 3 pm. Salary: 10,000/- per month. For evening: (Male only). 6.30 pm to 11.30 pm. Salary: Rs. 10,000/- per month.
7349337469, 9448525072

REQUIRED
For a Reputed firm in Hebbal Industrial Estate, Mysore
1. SALES CO-ORDINATOR
(Female) - 1 Nos. - Qualification: B.Com, B.Sc, M.Com, Experience: Minimum 1-2 Years, Excellent Communication in Kannada/English/Hindi
Salary - Rs. 15000/-
9972029007

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194, 9606783264

ಮನೆ ಭೋಗ್ಯಕ್ಕಿದೆ
20x30
ವಸಂತನಗರ,
ಬನ್ನೂರು ರಸ್ತೆ
9620119858

SITE FOR SALE
30x40 East face site sale at Railway Layout, Bogadi, #315 immediately registered.
Mob: 98802-73834

ಬೇಕಾಗಿದ್ದಾರೆ
Cooks, KT/Asst., Waiters,
Supervisor,
Receptionist
Attractive Salary, PF & ESI with food and accommodation
ಸಂಪರ್ಕಿಸಿ
ಪಾರ್ಕ್‌ಲೇನ್ ಹೋಟೆಲ್
2720, ಹರ್ಷ ರಸ್ತೆ, ಮೈಸೂರು

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ ಬಲ್ಲಾಳ್ ಸರ್ಕಲ್ ಮತ್ತು ಅಪೋಲೊ ಆಸ್ಪತ್ರೆ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC, ಸಂಬಳ: 19000 ESI & PF ಊಟ ತಿಂಡಿ ವ್ಯವಸ್ಥೆ ಇರುತ್ತದೆ.
9620667819
9620777819

ಮೈಸೂರಿನಲ್ಲಿ PG ನಡೆಸಲು ಮನೆ ಅಥವಾ ಕಟ್ಟಡ ಬೇಕಾಗಿದೆ
9164427143
7411223692

ಮುಡಾ ಸೈಟ್ ಮಾರಾಟಕ್ಕಿದೆ
ಜೆ.ಪಿ.ನಗರ ರಿಂಗ್ ರಸ್ತೆ ಪಕ್ಕದಲ್ಲಿ ಕುಪ್ಪಲೂರು ರಸ್ತೆಯ ನಂಜುಂಡೇಶ್ವರ ಲೇಔಟ್‌ನಲ್ಲಿ 30x50 ಅಳತೆಯ ನಿವೇಶನಗಳ ಸಂಖ್ಯೆ 9, 33, 38, 42, 50 ಮಾರಾಟಕ್ಕಿದೆ.
9886048471

ನಿವೇಶನ ಬೇಕಾಗಿರುತ್ತದೆ
40x60
ಸುತ್ತಳತೆ ಉಳ್ಳ ಗೊಬ್ಬಳಿಮರ ಹತ್ತಿರ ಜೆ.ಪಿ.ನಗರ, ಮೈಸೂರು
8884492945
8884492945

SITE FOR SALE
Fully Developed MUDA Approved layout at a Prime Location
For Details Contact:
9483358399

ಸುವರ್ಣ ಯಾತ್ರ
7 ದಿನಗಳು ಭೂತಾನ್ ಪ್ರವಾಸ 11/4/24 ಕಾಶಿ ಆಯೋಧ್ಯ ಪ್ರವಾಸ 22/3/24
7 ದಿನಗಳು ಚಾರ್ದಾಮ್ ಯಮುನೋತ್ರಿ, ಗಂಗೋತ್ರಿ, ಕೇದಾರ್‌ನಾಥ್, ಬದ್ರಿನಾಥ್ ಯಾತ್ರಾ 13 ದಿನಗಳು 8/5/24
9019462508
8660233673

CHANGE OF NAME
I, Avesh Iqbal (Father) & Shaba Tyyab (Mother) parents of Humaira residing at # 31, Apt. 201, 1st Cross, 'C' Layout, Bannimantap, Mysuru-570015 have changed our minor daughter's name from HUMAIRA to HUMAIRA AVESH on our own free will before Notary L.H. Rajendran on 31/01/2024. In future in all records, deeds dealings and transactions as well as all occasions whatsoever, our daughter's name will be HUMAIRA AVESH.
Sd/- Avesh Iqbal , Sd/- Shaba Tyyab

ಮನೆಯನ್ನು ಕಟ್ಟಿಕೊಡಲಾಗುತ್ತದೆ
ಮೈಸೂರು ಕೆ.ಆರ್.ಪೇಟೆ, ಕೆ.ಆರ್.ನಗರ, ಹಾಸನ ಚಾಮರಾಜ ನಗರ, ಮಂಡ್ಯ, ಎಲ್ಲಾ ಸಿಟಿ ಹಾಗೂ ಹಳ್ಳಿಗಳಲ್ಲಿ ಕಟ್ಟಡವನ್ನು ಕಟ್ಟಿ ಕೊಡಲಾಗುವುದು. ಒಂದು ಚದರಕ್ಕೆ 175000/–
9620377533

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU: 9611028523 MANGALORE: 9343142258

ಬೈಕ್ ರೈಡರ್ ಬೇಕಾಗಿದ್ದಾರೆ
ರಾಪಿಡೋ ರೈಡರ್ ಆಗಿ ಸೇರಿ ಹಾಗೂ ದಿನಕ್ಕೆ 1500/– ವರೆಗೂ ಸಂಪಾದಿಸಿ ಅಗತ್ಯ ದಾಖಲೆಗಳು DL ವಾಹನದ ದಾಖಲಾತಿಗಳು ಮತ್ತು ಆಧಾರ್ ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ
04048937617

ಬೇಕಾಗಿದ್ದಾರೆ
ಎನ್.ಆರ್.ಮೊಹಲ್ಲಾದಲ್ಲಿರುವ ಕಲ್ಯಾಣ ಮಂಟಪದಲ್ಲಿ ಕೆಲಸ ಮಾಡಲು ಸೂಪರ್‌ವೈಸರ್ ಬೇಕಾಗಿದ್ದಾರೆ. ಮೈಸೂರಿನವರಿಗೆ ಆದ್ಯತೆ ವಯೋಮಿತಿ: 35 ವರ್ಷ ಮೇಲ್ಪಟ್ಟವರು.
7829413803

Muda Approved Sites for sale in Mysore JSS layout 2nd stage Near Police Layout Bannur Main Road Near Bugathagalli T Narasipura Main Road near Chikkalli Bogadi Road Near Maratikyathanahalli Srinagar Layout attached Near JP Nagar More Information Contact (Broker Excuse)
9481867757

ವಿಠಲ್ ರೆಕಾರ್ಡ್ಸ್ ಪ್ರೈವೇಟ್ ಲಿಮಿಟೆಡ್
ಖಾಲಿ ಹುದ್ದೆ: 150+
DATA ENTRY OPERATOR
ಸಂಬಳ 10,000 + 5000 Incentive
ಸಂದರ್ಶನದ ಸಮಯ: 9.30 ರಿಂದ 5.30.
ವಿಳಾಸ: #42, JCK ಇಂಡಸ್ಟ್ರಿಯಲ್ ಪಾರ್ಕ್, ಮೇಟಗಳ್ಳಿ ಪೋಸ್ಟ್, ಪ್ರೀತಿ ಗ್ರಾನೈಟ್ ಹತ್ತಿರ, ಕೆ.ಆರ್.ಎಸ್. ರಸ್ತೆ, ಮೈಸೂರು–570 016. ಕರೆ ಮಾಡಿ:
Mob: 8867064586

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 9591815191

OWN YOUR DREAM MUDA
Approved Plots Near Ring Road
- 30 X 40 - 22 lakhs to 38 lakhs
- Sapthamathruka, Shreesha & KBL Green Woods Layout
- All Dimension Sites Available

NIDHI ESTATES 78923 28320, 88927 48934

ಸಾಲ / LOANS
* Housing Loan
* Construction Loan
* Mortgage Loan

Loans for MUDA, Corporation & Revenue Property.
77605-98705

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್ & ಸರ್ವೀಸ್
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಲಾವಣ್ಯ ಮರಾಠಿ ವಧು–ವರರ ಮಾಹಿತಿ ಕೇಂದ್ರ
PUC, BA, BSc, B.Com, MA, MSc, M.Com, MBA, Doctors, Engineer, ಇತರೆ ಎಲ್ಲಾ ವಧು–ವರರ ವಿವಾಹ ನೋಂದಣಿಗೆ ಕರೆ ಮಾಡಿ
91647-43059

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಮತ್ತು ಮೈಸೂರಿನಾದ್ಯಂತ ಪ್ರಸಿದ್ಧ MNC ಕಂಪನಿ ಕೆಲಸಕ್ಕೆ ಮತ್ತು ಆಫೀಸ್ ಕೆಲಸಕ್ಕೆ ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ. ಯಾವುದೇ ಎಜ್ಯುಕೇಷನ್ ಯಾವುದೇ Age ಲಿಮಿಟ್ ಇಲ್ಲ. Salary (18000 to 38000rs) ಇರುತ್ತದೆ. ಹೆಚ್ಚಿನ ಮಾಹಿತಿಗೆ ಇಂದೆ ಸಂಪರ್ಕಿಸಿ. H.R. Madam
8296278130
8088497952

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಶುಂಠಿ ಕೃಷಿಕರೆ
ಉತ್ತಮ ದರ್ಜೆಯ ಬೇವಿನ ಹಿಂಡಿ ಹಾಗೂ ಬೇವಿನ ಹುಡಿ ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ–ನೀಮ್ #203, ಬನ್ನಿಮಂಟಪ ಬಡಾವಣೆ, ಮೈಸೂರು–570 015
Mob: 80888-87802

Wanted (Manager)
J.P. Nagar Service Apartment ನಲ್ಲಿ ಕೆಲಸ ಮಾಡಲು Manager (Male) ಬೇಕಾಗಿದ್ದಾರೆ.
Education: Degree.
Language: Kananda, English, Hindi fluency.
Computer knowledge.
Mob: 9243536373

SITE FOR SALE
DTCP Approved Layout 30x40 Site @ Rs.16 Lakh, Bank Loan available next Marasettyhalli, behind chamundi hill 15 kms from mysore
9538583377

ಮುಡಾ ಖಾತೆ ಸೈಟ್ ಸೇಲ್
ಈಸ್ಟ್ ಫೇಸಿಂಗ್, ಕಾರ್ನರ್ ಸೈಟ್ 1124 ಚದುರಡಿ, ಜ್ಞಾನಭಾರತಿ ಲೇಔಟ್, ಏರ್‌ಪೋರ್ಟ್ ಹಿಂಭಾಗದ ರಸ್ತೆ
ಡೈರೆಕ್ಟ್ ಓನರ್
9342123373

ತಕ್ಷಣವೇ ಲಾರಿ ಡ್ರೈವರ್ಸ್ ಬೇಕಾಗಿದ್ದಾರೆ
ಶ್ರೀ ಪ್ರೇಮ ಇಂಡಸ್ಟ್ರೀಸ್ ಅಂಡ್ ಎಲೆಕ್ಟ್ರಿಕಲ್ ಪ್ರೈ. ಲಿ. ಮೈಸೂರು. ಕಡ್ಡಾಯವಾಗಿ DL ಹೊಂದಿರಬೇಕು.
9108508534

ಬೇಕಾಗಿದ್ದಾರೆ
ವಿರಾಜಪೇಟೆಯ ಕಾಲೇಜ್ ಹಾಗೂ ಮಡಿಕೇರಿ ರೆಸಾರ್ಟ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ನುರಿತ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಊಟ ಮತ್ತು ವಸತಿ ಸೌಲಭ್ಯವಿರುತ್ತದೆ. ವಿದ್ಯಾರ್ಹತೆ: SSLC. ಸಂಪರ್ಕಿಸಿ:
9980001243, 9035050654

ಸೈಟು ಮಾರಾಟಕ್ಕಿದೆ
30x40 N/F, KBL Silicon City, KRS Road, ಬಸ್ತಿಪುರ, ಮೈಸೂರು.
40x60 S/F, KHB Layout, ಪಂಜನಹಳ್ಳಿ, ಗುಂಡ್ಲುಪೇಟೆ.
Mob: 9243536373

ಬೇಕಾಗಿದ್ದಾರೆ
1) ಸ್ಟೋರ್ ಅಸಿಸ್ಟೆಂಟ್ – 1 ಹುದ್ದೆ. ಸಂಬಳ: 12K to 14K
2) ಸ್ಟೀವರ್ಡ್ಸ್ – 2 ಹುದ್ದೆ. ಸಂಬಳ: 12K to 14K
3) ಹೌಸ್‌ಕೀಪಿಂಗ್ – 4 ಹುದ್ದೆಗಳು. ಸಂಬಳ: 11K to 13K
ದಿ ಕೋರಮ್ ಹೋಟೆಲ್ #2257/1, ವಿನೋಬಾ ರಸ್ತೆ, ಕಲಾಮಂದಿರ ಹತ್ತಿರ, ಮೈಸೂರು.
9620274629, 9886577795

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
9731891409

ನಿವೇಶನ ಮಾರಾಟಕ್ಕಿದೆ
30X40 ಸೈಟು – 30 ಲಕ್ಷ, 80% ಬ್ಯಾಂಕ್ ಲೋನ್ ಲಭ್ಯ, ತಕ್ಷಣ ಮನೆ ಕಟ್ಟಬಹುದು.ಡಿಟಿಸಿಪಿ ಅನುಮೋದಿತ, ಆಫ್ ವರುಣ ಸುತ್ತೂರು ರಸ್ತೆ, 12ಕಿಮೀ ಮೈಸೂರು ಸಿಟಿಯಿಂದ, ಸಂಪರ್ಕಿಸಿ
9343380409

ಸೈಟು ಮಾರಾಟಕ್ಕಿದೆ
30x40
ಪೂರ್ವ ದಿಕ್ಕು ಜ್ಞಾನಭಾರತಿ ಬಡಾವಣೆ ದಡದಹಳ್ಳಿ ಮೈಸೂರು ಮುಡಾಖಾತೆ ನಿ.ಸಂ. 380
ಬೆಲೆ : 25 ಲಕ್ಷ
9164700818

SITE FOR SALE
40x45
East North Corner
Police Layout
Near Ring Road
(Broker Excuse)
9844998724

FOR RENT
ಜಗನ್ ಮೋಹನ್ ಅರಮನೆ ಎದುರುಗಡೆ ಮೈಸೂರು
ಅಳತೆ : 18x82 1/2 ಅಡಿ
Ground, 1st Floor, IInd Floor
7975068479

ಮನೆ ಬಾಡಿಗೆಗೆ ಇದೆ
2 ಬೆಡ್‌ರೂಂ ಸೋಲಾರ್ ಇರುವ 30X40 ಮನೆ ವಿಜಯನಗರ, 2ನೇ ಹಂತದಲ್ಲಿ ಬಾಡಿಗೆಗೆ ಇದೆ.
ಸಂಪರ್ಕಿಸಿ
9206380489
7899790448

ಹೋಂನರ್ಸಿಂಗ್‌ನಲ್ಲಿ ಉದ್ಯೋಗವಕಾಶ
ವಯೋವೃದ್ಧರನ್ನು ಆರೈಕೆ ಮಾಡಲು ಫುಲ್ ಟೈಮ್/ಡೇ / ನೈಟ್ ಶಿಫ್ಟ್ ಕೆಲಸಕ್ಕೆ ಯುವತಿಯರು ಹಾಗೂ ಮಹಿಳೆಯರು ಬೇಕಾಗಿದ್ದಾರೆ. ವೇತನ 10,000 ರಿಂದ 18,000 ಅನುಭವದ ಅಗತ್ಯವಿಲ್ಲ, ಉಚಿತ ತರಬೇತಿ ವಸತಿಯೊಂದಿಗೆ ಕೆಲಸ ನೀಡಲಾಗುವುದು. ಸಂಪರ್ಕಿಸಿ
960671441
7349278501 | 0821-4242351

MUDA SITE FOR SALE
40x60 South facing site for sale at JP nagar, 30x40 West facing site for sale at Nithyanandasagara
Call ; Vishwanath Gowda
9590911111

ಬೇಕಾಗಿದ್ದಾರೆ
ಹೋಂ ನರ್ಸಿಂಗ್ ಕೆಲಸ ಸರ್ಕಾರಿ ಹೆಲ್ತ್ ಕೇರ್ ನೋಂದಾಯಿತಾ ಸಂಸ್ಥೆಗೆ ಮಹಿಳೆಯರು, ಪುರುಷರು, ವಿಧವೆಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ ಊಟ ವಸತಿ ಉಚಿತದೊಂದಿಗೆ ಆಕರ್ಷಕ ಸಂಬಳ ಇರುತ್ತದೆ ಮೊದಲು ಬಂದವರಿಗೆ ಆದ್ಯತೆ
9035113222 | 9739292222

ಅನುಬಂಧ ಮ್ಯಾರೇಜಸ್
ವಧುವರರನ್ನು ಹುಡುಕಲು ಸಹಾಯ ಬೇಕೆ? ನಮಗೆ ಕರೆ ಮಾಡಿ
6361740552

WANTED
ಮೈಸೂರಿನ ಹೆಸರಾಂತ ಕಂಪನಿಗಳಿಗೆ Cashier, Billing Accountant Receptionist, Data Entry, Telecalling, Team Leader, Q/C Packing, Helper, Drivers, ಬೇಕಾಗಿದ್ದಾರೆ. 7th, 10th, ITI, Diploma, Any Degree BA, BCom, MA, M.Com, MSc, Pass - Fail ಯುವಕ ಯುವತಿಯರು ಬೇಕಾಗಿದ್ದಾರೆ. (ESI+PF+OT) ನೊಂದಿಗೆ ಸಂಬಳ: 16000/- ರಿಂದ 30000 /-
9035143190, 9916641959

KHB SITE FOR SALE
60 x 40, SOUTH FACE, 2600/Sq Ft. KENCHALAGUDU, MYSURU, CONTACT
9632102676

ಬೇಕಾಗಿದ್ದಾರೆ
ಹಗಲು ಮತ್ತು ರಾತ್ರಿ ಶಿಫ್ಟ್‌ಗಾಗಿ ಹೌಸ್ ಕೀಪಿಂಗ್ ಕೆಲಸ ಮಾಡುವ ಹುಡುಗರು, ಹೌಸ್‌ಕೀಪಿಂಗ್ ಹೆಂಗಸರು, ಮೈಸೂರಿನಲ್ಲಿರುವ ಸೇಂಟ್ ಫಿಲೋಮಿನಾ ಚರ್ಚ್ ಹತ್ತಿರ 30 ಕೊಠಡಿಗಳುಳ್ಳ ಪ್ರತಿಷ್ಠಿತ ಹೋಟೆಲ್ (ಲಾಡ್ಜ್)ಗಾಗಿ ಹೋಟೆಲ್ ಉದ್ಯಮದಲ್ಲ ಅನುಭವದೊಂದಿಗೆ ಸಂಪರ್ಕಿಸಿ
6363477213 | 9538651845

HOUSE FOR SALE
30×40 Newly built 3 floor house for sale in bogadi. brokers excuse
9008766233

WANTED
Accounts Executive - 1 Nos, Qualification : B.Com/ B.B.M, Exp: 0-3 years whatsapp your resume, contact
7204959799

ಅಪಾರ್ಟ್‌ಮೆಂಟ್ ಹಾಗೂ ಮನೆ ಕೆಲಸಕ್ಕೆ ಜನ ಸಿಗುತ್ತಾರೆ
ನಮ್ಮಲ್ಲಿ ದಿನನಿತ್ಯದ ಕೆಲಸಗಳಾದ ಪಾತ್ರೆ ತೊಳೆಯೋದು ಬಟ್ಟೆ ಒಗೆಯುವುದು ನೆಲ ಒರೆಸುವುದು ಹಾಗೂ ಇನ್ನೂ ಹಲವು ಕೆಲಸಗಳಿಗೆ ನಮ್ಮಲ್ಲಿ ಜನಸಿಗುತ್ತಾರೆ, ಸಂಪರ್ಕಿಸಿ
9741515772

ಬೇಕಾಗಿದ್ದಾರೆ
ಮೈಸೂರು ಹೆಬ್ಬಾಳಿನ ಕಂಪನಿಯಲ್ಲಿ ಕೆಲಸ ಮಾಡಲು, ಹುಡುಗರು, ಹುಡುಗಿಯರು, ಗಂಡಸರು, ಹೆಂಗಸರು, ಟೈಲರುಗಳು ಮತ್ತು ಹೆಲ್ಪರ್‌ಗಳು, ಸೆಕ್ಯೂರಿಟಿ ಗಾರ್ಡುಗಳು ಐಟಿಐ (ITI) ಆದವರು ಬೇಕಾಗಿದ್ದಾರೆ. ESI & PF ವಾರದ ರಜೆ ಇರುತ್ತದೆ.
7795285485
8105249880

ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸ್‌ನಲ್ಲಿ, ಫ್ರಂಟ್ ಆಫೀಸ್ ಮತ್ತು ಅಕೌಂಟ್ಸ್ ನಿರ್ವಹಣೆಗಾಗಿ, ಡಿಪ್ಲೊಮೋ (ಸಿ.ಪಿ.)/ಬಿ.ಕಾಂ ಮಾಡಿರುವ 25 ವರ್ಷದೊಳಗಿನ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಕಂಪ್ಯೂಟರ್ ಮತ್ತು ಅಕೌಂಟ್ಸ್‌ನಲ್ಲಿ ಅನುಭವವುಳ್ಳವರಿಗೆ ಹೆಚ್ಚಿನ ಆದ್ಯತೆ.
8073393505

LAND FOR SALE
21000 Sq.Ft Alienated land for Sale/Lease. K.R.Pete Main Road, Arathi ukkada, Rs 1500/ Sqft, suitable for Bar, Petrol bunk and all commercial purpose
7892407735

ಮನೆ ಮಾರಾಟಕ್ಕಿದೆ
20X30 ಅಳತೆಯುಳ್ಳ ಎರಡು ಅಂತಸ್ತಿನ, ಎರಡು ಮಳಿಗೆಯುಳ್ಳ ಕಾರ್ನರ್ ಮನೆ ಶಾರದದೇವಿನಗರದಲ್ಲಿ ಮಾರಾಟಕ್ಕಿದೆ.
ಸಂಪರ್ಕಿಸಿ
9845608581 | 9845395000

SITES FOR SALE
900+600 = 1500 Sqft.
SRIRANGAPATNA TOWN
8951295928

WANTED
ಫರ್ನಿಷಿಂಗ್ ಅಂಗಡಿಯಲ್ಲಿ ಅಕೌಂಟೆಂಟ್ With Telecaller ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
Salary : 12 K to 15 K
Address: Akbar Road, Near Ashoka road
9916514950

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಯುವಕ ಹಾಗೂ ಆಫೀಸ್ ಕೆಲಸಕ್ಕೆ ಯುವತಿಯರು ತಕ್ಷಣ ಬೇಕಾಗಿದ್ದಾರೆ.
Salary: 13,000- 21,000+ ESI, PF
ವಿದ್ಯಾರ್ಹತೆ: 10th, PUC, ITI, Diploma & Any Degree
ಇಂದೇ ಸಂಪರ್ಕಿಸಿ:
9035734821

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ (ಕನ್ನಡ ಮಾತನಾಡಬಲ್ಲವರು) ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ ಸಂಬಳ: 10,000/–
Team Leaders ಬೇಕಾಗಿದ್ದಾರೆ. ಸಂಬಳ: 12,000/–
8150005111

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್ ನಲ್ಲಿ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ESI, PF ನೊಂದಿಗೆ ಊಟ ಮತ್ತು ಉಚಿತ ವಸತಿ ಸೌಲಭ್ಯವಿರುತ್ತದೆ.
ಸ್ಥಳ: ಬಂಡಿಪಾಳ್ಯ, ಮೈಸೂರು
9739294107
8951715624

ನಿವೇಶನ ಮಾರಾಟಕ್ಕಿದೆ
ಸಿದ್ಧಾರ್ಥ ನಗರದ ಗುರುರಾಜ ಬಡಾವಣೆಯ ಕಾವೇರಿ ಜೋಡಿ ರಸ್ತೆಯ ಪೂರ್ವ ದಿಕ್ಕಿನ ಬಸ್ ರೂಟ್‌ನ ನಿವೇಶನ
ಪೂರ್ವ ಪಶ್ಚಿಮ 50 ಅಡಿ
ಉತ್ತರ ದಕ್ಷಿಣ 40 ಅಡಿ
9900655615
9880479678

WANTED
Diploma, Civil Engineering for Site and Field Works 0-2 Years Experience
Email: nishadilip35@gmail.com
9008366792

ನಿವೇಶನ ಮಾರಾಟಕ್ಕಿದೆ
ಬನ್ನೂರು ರಸ್ತೆಯಲ್ಲಿ ಭುಗತ್‌ಗಳ್ಳಿ ಚೆಕ್‌ಪೋಸ್ಟ್ ಹತ್ತಿರ ರಿಂಗ್ ರಸ್ತೆಯಿಂದ 2 ಕಿ.ಮೀ. ತಕ್ಷಣ ಮನೆ ನಿರ್ಮಿಸಲು ಸೂಕ್ತವಾದ 30x40, 30x50 ಅಳತೆಯ ಮುಡಾ ಅನುಮೋದಿತ ನಿವೇಶನಗಳು ಮಾರಾಟಕ್ಕಿವೆ. ಬ್ಯಾಂಕ್‌ಗಳಿಂದ ಸಾಲ ಸೌಲಭ್ಯ ದೊರೆಯುತ್ತದೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಮೈಸೂರು ಈಸ್ಟ್ ಪ್ರಾಪರ್ಟೀಸ್
9916766389, 6363400519

ಬೇಕಾಗಿದ್ದಾರೆ
ಸ್ವಚ್ಛತಾ ಕೆಲಸಗಾರರು (ಪುರುಷರು) Housekeeper ವೇತನ 12500/- + ವಾರದ ರಜೆ, ಇಎಸ್‌ಐ, ಪಿ.ಎಫ್ ಸೌಲಭ್ಯವಿರುತ್ತದೆ. ಸ್ಥಳ: ಸಿದ್ಧಾರ್ಥನಗರ ಸಂಪರ್ಕಿಸಿ: ಕರ್ನಾಟಕ ಸೆಕ್ಯೂರಿಟಿ ಏಜೆನ್ಸಿ ನಂ.513, ಬುಲೆಟ್ ಷೋರೂಂ ಹತ್ತಿರ, ಕೆ.ಎನ್.ಅಗ್ರಹಾರ, ಮೈಸೂರು
0821-4247385

ನೀರಾವರಿ ಜಮೀನು ಮಾರಾಟಕ್ಕಿದೆ
130 ತೆಂಗಿನ ಮರ, 40 ತೇಗದ ಮರ, 1 ಬೋರ್‌ವೆಲ್ ಸಹಿತಿ 2 ಎಕರೆ 10 ಗುಂಟೆ, ಫಲವತ್ತಾದ ಕೃಷಿ ಜಮೀನು ಮಾರಾಟಕ್ಕಿದೆ.
ಕೆ.ಎಂ.ದೊಡ್ಡಿಯಿಂದ 2 ಕಿ.ಮೀ ಮದ್ದೂರು ಟಿ.ಬಿ. ವೃತ್ತದಿಂದ 10 ಕಿ.ಮೀ. 1 ಗುಂಟೆಗೆ 1.50 ಲಕ್ಷಗಳು
9880112059

ಸ್ಟಾರ್ ಮ್ಯಾರೇಜಸ್
ಎಲ್ಲಾ ಜನಾಂಗದ ವಧು–ವರರು ವಿಚ್ಛೇದಿತರು ಹಾಗೂ ವಿಧವಾ–ವಿಧವೆಯರು
ಸಂಪರ್ಕಿಸಿ:
8197607559
8105747339

FOR SALE
1) 30x40 30x50 near defence apartment Bank loan 80% Ready to Registration
2) 20x30 30x40 Bogadi Road
3) 2, 3BHK flats in Ramakrishna Nagar
4) 100/100 Farm House KRS Back Water attch 19 lakhs starts
5) 20x30 ,30x40 House Srirampura
6) 18x40 40ft Road Kuvempu Nagar.

Prakruthi Properties
9538690359, 9035990359

ತಕ್ಷಣ ಬೇಕಾಗಿದ್ದಾರೆ
TVS ಫ್ಯಾಕ್ಟರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC,
ಸಂಬಳ: 16000
ವಯೋಮಿತಿ: 45 ವರ್ಷದ ಒಳಗೆ
ESI & PF ಊಟ ತಿಂಡಿ ವಸತಿ ಸೌಲಭ್ಯವಿರುತ್ತದೆ.
9620777819
9620667819

100% ಕೆಲಸ
ಮೈಸೂರು ಕೈಗಾರಿಕಾ ಪ್ರದೇಶಗಳಾದ ಹೂಟಗಳ್ಳಿ, ಮೇಟಗಳ್ಳಿ, ನಂಜನಗೂಡು, ಹೆಬ್ಬಾಳ ಮುಂತಾದ ಏರಿಯಾಗಳಲ್ಲಿರುವ ಕಂಪನಿಗಳಿಗೆ Production, Line Incharge, Store Dept., Helper, Packers ಮುಂತಾದ ಹುದ್ದೆಗಳಿಗೆ 7th, 10th, PUC, ITI, Diploma, Pass / Fail ಆದವರು ಬೇಕಾಗಿದ್ದಾರೆ ಸಂಬಳ: 14000 ರಿಂದ 45000ವರೆಗೆ (ESI+PF+OT) ಯೊಂದಿಗೆ
9513829246, 6364103418

ನಿವೇಶನ ಮಾರಾಟಕ್ಕಿದೆ
T ನರಸೀಪುರ ಪುರಸಭೆಯಲ್ಲಿ 'E' ಖಾತೆ ಹೊಂದಿರುವ, 30x40 ಅಳತೆಯ DC ಕನ್ವರ್ಷನ್ ನಿವೇಶನ Sq.ft. 1675/– ರೂ.ಗಳಿಗೆ ಪಶ್ಚಿಮ ದಿಕ್ಕು, (ದಯವಿಟ್ಟು, ಬ್ರೋಕರ್ ಕ್ಷಮಿಸಿರಿ) ಹೌಸಿಂಗ್ ಬೋರ್ಡ್ ಹಿಂಭಾಗದಲ್ಲಿ
9902077167

SITE FOR SALE
Site at K.N. Agrahara Near Banumaiah Circle, Mysore
18x42, 15x66 > 1761 Sqft
9448150597

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಅನುದಾನ ಬಿಡುಗಡೆಯೂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸಾರಿಗೆ ನೌಕರರ ಪ್ರತಿಭಟನೆ

ಮೈಸೂರು, ಫೆ.21(ಎಸ್‌ಪಿಎನ್)– ರಾಜ್ಯ ಸರ್ಕಾರ, ಬಾಕಿ ಉಳಿಸಿಕೊಂಡಿರುವ 'ಶಕ್ತಿ ಯೋಜನೆ'ಯ ಸಂಪೂರ್ಣ ಅನುದಾನವನ್ನು ರಾಜ್ಯದ ನಾಲ್ಕು ಸಾರಿಗೆ ನಿಗಮಗಳಿಗೆ ಪಾವತಿಸಬೇಕು ಹಾಗೂ ನೌಕರರ ಇತರೆ 4 ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ರಾಜ್ಯಾದ್ಯಂತ ಕೆಎಸ್‌ಆರ್‌ಟಿಸಿ ಸಾರಿಗೆ ನೌಕರರ ಜಂಟಿ ಕ್ರಿಯಾ ಸಮಿತಿ ಫೆ.22 ರಂದು ಬೆಳಗ್ಗೆ 10ರಿಂದ ಸಂಜೆಯವರಿಗೆ ಉಪವಾಸ ಸತ್ಯಾಗ್ರಹ ಹಮ್ಮಿಕೊಂಡಿದೆ.

ಇದಕ್ಕೆ ಬೆಂಬಲವಾಗಿ ಮೈಸೂರು ಬನ್ನಿಮಂಟಪದ ಕೆಎಸ್‌ಆರ್‌ಟಿಸಿ ವಿಭಾಗೀಯ ಕಚೇರಿ ಮುಂಭಾಗ ಜಂಟಿ ಕ್ರಿಯಾ ಸಮಿತಿ ಮೈಸೂರು ಘಟಕದ ಪದಾಧಿಕಾರಿಗಳು ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಎಂದು ಜಂಟಿ ಕ್ರಿಯಾ ಸಮಿತಿ ಸದಸ್ಯ ಮಧುಸೂದನ್ ತಿಳಿಸಿದ್ದಾರೆ.

2024ರ ಜ.1ರಿಂದ ಕೆಎಸ್‌ಆರ್‌ಟಿಸಿ ನೌಕರರ ವೇತನ ಪರಿಷ್ಕರಣೆ ಮತ್ತಿತರ ಬೇಡಿಕೆಗಳನ್ನು ಜಂಟಿ ಕ್ರಿಯಾ ಸಮಿತಿ ಸದಸ್ಯರೊಂದಿಗೆ ರಾಜ್ಯ ಸರ್ಕಾರದ ಪ್ರತಿನಿಧಿಗಳು ಚರ್ಚಿಸಿ ನೌಕರರ ಬೇಡಿಕೆ ಈಡೇರಿಸಬೇಕು.

2020ರ ಜ.1ರಿಂದ 2023ರ ಫೆ.28ರ ಅವಧಿಯಲ್ಲಿ ನಿವೃತ್ತರಾದ ಕೆಎಸ್‌ಆರ್‌ಟಿಸಿ ನೌಕರರಿಗೆ ಹಿಂದಿನ ವೇತನ ಪರಿಷ್ಕರಣೆ ಅಳವಡಿಸಿ ಕೂಡಲೇ ನಿವೃತ್ತಿ ಸೌಲಭ್ಯದ ಬಾಕಿ ಹಣ ಬಿಡುಗಡೆಗೊಳಿಸಬೇಕು. 2020ರ ಜ.1ರಿಂದ 38 ತಿಂಗಳ ಬಾಕಿ ಪರಿಷ್ಕರಣೆ ವೇತನ ಕೂಡಲೇ ಸಾರಿಗೆ ನಿಗಮಗಳಿಗೆ ಪಾವತಿಸುವಂತೆ ಒತ್ತಾಯಿಸಿ, ರಾಜ್ಯಾದ್ಯಂತ ಎಲ್ಲಾ ವಿಭಾಗೀಯ ಕಚೇರಿ, ಹುಬ್ಬಳ್ಳಿ ಹಾಗೂ ಕಲಬುರಗಿ ಕೇಂದ್ರ ಕಚೇರಿ, ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಉಪವಾಸ ಸತ್ಯಾಗ್ರಹ ನಡೆಸಲು ಜಂಟಿ ಕ್ರಿಯಾ ಸಮಿತಿ ತೀರ್ಮಾನಿಸಿದೆ ಎಂದು ಜಂಟಿ ಕ್ರಿಯಾ ಸಮಿತಿ ಸದಸ್ಯ ಮಧುಸೂದನ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.



ಸುಪ್ರೀಂಕೋರ್ಟ್‌ನ ಹಿರಿಯ ನ್ಯಾಯವಾದಿ ಬ್ರಿಜೇಶ್ ಕಾಳಪ್ಪ ಅವರು ತಮ್ಮ ಪುತ್ರ ಧನುಷ್ ತಿಮ್ಮಯ್ಯ ಅವರೊಡಗೂಡಿ ಫೆಬ್ರವರಿ 17ರಂದು ನ್ಯಾಯಶಾಸ್ತ್ರಜ್ಞ ಮತ್ತು ಸುಪ್ರೀಂಕೋರ್ಟ್‌ನ ಹಿರಿಯ ವಕೀಲ ಫಾಲಿ ಸ್ಯಾಮ್ ನಾರಿಮನ್ ಅವರನ್ನು ಭೇಟಿಯಾಗಿದ್ದ ಬಗ್ಗೆ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡುವ ಮೂಲಕ ಸ್ಮರಿಸಿದ್ದಾರೆ.

ಕೇವಲ ಪುಸ್ತಕದಲ್ಲೇ ಉಳಿದ ಕಳೆದ ವರ್ಷದ ಮುಡಾ ಬಜೆಟ್ ಯೋಜನೆಗಳು

• ಬೊಮ್ಮೇನಹಳ್ಳಿ ವಸತಿ ಬಡಾವಣೆ, ವಿಜಯನಗರ 4ನೇ ಹಂತಕ್ಕೆ ರಿಂಗ್ ರೋಡ್‌ನಲ್ಲಿ ಕೆಳ ಸೇತುವೆ, ವಾಣಿಜ್ಯ ಸಂಕೀರ್ಣ, ತ್ಯಾಜ್ಯ ನೀರು ಸಂಸ್ಕರಣ ಘಟಕ, ಉದ್ಯಾನವನಗಳ ಅಭಿವೃದ್ಧಿ ಯೋಜನೆಗಳು ಅನುಷ್ಠಾನವಾಗಲಿಲ್ಲ. • 2023–24ನೇ ಸಾಲಿನಲ್ಲಿ 50,226.88 ಲಕ್ಷ ರೂ. ಸಂಪನ್ಮೂಲ ಕ್ರೋಢೀಕರಿಸಿ ಪ್ರಾಧಿಕಾರವು ಮೈಸೂರಿನ ಅಭಿವೃದ್ಧಿಗೆ 49,768.37 ಲಕ್ಷ ರೂ. ಖರ್ಚು ಮಾಡಲುದ್ದೇಶಿಸಿ 458.51 ಲಕ್ಷ ರೂ.ಗಳ ಉಳಿತಾಯ ಬಜೆಟ್ ಮಂಡಿಸಿತ್ತಾದರೂ, ಹೊಸ ಯೋಜನೆಗಳು ಪುಸ್ತಕದ ಆಯ–ವ್ಯಯಕ್ಕೆ ಸೀಮಿತವಾಯಿತು.

ಎಸ್.ಟಿ.ರವಿಕುಮಾರ್

ಮೈಸೂರು, ಫೆ.21– ಸಾಂಸ್ಕೃತಿಕ ನಗರಿ ಮೈಸೂರು ಯೋಜನಾಬದ್ಧವಾಗಿ ಅಭಿವೃದ್ಧಿಗೊಂಡು, ಬೆಳೆಯುತ್ತಿರುವ ಜನಸಂಖ್ಯೆಗನುಗುಣವಾಗಿ ವಸತಿ ಬಡಾವಣೆ ನಿರ್ಮಿಸಿ, ಅರ್ಹ ಫಲಾನುಭವಿಗಳಿಗೆ ನಿಯಮಾನುಸಾರ ನಿವೇಶನ ಅಥವಾ ಮನೆ ಮಂಜೂರು ಮಾಡಿಕೊಡುವ ಮೂಲ ಉದ್ದೇಶ ಹೊಂದಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ತನ್ನ ಧ್ಯೇಯೋದ್ದೇಶಗಳನ್ನು ಪರಿಣಾಮಕಾರಿಯಾಗಿ ಸಾಕಾರಗೊಳಿಸುತ್ತಿಲ್ಲ ಎಂಬ ಆಕ್ರೋಶ ಜನತೆಯಲ್ಲಿದೆ.

1904ರಲ್ಲಿ ಸ್ಥಾಪನೆಯಾದ ಮೈಸೂರು ನಗರ ಅಭಿವೃದ್ಧಿ ವಿಶ್ವಸ್ಥ ಮಂಡಳಿ (CITB)ಯು, 1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆಯನ್ವಯ ಅಂದಿನ 'ಮೈಸೂರು ನಗರ ಯೋಜನೆ ಪ್ರಾಧಿಕಾರ'ದೊಂದಿಗೆ ವಿಲೀನಗೊಂಡು 1988ರ ಮೇ 16ರಂದು 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ' (Mysore Urban Development Authority)ವಾಗಿ ರೂಪುಗೊಂಡಿತು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಲ್ಪನೆಯಂತೆ ಸಮರ್ಪಕ ಒಳಚರಂಡಿ, ರಸ್ತೆ, ಮೂಲ ಸೌಕರ್ಯ ಒದಗಿಸಿ ನಗರದ ಸಮಗ್ರ ಅಭಿವೃದ್ಧಿ ಜೊತೆಗೆ ವಸತಿರಹಿತರಿಗೆ ಸೂರು ಕಲ್ಪಿಸುವ ಹೊಣೆ ಹೊತ್ತಿರುವ ಪ್ರಾಧಿಕಾರವು ರಾಜ್ಯದ ಎರಡನೇ ಅತೀ ದೊಡ್ಡ ನಗರಾಭಿವೃದ್ಧಿ ಪ್ರಾಧಿಕಾರವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಪ್ರತೀ ವರ್ಷ ಆಯ–ವ್ಯಯ ಮಂಡಿಸಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಾ ಬಂದಿದೆ.



2023ರ ಮಾರ್ಚ್ 13ರಂದು ಮುಡಾ ಅಧ್ಯಕ್ಷರಾಗಿದ್ದ ಯಶಸ್ವಿನಿ ಎಸ್.ಸೋಮಶೇಖರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಆಯುಕ್ತ ಜಿ.ಟಿ.ದಿನೇಶ್ ಕುಮಾರ ಅವರು 2023–24ನೇ ಸಾಲಿನ 458.51 ಲಕ್ಷ ರೂ. ಉಳಿತಾಯ ಬಜೆಟ್ ಮಂಡಿಸಿದ್ದರು.

ವಿವಿಧ ಮೂಲಗಳಿಂದ 50,226.88 ಲಕ್ಷ ರೂ. ಆದಾಯ ನಿರೀಕ್ಷಿಸಿ, ಹೊಸ ಯೋಜನೆ ಸೇರಿ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ 49,768.37 ಲಕ್ಷ ರೂ. ಅನುದಾನ ಖರ್ಚು ಮಾಡುವುದಾಗಿ ಆಯ–ವ್ಯಯದಲ್ಲಿ ಪ್ರಸ್ತಾಪಿಸಿ ಸಭೆಯ ಅನುಮೋದನೆ ಪಡೆದು ನಡಾವಳಿಯೂ ಸಿದ್ಧವಾಗಿತ್ತು.

ವಸತಿ ಬಡಾವಣೆ: ರೈತರ ಸಹಭಾಗಿತ್ವದೊಂದಿಗೆ ಬೊಮ್ಮೇನಹಳ್ಳಿ ವಿವಿಧ ಸರ್ವೆ ನಂಬರ್‌ಗಳಲ್ಲಿ 50:50ರ ಅನುಪಾತದಡಿ ವಿಸ್ತಾರ ಪ್ರದೇಶದ ವಸತಿ ಬಡಾವಣೆ ರಚಿಸಲು ಉದ್ದೇಶಿಸಲಾಗಿತ್ತಾದರೂ, ಈವರೆಗೆ ಒಂದಿಂಚು ಜಾಗವನ್ನೂ ಪಡೆಯಲು ಸಾಧ್ಯವಾಗಲಿಲ್ಲ. ಸುಮಾರು 80 ಸಾವಿರಕ್ಕೂ ಹೆಚ್ಚು ಮಂದಿ ವಸತಿ ರಹಿತ ನಾಗರಿಕರು ನಿವೇಶನಕ್ಕೆ ಅರ್ಜಿ ಸಲ್ಲಿಸಿ ಕಳೆದ 30 ವರ್ಷಗಳಿಂದ ಕಾಯುತ್ತಿದ್ದರೂ, ಆರ್.ಟಿ.ನಗರದ ನಂತರ ಈವರೆಗೆ ಮುಡಾದಿಂದ ಒಂದೇ ಒಂದು ನಿವೇಶನ ಹಂಚಲು ಸಾಧ್ಯವಾಗಿಲ್ಲ.

> “ ಮುಡಾದಲ್ಲಿ ಎಲ್ಲಾ ಹಂತದ ಅಧಿಕಾರಿಗಳು ಒಂದಲ್ಲಾ ಒಂದು ಅಕ್ರಮದಲ್ಲಿ ಭಾಗಿಯಾಗಿದ್ದಾರೆ ಎಂಬ ದೂರುಗಳು ಕೇಳಿಬರುತ್ತಲೇ ಇವೆ. ಆದರೆ ಬೆಕ್ಕಿಗೆ ಗಂಟೆ ಕಟ್ಟುವವರ್ಯಾರು? ಎಂಬಂತಹ ಪರಿಸ್ಥಿತಿ ಇದೆ. ಜನಪ್ರತಿನಿಧಿಗಳು ಸಹ ಮುಡಾ ಅಕ್ರಮಗಳ ಬಗ್ಗೆ ಬಲವಾಗಿ ಸೊಲ್ಲೆತ್ತದೇ ಇರುವುದು ಜನರಲ್ಲಿ ನಾನಾ ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ಕೆಳ ಸೇತುವೆ ನಿರ್ಮಾಣ: ವಿಜಯನಗರ 4ನೇ ಹಂತಕ್ಕೆ ವಿಜಯನಗರ 3ನೇ ಹಂತದಿಂದ ಸಂಪರ್ಕ ಕಲ್ಪಿಸಲು ರಿಂಗ್ ರಸ್ತೆಯಲ್ಲಿ ಕೆಳ ಸೇತುವೆ ನಿರ್ಮಿಸಲು 2 ಕೋಟಿ ರೂ. ಹಾಗೂ ಜೆ.ಪಿ.ನಗರ 3ನೇ ಹಂತದಿಂದ ಅಕ್ಕಮಹಾದೇವಿ ರಸ್ತೆ ಮೂಲಕ ಬಿ.ವಲಯ ಮತ್ತು ಇತರ ಬಡಾವಣೆಗಳಿಗೆ ಸಂಪರ್ಕ ಕಲ್ಪಿಸಲು ರಿಂಗ್ ರೋಡ್‌ನಲ್ಲಿ ಕೆಳ ರಸ್ತೆ ನಿರ್ಮಾಣಕ್ಕೆ ಡಿಪಿಆರ್ ತಯಾರಿಸಲು ಹಣ ಮೀಸಲಿರಿಸಲಾಗಿತ್ತು.

ವಾಣಿಜ್ಯ ಸಂಕೀರ್ಣ: ಮುಡಾ ಬಡಾವಣೆಗಳು ಹಾಗೂ ವ್ಯಾಪ್ತಿಯ ವಸತಿ ಪ್ರದೇಶಗಳಲ್ಲಿ ಬಹುಪಯೋಗಿ ವಾಣಿಜ್ಯ ಸಂಕೀರ್ಣ ಕಟ್ಟಡ ನಿರ್ಮಿಸಿ ಪ್ರಾಧಿಕಾರಕ್ಕೆ ಆದಾಯ ಬರುವಂತೆ ಮಾಡಲು 100 ಕೋಟಿ ರೂ. ಹಣ ಕಾಯ್ದಿರಿಸಲಾಗಿತ್ತಾದರೂ, ಒಂದು ವರ್ಷದ ಅವಧಿಯಲ್ಲಿ ಯಾವುದೇ ಪ್ರಕ್ರಿಯೆ ನಡೆಸಲಿಲ್ಲ.

ತ್ಯಾಜ್ಯ ನೀರು ಸಂಸ್ಕರಣ ಘಟಕ: ಮೈಸೂರು ನಗರದ ವಿವಿಧೆಡೆ ಮಲಿನ ನೀರನ್ನು ಸಂಸ್ಕರಿಸಿ ಬೇರೆ ಬೇರೆ ಉದ್ದೇಶಗಳಿಗೆ ಬಳಸಲು 100 ಕೋಟಿ ರೂ. ವೆಚ್ಚದಲ್ಲಿ ಘಟಕ ಸ್ಥಾಪಿಸುವ ಬಗ್ಗೆಯೂ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿತ್ತು. ಅದೇ ರೀತಿ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು 5 ಕೋಟಿ ರೂ. ಅನುದಾನ ಮೀಸಲಿರಿಸಲಾಗಿತ್ತು.

ಕಳೆದ ಬಾರಿಯ ಆಯ–ವ್ಯಯದಲ್ಲಿ ಮಂಡಿಸಿದ್ದ ಯೋಜನೆಗಳ ಪೈಕಿ ಕೆಲ ರಸ್ತೆ, ಒಳ ಚರಂಡಿಗಳ ಕಾಮಗಾರಿಗಳನ್ನಷ್ಟೇ ಮಾಡಲಾಯಿತೇ ಹೊರತು, ವಿಶೇಷವಾದ ಹೊಸ ಯೋಜನೆಗಳು ಕೇವಲ ಆಯ–ವ್ಯಯ ಪುಸ್ತಕದಲ್ಲಿ ಮುದ್ರಣಕ್ಕಷ್ಟೇ ಸೀಮಿತವಾಯಿತೇ ಹೊರತು, ಪ್ರಾಯೋಗಿಕವಾಗಿ ಅನುಷ್ಠಾನವಾಗಲಿಲ್ಲ. ಕಡೆಗೆ ಆ ನಿಟ್ಟಿನಲ್ಲಿ ಒಂದು ಹಂತದ ಪ್ರಯತ್ನವೂ ನಡೆಯಲಿಲ್ಲ ಎಂಬುದು ನೋವಿನ ಸಂಗತಿಯಾಗಿದೆ.

ಇದೀಗ ಫೆಬ್ರವರಿ 28ಕ್ಕೆ 2024–25ನೇ ಸಾಲಿನ ಬಜೆಟ್ ಸಭೆ ನಿಗದಿಯಾಗಿದೆ. ಕಳೆದ ಬಾರಿ ಪ್ರಸ್ತಾಪಿಸಿದ್ದ ಯೋಜನೆಗಳನ್ನೇ ಪ್ರಸಕ್ತ ಸಾಲಿನಲ್ಲೂ ನಮೂದಿಸಿ ಮುಂದುವರಿಸಬಹುದು. ಅದೂ ಸಹ ಬಜೆಟ್ ಪುಸ್ತಕದಲ್ಲಿ ಪ್ರಕಟಿಸಲು ಸೀಮಿತವಾಗದೇ ಅನುಷ್ಠಾನವಾಗಲಿ ಎಂಬುದು ನಾಗರಿಕರ ಆಶಯವಾಗಿದೆ.

ಕೃಷಿಕ್ ಸರ್ವೋದಯ ಫೌಂಡೇಶನ್‌ನಿಂದ ನೂತನ ಶೈಕ್ಷಣಿಕ ಕಟ್ಟಡದ ಶಂಕುಸ್ಥಾಪನೆ

ಮೈಸೂರು, ಫೆ. 21– ಕೃಷಿಕ್ ಸರ್ವೋದಯ ಫೌಂಡೇಶನ್ (ಕೆಎಸ್‌ಎಫ್), ಮೈಸೂರು ವತಿಯಿಂದ ನೂತನ ಶೈಕ್ಷಣಿಕ ಕಟ್ಟಡದ ಶಂಕುಸ್ಥಾಪನೆ ಇತ್ತೀಚೆಗೆ ನೆರವೇರಿತು.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಕೃಷಿಕ್ ಸರ್ವೋದಯ ಫೌಂಡೇಶನ್, ಮೈಸೂರು ಶಾಖೆ ಅಧ್ಯಕ್ಷ ನಿವೃತ್ತ ಐಎಎಸ್ ಅಧಿಕಾರಿ ಎಂ.ಕೆ.ಶಂಕರಲಿಂಗೇಗೌಡ ಆಗಮಿಸಿದ್ದರು. ಈ ವೇಳೆ ಅವರು ಮಾತನಾಡಿ, 1992ರಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಡಾ.ವೈ.ಕೆ.ಪುಟ್ಟಸೋಮೇಗೌಡರ ದೂರದೃಷ್ಟಿ ಫಲವಾಗಿ ಬೆಂಗಳೂರಿನಲ್ಲಿ ಶುರುವಾದ ಸಂಸ್ಥೆ ಇಂದು ಮೈಸೂರು, ಹಾಸನ, ತುಮಕೂರು ಜಿಲ್ಲೆಗಳಲ್ಲಿ ಶಾಖೆಗಳನ್ನು ಹೊಂದಿದೆ. ಗ್ರಾಮೀಣ ಪ್ರದೇಶದ ವಿದ್ಯಾವಂತ ಯುವಕ–ಯುವತಿಯರಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಯಶಸ್ವಿಯಾಗಿ ಎದುರಿಸುವ ಸಾಮರ್ಥ್ಯವನ್ನು ಬೆಳೆಸಲು ವೃತ್ತಿ ಮಾರ್ಗದರ್ಶನ ಮತ್ತು ತರಬೇತಿಯನ್ನು ನೀಡಲಾಗುತ್ತಿದೆ. ಕೇಂದ್ರ ಮತ್ತು ರಾಜ್ಯ ಲೋಕಸೇವಾ ಆಯೋಗಗಳು ನಡೆಸುತ್ತಿರುವ ನಾಗರಿಕ ಸೇವಾ ಪರೀಕ್ಷೆಯ



ಕೃಷಿಕ್ ಸರ್ವೋದಯ ಫೌಂಡೇಶನ್ (ಕೆಎಸ್‌ಎಫ್), ಮೈಸೂರು ವತಿಯಿಂದ ನೂತನ ಶೈಕ್ಷಣಿಕ ಕಟ್ಟಡದ ಶಂಕುಸ್ಥಾಪನೆ ನಡೆಸಲಾಯಿತು.

ಪಠ್ಯ ವಿಷಯ ಮತ್ತು ಪರೀಕ್ಷಾ ವಿಧಾನಗಳಲ್ಲಿ ಆಗಿರುವ ಬದಲಾವಣೆಯನ್ನು ನಮ್ಮ ಸಂಸ್ಥೆಯು ಗಮನಿಸಿ ತಜ್ಞರ ಜೊತೆ ಸಮಾಲೋಚನೆ ಮಾಡಿ, ಗುಣಾತ್ಮಕ ಬದಲಾವಣೆಗಳನ್ನು ಕಾಲಕಾಲಕ್ಕೆ ನಮ್ಮ ತರಬೇತಿ ಕಾರ್ಯಕ್ರಮಗಳಲ್ಲಿ ಅಳವಡಿಸಿಕೊಂಡು ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ನಿರಂತರವಾಗಿ ತರಬೇತಿಗಳನ್ನು ನೀಡುತ್ತಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಕೆಎಸ್‌ಎಫ್ ಮೈಸೂರು ಶಾಖೆಯ ಮಾಸಿಕ ವಾರ್ತಾ ಪತ್ರ, ವಿದ್ಯಾರ್ಥಿಗಳಿಗೆ ಸ್ಟಡಿ ಕ್ಯೂಬಿಕಲ್ಸ್ ಹಾಗೂ ನೂತನ ವೆಬ್‌ಸೈಟ್ ಅನಾವರಣ ಮಾಡಲಾಯಿತು.

ಕೆಎಸ್‌ಎಫ್ ಮೈಸೂರು ಕಾರ್ಯದರ್ಶಿ ಹೆಚ್. ಕಿಶೋರ್ ಚಂದ್ರ ಮಾತನಾಡಿ, 1998 ರಲ್ಲಿ ಮೈಸೂರು ಶಾಖೆ ಪ್ರಾರಂಭವಾಗಿ ಇಲ್ಲಿಯವರೆಗೆ ನೂರಕ್ಕೂ ಹೆಚ್ಚು ತರಬೇತಿ ಕಾರ್ಯಕ್ರಮಗಳು ನಡೆದು, ಸಾವಿರಾರು ವಿದ್ಯಾರ್ಥಿಗಳಿಗೆ ನೆರವಾಗಿದೆ ಎಂದು ತಿಳಿಸಿದರು. ಮುಖ್ಯ ಶೈಕ್ಷಣಿಕ ಸಂಯೋಜಕ ಡಾ.ಜಿ. ಗೋವಿಂದರಾಜು ಮಾತನಾಡಿ, ಕೃಷಿಕ್ ಸಂಸ್ಥೆಯಲ್ಲಿ ತರಬೇತಿಗಾಗಿ ಬರುವ ಗ್ರಾಮೀಣ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ವಿದ್ಯಾರ್ಥಿನಿಲಯ ಹಾಗೂ ವಿದ್ಯಾರ್ಥಿ ವೇತನದ ಸೌಲಭ್ಯವಿದ್ದು, ಯುಪಿಎಸ್ಸಿ, ಕೆಪಿಎಸ್ಸಿ ಹಾಗೂ ಬ್ಯಾಂಕಿಂಗ್ ಪರೀಕ್ಷೆಗಳಲ್ಲಿ ನೂರಾರು ಯುವಕ–ಯುವತಿಯರು ಇಲ್ಲಿ ತರಬೇತಿ ಪಡೆದು ಸಫಲತೆ ಕಂಡಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.

ಮೈಸೂರು ನಗರಪಾಲಿಕೆ ಆಯುಕ್ತ ಆಸಾದ್ ಉರ್ ರೆಹಮಾನ್ ಷರೀಫ್, ಕೆಎಸ್‌ಎಫ್, ಮೈಸೂರು ಶಾಖೆಯ ಆಡಳಿತ ವರ್ಗದ ಎನ್.ನಂಜೇಗೌಡ, ಕೆ.ಎಂ.ಚಂದ್ರೇಗೌಡ, ವೈ.ಕೆ.ಕೆಂಚೇಗೌಡ, ಎಸ್.ವಿ.ಗೌಡಪ್ಪ ವೆಬ್‌ಸೈಟ್ ನಿರ್ಮಾಣದ ಹೊಣೆಹೊತ್ತ ಕಾಮೆಂಜರ್ ಸಂಸ್ಥೆಯ ಶಶಿಧರ್‌ಗೌಡ, ಸಂಜಯ್ ಆರೋರ ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ವಿವಿಧ ಸೇವಾ ಕಾರ್ಯದೊಂದಿಗೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹುಟ್ಟುಹಬ್ಬ ಆಚರಣೆ

ಮೈಸೂರು, ಫೆ.21– ಚಿನ್ನಗಿರಿ ಕೊಪ್ಪಲು ಮತ್ತು ಜಯನಗರ ಭಾಗದಲ್ಲಿ ಕಾಂಗ್ರೆಸ್ ಮುಖಂಡರಾದ ಗಿರೀಶ್ ಹಾಗೂ ಮೂರ್ತಿರವರ ನೇತೃತ್ವದಲ್ಲಿ ಕೆ.ಆರ್.ಕ್ಷೇತ್ರದ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಅವರ ಹುಟ್ಟುಹಬ್ಬವನ್ನು ವಿವಿಧ ಸೇವಾ ಕಾರ್ಯಗಳೊಡನೆ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಇದೇ ವೇಳೆ ಬಡಾವಣೆಯ ಹಲವಾರು ಮಹಿಳೆಯರಿಗೆ ಸೀರೆ ವಿತರಣೆ, ವಿದ್ಯಾರ್ಥಿಗಳಿಗೆ ಪುಸ್ತಕ, ಲೇಖನ ಸಾಮಗ್ರಿಗಳ ವಿತರಣೆ, ಅನ್ನದಾನ ಹಾಗೂ ವಿದ್ಯಾರಣ್ಯಪುರಂನ ಅರುಣೋದಯ ವಿಶೇಷ ಮಕ್ಕಳ ಶಾಲೆ ಹಾಗೂ ಶ್ರೀರಾಂಪುರದ ಶ್ರೀ ನವಚೇತನ ಬಸವೇಶ್ವರ ವಿಶೇಷ ಶಾಲೆ ಟ್ರಸ್ಟ್ ಇವರಿಗೆ ಎಂ.ಕೆ ಸೋಮಶೇಖರ್ ಅವರ ನಿಧಿಯಿಂದ ತಲಾ ಹತ್ತು ಸಾವಿರ ಚೆಕ್ ವಿತರಿಸಿದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಗಿರೀಶ್, ಮೂರ್ತಿ, ಅನಿಲ್, ಮಹೇಶ್, ಮಹದೇವ, ಕಾರ್ತಿಕ್, ಸಂತೋಷ್, ದೀಕ್ಷಿತ್, ಚೌಹಾನ್ ಕುಮಾರ್, ಶ್ರೀಧರ್, ಬಾಲಾಜಿ, ಕೆಂಪ, ಗುಣಶೇಖರ್, ಮಧು



ಚಿನ್ನಗಿರಿಕೊಪ್ಪಲು ಮತ್ತು ಜಯನಗರದಲ್ಲಿ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಅವರ ಹುಟ್ಟುಹಬ್ಬವನ್ನು ಆಚರಿಸಲಾಯಿತು.

ರಾಜ್‌ಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಎಂ.ಕೆ. ಸೋಮಶೇಖರ್, ಚಿನ್ನಗಿರಿಕೊಪ್ಪಲು, ಜಯನಗರದ ಜನ ಎಂದೂ ಜಾತಿ, ಧರ್ಮದ ಆಧಾರದಲ್ಲಿ ನನ್ನ ನೋಡಲಿಲ್ಲ. ಬದಲಾಗಿ ನನ್ನನ್ನು ಮನೆ ಮಗನ ರೀತಿ ನೋಡಿದ್ದಾರೆ. ಕಳೆದ ಹಲವಾರು ವರ್ಷಗಳಿಂದಲೂ ಈ ಭಾಗದಲ್ಲಿ ಹೆಚ್ಚಿನ ಮತ ನೀಡಿ ನನ್ನನ್ನು ಬೆಂಬಲಿಸಿಕೊಂಡು ಬಂದಿದ್ದಾರೆ. ನಂತರ ಚಾಮುಂಡಿಪುರಂನ ಅರುಣೋದಯ ವಿಶೇಷ ಮಕ್ಕಳ ಶಾಲೆ ಹಾಗೂ ಶ್ರೀರಾಂಪುರದ ಬಸವೇಶ್ವರ ನವಚೇತನ ವಿಶೇಷ ಮಕ್ಕಳ ಟ್ರಸ್ಟ್‌ನ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಅನುಕೂಲವಾಗಲೆಂದು ಚೆಕ್ ನೀಡುವ ಮೂಲಕ ಆರ್ಥಿಕ ನೆರವು ನೀಡಿದರು.

ಮೈಸೂರು ಗ್ರಾಮೀಣ ಭಾಗದ ಶಾಲಾ ಬಾಲಕಿಯರಿಗೆ ಗರ್ಭಕೋಶದ ಬಾಯಿಯ ಕ್ಯಾನ್ಸರ್ ಲಸಿಕೆ



ಮೈಸೂರು, ಫೆ.21– 2024 ರ ಜನವರಿಯಲ್ಲಿ, ಗರ್ಭಕೋಶದ ಬಾಯಿಯ ಕ್ಯಾನ್ಸರ್ ಜಾಗೃತಿ ತಿಂಗಳಲ್ಲಿ, ಮೈಸೂರು ಜಿಲ್ಲೆಯ ಗ್ರಾಮೀಣ ಭಾಗದ ನಾಲ್ಕು ಪ್ರೌಢಶಾಲೆಗಳಲ್ಲಿ 193 ಹದಿಹರೆಯದ ಬಾಲಕಿಯರಿಗೆ ಗರ್ಭಕೋಶದ ಬಾಯಿಯ ಕ್ಯಾನ್ಸರ್‌ಗೆ ಕಾರಣವಾಗುವ ಹ್ಯೂಮನ್ ಪ್ಯಾಪಿಲೋಮ ವೈರಸ್ (ಹೆಚ್‌ಪಿವಿ) ವಿರುದ್ಧ ಲಸಿಕೆ ಹಾಕಲಾಯಿತು.

ಮೈಸೂರಿನಲ್ಲಿ ಶಾಲಾ ಆಧಾರಿತ ಸಮುದಾಯ ಶಿಕ್ಷಣದೊಂದಿಗೆ ಲಸಿಕಾ ಅಭಿಯಾನವನ್ನು ಸಂಯೋಜಿಸುವ ಮೂಲಕ ಮೊದಲ ಹೆಜ್ಜೆಯನ್ನು ಇಡಲಾಗಿದೆ. ಶಾಲಾ ಬಾಲಕಿಯರು, ಅವರ ಶಿಕ್ಷಕರು ಮತ್ತು ಪೋಷಕರಿಗೆ ಹೆಚ್‌ಪಿವಿ, ಗರ್ಭಕೋಶದ ಬಾಯಿಯ ಕ್ಯಾನ್ಸರ್ ಮತ್ತು ಅದರ ತಡೆಗಟ್ಟುವಿಕೆ ಕುರಿತು ಸಂವಾದಾತ್ಮಕ ಶೈಕ್ಷಣಿಕ ಮಾಹಿತಿಗಳನ್ನು ನೀಡಲಾಯಿತು. ನಂತರ ಬಾಲಕಿಯರಿಗೆ ಗಾರ್ಡಸಿಲ್–9 ಲಸಿಕೆಯನ್ನು ನೀಡಲಾಯಿತು. ಇದು ಒಂಬತ್ತು ಹೆಚ್ಚಿನ ಅಪಾಯ ಅಥವಾ ಕ್ಯಾನ್ಸರ್ ಉಂಟುಮಾಡುವ ಹೆಚ್‌ಪಿವಿ ತಳಿಗಳಿಂದ ರಕ್ಷಿಸುತ್ತದೆ. ಮೈಸೂರಿನಲ್ಲಿ ಮಹಿಳೆಯರ ಆರೋಗ್ಯಕ್ಕಾಗಿ ಕೆಲಸ ಮಾಡುವ ಆರೋಗ್ಯ ಸೇವೆಗಳು ಮತ್ತು ಸಂಶೋಧನೆ ಆಧಾರಿತ ಸಂಸ್ಥೆಯಾದ ಪಬ್ಲಿಕ್ ಹೆಲ್ತ್ ರಿಸರ್ಚ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ (ಪಿಎಚ್‌ಆರ್‌ಐಐ), ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಅಂಡ್ ರಿಸರ್ಚ್ ಸಹಯೋಗದೊಂದಿಗೆ ಈ ಕಾರ್ಯಕ್ರಮವನ್ನು ನಡೆಸಲಾಯಿತು. ಈ ಕಾರ್ಯಕ್ರಮವನ್ನು ಸನ್ ಫಾರ್ಮಾ ತಮ್ಮ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ವಿಭಾಗದ ಮೂಲಕ ಪ್ರಾಯೋಜಿಸಿದೆ.

ಕಾರ್ಯಕ್ರಮವು 90–70–90 ಗುರಿಗಳ ಮೂಲಕ ಗರ್ಭಕೋಶದ ಬಾಯಿಯ ಕ್ಯಾನ್ಸರ್ ನಿರ್ಮೂಲನೆಗಾಗಿ ಡಬ್ಲ್ಯುಹೆಚ್‌ಓನ ಜಾಗತಿಕ ಕಾರ್ಯತಂತ್ರವನ್ನು ಬೆಂಬಲಿಸುತ್ತದೆ. 2030ರ ಹೊತ್ತಿಗೆ, 15 ವರ್ಷ ವಯಸ್ಸಿನ 90%ರಷ್ಟು ಹೆಣ್ಣು ಮಕ್ಕಳು ಸಂಪೂರ್ಣವಾಗಿ ಹೆಚ್‌ಪಿವಿ ಲಸಿಕೆ ಹಾಕಿಸಿರಬೇಕು. 35ನೇ ವಯಸ್ಸಿನ 70%ರಷ್ಟು ಮಹಿಳೆಯರನ್ನು ಉನ್ನತ ಕಾರ್ಯಕ್ಷಮತೆಯ ಪರೀಕ್ಷೆಯನ್ನು ಬಳಸಿಕೊಂಡು ಪರೀಕ್ಷಿಸಬೇಕು. 45ನೇ ವಯಸ್ಸಿನಲ್ಲಿ; ಗರ್ಭಕೋಶದ ಬಾಯಿಯ ಕ್ಯಾನ್ಸರ್ ಕಾಯಿಲೆಯೊಂದಿಗೆ ಗುರುತಿಸಲ್ಪಟ್ಟ 90% ರಷ್ಟು ಜನರು ಸೂಕ್ತ ಚಿಕಿತ್ಸೆಯನ್ನು ಪಡೆದಿರಬೇಕು. ಗರ್ಭಕೋಶದ ಬಾಯಿಯ ಕ್ಯಾನ್ಸರ್ ಭಾರತದ ಮಹಿಳೆಯರಲ್ಲಿ ಕಂಡುಬರುವ ಎರಡನೇ ಅತ್ಯಂತ ಸಾಮಾನ್ಯ ಕ್ಯಾನ್ಸರ್ ಆಗಿದೆ. ಹೆಚ್‌ಪಿವಿ ಲಸಿಕೆಯ ಪ್ರಕಾರದ ಆಧಾರದ ಮೇಲೆ 70%ರಿಂದ 97% ರಕ್ಷಣೆಯು ಲಭ್ಯವಿದೆ, ಜಗತ್ತಿನಾದ್ಯಂತ ಗರ್ಭಕೋಶದ ಬಾಯಿಯ ಕ್ಯಾನ್ಸರ್‌ನಿಂದಾಗಿ ಮರಣ ಹೊಂದುವ ಮೂವರು ಮಹಿಳೆಯರಲ್ಲಿ ಒಬ್ಬರು ಭಾರತೀಯ ಮಹಿಳೆ ಆಗಿರುತ್ತಾಳೆ. ಭಾರತ ಸರ್ಕಾರವು 2024 ಮಧ್ಯಂತರ ಬಜೆಟ್ ಮಂಡಿಸುವಾಗ ಹೆಚ್‌ಪಿವಿ ಲಸಿಕೆಗೆ ಬೆಂಬಲವನ್ನು ವ್ಯಕ್ತಪಡಿಸಿದೆ, ಗರ್ಭಕೋಶದ ಬಾಯಿಯ ಕ್ಯಾನ್ಸರ್‌ನ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಸಕಾಲಿಕ ಲಸಿಕೆ ಮತ್ತು ತಪಾಸಣೆಯನ್ನು ಉತ್ತೇಜಿಸಲು ಮೈಸೂರಿನ ಹೆಚ್‌ಪಿವಿ ಕಾರ್ಯಕ್ರಮದಂತಹ ಪ್ರಯತ್ನಗಳು ಅತ್ಯಗತ್ಯವಾಗಿವೆ.

ವಿಳಂಬವಿಲ್ಲದೆ ಟ್ರಾನ್ಸ್‌ಫಾರ್ಮರ್‌ಗಳ ಅಳವಡಿಕೆ

ಪರಿಷತ್‌ನಲ್ಲಿ ಸಿ.ಎನ್. ಮಂಜೇಗೌಡರಿಗೆ ಕೆ.ಜೆ. ಜಾರ್ಜ್ ಉತ್ತರ

ಬೆಂಗಳೂರು, ಫೆ. 21– ಖಾಸಗಿ ಬಡಾವಣೆಗಳಿಗೆ ಟ್ರಾನ್ಸ್‌ಫಾರ್ಮರ್‌ಗಳನ್ನು ಯಾವುದೇ ವಿಳಂಬವಿಲ್ಲದೆ ಅಳವಡಿಸಲು ಎಲ್ಲಾ ಕ್ರಮ ಕೈಗೊಳ್ಳಲಾಗುವುದು ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್‌ರವರು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡರ ಪ್ರಶ್ನೆಗೆ ವಿಧಾನಪರಿಷತ್‌ನಲ್ಲಿ ಉತ್ತರಿಸಿದರು.

ವಿಧಾನಪರಿಷತ್‌ನಲ್ಲಿ ಸಿ.ಎನ್.ಮಂಜೇಗೌಡರು ಮಾತನಾಡಿ, ಖಾಸಗಿ ಬಡಾವಣೆಗಳನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ ಚೆಸ್ಕಾಂನವರು ಟ್ರಾನ್ಸ್‌ಫಾರ್ಮರ್ ಅಳವಡಿಕೆಗೆ ಹಣ ಕಟ್ಟಿಸಿಕೊಂಡು 3–4 ವರ್ಷಗಳ ಕಳೆದರೂ ಸಹ ಟಿ.ಸಿ. ನೀಡದೆ ಇರುವುದರಿಂದ ಬಡಾವಣೆಯಲ್ಲಿ ನೆಡಲಾಗಿರುವ ಗಿಡಮರಗಳು ಒಣಗಿ ಹೋಗುತ್ತಿರುವುದಲ್ಲದೆ. ವಿದ್ಯುತ್ ವೈಯರ್, ಹೋಲ್ಡರ್‌ಗಳನ್ನು ಕಳವು ಮಾಡಿಕೊಂಡು ಹೋಗಿರುವ ಪ್ರಸಂಗಗಳು ನಡೆದಿವೆ. ಆದ್ದರಿಂದ ಕೆ.ಪಿ.ಸಿ.ಎಲ್ ವ್ಯಾಪ್ತಿಯಲ್ಲಿ ಬರುವ ಹುಬ್ಬಳ್ಳಿ, ಧಾರವಾಡ, ವಿದ್ಯುತ್ ಪ್ರಸರಣ ನಿಗಮವು ಟಿ.ಸಿ. ನಿರ್ಮಾಣ ಮಾಡಲು ಖಾಸಗಿಯವರಿಗೆ ನೀಡಿರುವಂತೆ, ಇದೇ ಮಾದರಿಯನ್ನು ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಿದರೆ ಅನುಕೂಲವಾಗುತ್ತದೆ ಎಂದರು.



ಕೆ.ಜೆ. ಜಾರ್ಜ್



ಸಿ.ಎನ್. ಮಂಜೇಗೌಡ

ಇಂಧನ ಸಚಿವ ಕೆ.ಜೆ. ಜಾರ್ಜ್ ಉತ್ತರಿಸಿ, ಬಡಾವಣೆಗಳ ವಿದ್ಯುದೀಕರಣವನ್ನು, ಕೆ.ಇ.ಆರ್.ಸಿ. Clause No. 3.2.1ರ ಏಳನೇ ತಿದ್ದುಪಡಿ ಅನ್ವಯ ನಿರ್ವಹಿಸಲಾಗುತ್ತಿದ್ದು, ಆಂತರಿಕ ವಿದ್ಯುತ್ ಜಾಲದ ನಿರ್ಮಾಣವನ್ನು ಬಡಾವಣೆಯ ಅಭಿವೃದ್ಧಿದಾರರು ಸ್ವಯಂ ಕಾರ್ಯನಿರ್ವಹಣೆ ಯೋಜನೆಯಡಿ ಶೇ. 10 ಮೇಲ್ವಿಚಾರಣೆ ಶುಲ್ಕ ಪಾವತಿಸಿ, ಅಳವಡಿಸಿಕೊಳ್ಳಬೇಕಾಗಿರುತ್ತದೆ. ಅಭಿವೃದ್ಧಿದಾರರು ಸ್ವಯಂ ಕಾರ್ಯನಿರ್ವಹಣೆ ಯೋಜನೆಯಡಿ ಬಡಾವಣೆಯ ಆಂತರಿಕ ವಿದ್ಯುತ್ ಜಾಲದ ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ, ಅಂದಾಜು ಪಟ್ಟಿ ಮೊತ್ತದ ಶೇ. 5ರಷ್ಟು ಮೊತ್ತವನ್ನು ಒಂದು ಬಾರಿ ನಿರ್ವಹಣಾ ವೆಚ್ಚವೆಂದು ಪಾವತಿಸಿಕೊಂಡು, ಅಭಿವೃದ್ಧಿದಾರರಿಂದ ಸಂಪೂರ್ಣ ವಿದ್ಯುತ್ ಜಾಲವನ್ನು ನಿಗಮಕ್ಕೆ ಹಸ್ತಾಂತರಿಸಿಕೊಳ್ಳಲಾಗುವುದು. ಇದೇ ವೇಳೆ ಬಡಾವಣೆಯ ಬೀದಿದೀಪ ಹಾಗೂ ಕುಡಿಯುವ ನೀರಿನ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲು ನಿಗಮದ ವತಿಯಿಂದ ಒಂದು ಪರಿವರ್ತಕ ಅಳವಡಿಸಿ ಬಡಾವಣೆಯ ವಿದ್ಯುದೀಕರಣವನ್ನು ಮಾಡಲಾಗುವುದು. ನಂತರ ಕಾಲಕಾಲಕ್ಕೆ ವಿದ್ಯುತ್ ಹೊರೆಯ ಅನುಗುಣವಾಗಿ ಹೆಚ್ಚುವರಿ ಪರಿವರ್ತಕಗಳನ್ನು ಬಡಾವಣೆಯಲ್ಲಿ ಅಳವಡಿಸಲಾಗುವುದು. ಬಡಾವಣೆಯ ವಿದ್ಯುತ್ ಜಾಲದ ಪರಿಕರಗಳ ಸುರಕ್ಷತೆಗಾಗಿ ಹಾಗೂ ಸಂಭವಿಸಬಹುದಾದ ಕಳ್ಳತನವನ್ನು ತಡೆಯಲು ಬಡಾವಣೆಯನ್ನು ನೋಂದಾಯಿಸಿರುವ ಪ್ರಥಮ ದರ್ಜೆ ವಿದ್ಯುತ್ ಗುತ್ತಿಗೆದಾರರಿಂದಲೇ ನಿಯಮಾನುಸಾರ ಒಂದು ಸಂಖ್ಯೆ ಪರಿವರ್ತಕವನ್ನು ಸ್ವಯಂ ಕಾರ್ಯನಿರ್ವಹಣೆ ಯೋಜನೆಯಡಿ ಅಳವಡಿಸಿಕೊಳ್ಳಲು ಸೂಕ್ತ ಸುತ್ತೋಲೆ ಹೊರಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಕಾಮ್ರೇಡ್ ಶಿವದಾಸ್ ಘೋಷ್ ಅವರ ನಾಲ್ಕು ಪುಸ್ತಕ ಬಿಡುಗಡೆ

ಮೈಸೂರು, ಫೆ.21(ಎಂಟಿವೈ)– ವಿಕಸಿತ ಜ್ಞಾನವಾಗಿರುವ ಮಾರ್ಕ್ಸ್‌ವಾದವು ಎರಡು ವರ್ಗಗಳ ನಡುವಿನ ಸಂಘರ್ಷವನ್ನು ಸಮಾಜವಾದಿ ವ್ಯವಸ್ಥೆಗೆ ಕೊಂಡೊಯ್ಯುವ ಶಕ್ತಿ ಹೊಂದಿದೆ ಎಂದು ಎಸ್‌ಯುಸಿಐ(ಸಿ) ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ. ರವಿ ತಿಳಿಸಿದ್ದಾರೆ.

ಮೈಸೂರಿನ ಎಸ್‌ಯುಸಿಐ ಕಚೇರಿಯಲ್ಲಿ ಬುಧವಾರ ನಡೆದ ಕಮ್ಯೂನಿಸ್ಟ್ ಪಕ್ಷದ ಸಂಸ್ಥಾಪಕರಾದ ಕಾಮ್ರೇಡ್ ಶಿವದಾಸ್ ಘೋಷ್ ಅವರು ಬರೆದಿರುವ ನಾಲ್ಕು ಪುಸ್ತಕಗಳನ್ನು ಬಿಡುಗಡೆಗೊಳಿಸುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಾರ್ಕ್ಸ್‌ವಾದ ಸಂಘರ್ಷವನ್ನು ಸಮಾಜವಾದಿಗೆ ಕೊಂಡೊಯ್ಯುವುದನ್ನು ಕಾರ್ಲ್‌ಮಾರ್ಕ್ಸ್ ವೈಜ್ಞಾನಿಕವಾಗಿ ತೋರಿಸಿಕೊಟ್ಟಿದ್ದಾರೆ. ಕಾಮ್ರೇಡ್ ಶಿವದಾಸ್ ಘೋಷ್ ಅವರು ದೇಶದ ಸ್ವಾತಂತ್ರ್ಯ ಸಂಗ್ರಾಮದ ರಾಜಿರಹಿತ ಪಂಥದ ಹೋರಾಟದಲ್ಲಿ ಗುರುತಿಕೊಂಡಿದ್ದರು. ಮಾರ್ಕ್ಸ್‌ವಾದದಿಂದ ಪ್ರಭಾವಿತರಾಗಿ, ದೇಶದ ಜನತೆಯ ವಿಮುಕ್ತಿಗಾಗಿ



ಮೈಸೂರಿನ ಎಸ್‌ಯುಸಿಐ ಕಚೇರಿಯಲ್ಲಿ ಬುಧವಾರ ನಡೆದ ಕಮ್ಯೂನಿಸ್ಟ್ ಪಕ್ಷದ ಸಂಸ್ಥಾಪಕರಾದ ಕಾಮ್ರೇಡ್ ಶಿವದಾಸ್ ಘೋಷ್ ಅವರು ಬರೆದಿರುವ ನಾಲ್ಕು ಪುಸ್ತಕಗಳನ್ನು ಎಸ್‌ಯುಸಿಐ(ಸಿ) ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ. ರವಿ ಬಿಡುಗಡೆ ಮಾಡಿದರು.

ಕಮ್ಯೂನಿಸ್ಟ್ ಪಕ್ಷವನ್ನು ಸ್ಥಾಪಿಸಿದರು. ಮಾರ್ಕ್ಸ್‌ವಾದ, ಲೆನಿನ್‌ವಾದವನ್ನು ತಮ್ಮ ವಿಚಾರಗಳಿಂದ ಮತ್ತಷ್ಟು ಶ್ರೀಮಂತಗೊಳಿಸಿದರು. ಈ ನಿಟ್ಟಿನಲ್ಲಿ, ವಿವಿಧ ವಿಷಯಗಳನ್ನು ವಿಶ್ಲೇಷಿಸುತ್ತಾ ಹಲವು ಪುಸ್ತಕಗಳನ್ನು ಬರೆದಿದ್ದಾರೆ. ಅವರ ವಿಚಾರಗಳನ್ನು ಜನತೆಗೆ ತಲುಪಿಸುವ ನಿಟ್ಟಿನಲ್ಲಿ ಅವರು ಬರೆದಿರುವ ಅನೇಕ ಪುಸ್ತಕಗಳನ್ನು ಕನ್ನಡಕ್ಕೆ ಭಾಷಾಂತರಿಸಲಾಗಿದೆ ಎಂದರು.

ಇಂದು ಬಿಡುಗಡೆಯಾದ ನಾಲ್ಕು ಪುಸ್ತಕಗಳಾದ 'ನವೆಂಬರ್ ಮಹಾಕ್ರಾಂತಿಯ ಪತಾಕೆ ಎತ್ತಿ ಹಿಡಿಯಿರಿ', 'ವೈಜ್ಞಾನಿಕ ದ್ವಂದ್ವಾತ್ಮಕ ವಿಧಾನಕ್ರಮವೇ ಮಾರ್ಕ್ಸ್‌ವಾದಿ ವಿಜ್ಞಾನ', 'ಚೆಕೊಸ್ಲೋವಾಕಿಯಾದಲ್ಲಿ ಸೋವಿಯತ್ ಮಿಲಿಟರಿ ಹಸ್ತಕ್ಷೇಪ ಮತ್ತು ಪರಿಷ್ಕರಣವಾದ' ಹಾಗೂ 'ಭಾರತದಲ್ಲಿ ಜನ ಹೋರಾಟಗಳ ಸಮಸ್ಯೆಗಳು' ಕೃತಿಯಲ್ಲಿ ಆಯಾ ಕಾಲಘಟ್ಟ ವಿಚಾರಗಳನ್ನು ವಿವರವಾಗಿ ತಿಳಿಸಿಕೊಟ್ಟಿದ್ದಾರೆ ಎಂದು ತಿಳಿಸಿದರು.

ಜಿಲ್ಲಾ ಸೆಕ್ರೆಟರಿಯೇಟ್ ಸದಸ್ಯ ಚಂದ್ರಶೇಖರ ಮೇಟಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರಸ್ತುತ ಬಂಡವಾಳಶಾಹಿ ವ್ಯವಸ್ಥೆಯು ತೀವ್ರವಾದ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದೆ. ಇಡೀ ಸಂಪತ್ತು ಇಂದು ಕೆಲವೇ ಕೆಲವು ಶ್ರೀಮಂತ ಬಂಡವಾಳಿಗರ ಕೈವಶವಾಗಿರುವುದೇ ಇಂದಿನ ಸಮಸ್ಯೆಗಳಿಗೆ ಕಾರಣವಾಗಿದೆ. ಈ ಅಸಮಾನತೆ ಹೋಗಲಾಡಿಸಲು ರೈತರು, ಕಾರ್ಮಿಕರು ತಮ್ಮ ಹೋರಾಟಗಳನ್ನು ಕೇವಲ ಆರ್ಥಿಕ ಬೇಡಿಕೆಗಳಿಗೆ ಸೀಮಿತಗೊಳಿಸದೇ ಸಮ ಸಮಾಜವನ್ನು ನಿರ್ಮಿಸುವ ಹೋರಾಟಕ್ಕೆ ಮುಂದಾಗಬೇಕು ಎಂದರು. ಕಾರ್ಯಕ್ರಮದಲ್ಲಿ ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಸಂಧ್ಯಾ ಪಿ.ಎಸ್, ಸೀಮಾ ಜಿ.ಎಸ್, ಹರೀಶ್, ಪಕ್ಷದ ಕಾರ್ಯಕರ್ತರಾದ ಬಸವರಾಜು ಸುಮಾ, ಚಂದ್ರಕಲಾ, ಸುಭಾಷ್, ನೀತು, ಮುದ್ದುಕೃಷ್ಣ, ಚೈತ್ರ, ನಿತಿನ್ ಸೇರಿದಂತೆ ಪಕ್ಷದ ಸದಸ್ಯರು, ಕಾರ್ಯಕರ್ತರು ಉಪಸ್ಥಿತರಿದ್ದರು.

ನಿಯಮ ಉಲ್ಲಂಘನೆ

ವೀರಪ್ಪ ಮೊಯ್ಲಿ, ನಲಪಾಡ್‌ಗೆ ಜಾಮೀನು ರಹಿತ ವಾರೆಂಟ್



ವೀರಪ್ಪ ಮೊಯ್ಲಿ



ನಲಪಾಡ್

ಬೆಂಗಳೂರು, ಫೆ.21– ಜಾರಿ ನಿರ್ದೇಶನಾಲಯದ ವಿರುದ್ಧ 2022 ರಲ್ಲಿ ನಿಯಮ ಉಲ್ಲಂಘಿಸಿ ಪ್ರತಿಭಟನೆ ನಡೆಸಿದ್ದ ಕಾಂಗ್ರೆಸ್ ಹಿರಿಯ ನಾಯಕ ವೀರಪ್ಪ ಮೊಯ್ಲಿ ಹಾಗೂ ಯುವ ಕಾಂಗ್ರೆಸ್ ಅಧ್ಯಕ್ಷ ಮೊಹಮ್ಮದ್ ಹ್ಯಾರಿಸ್ ನಲಪಾಡ್ ವಿರುದ್ಧ 42ನೇ ಎಸಿಎಂಎಂ ಕೋರ್ಟ್ ಜಾಮೀನು ರಹಿತ ವಾರೆಂಟ್ ಜಾರಿ ಮಾಡಿದೆ. ಜಾರಿ ನಿರ್ದೇಶನಾಲಯದ ವಿರುದ್ಧ 2022ರ ಆಗಸ್ಟ್ ತಿಂಗಳಿನಲ್ಲಿ ನಿಯಮ ಉಲ್ಲಂಘಿಸಿ ಪ್ರತಿಭಟನೆ ನಡೆಸಿದ ಹಿನ್ನೆಲೆ ವೀರಪ್ಪ ಮೊಯ್ಲಿ, ಮೊಹಮ್ಮದ್ ಹ್ಯಾರಿಸ್ ನಲಪಾಡ್ ವಿರುದ್ಧ ಶಿವಾಜಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಇಂದಿನಿಂದ ಹೇಮಾದ್ರಂಭ ಜಾತ್ರೆ, ಬಂಡೀ ಉತ್ಸವ ಆಕರ್ಷಣೆ



ಬನ್ನೂರು, ಫೆ.21– ತಲಕಾಡು ಗಂಗರ ಆಳ್ವಿಕೆಯ ಅವಧಿಯಲ್ಲಿ ಎರಡನೇ ರಾಜಧಾನಿ ವಹ್ನಿಪುರ ಎಂದೇ ಕರೆಯಲ್ಪಟ್ಟಿದ್ದ ಬನ್ನೂರಿನಲ್ಲಿ ಆಚರಿಸುವ ಗ್ರಾಮದ ಅಧಿದೇವತೆ ಹೇಮಾದ್ರಂಭ ದೇವಿಯ ಜಾತ್ರಾ ಮಹೋತ್ಸವ ಫೆ.22ರಿಂದ ಫೆ.28ರವರೆಗೆ ನಡೆಯಲಿದ್ದು, ಜಾತ್ರೆಯಲ್ಲಿ ಬಂಡೀ ಉತ್ಸವ ಪ್ರಮುಖ ಆಕರ್ಷಣೆಯನ್ನು ಹೊಂದಿದೆ.

ಹಲವು ವಿಶೇಷತೆಯೊಂದಿಗೆ ಆಚರಿಸುವ ಹೇಮಾದ್ರಂಭ ಜಾತ್ರೆಯಲ್ಲಿ ಬಂಡೀಉತ್ಸವ, ರಥೋತ್ಸವ ಸೇರಿದಂತೆ ತೆಪ್ಪೋತ್ಸವ ಬಹಳಷ್ಟು ಪ್ರಸಿದ್ಧಿಯನ್ನು ಪಡೆದಿದ್ದು, ಎಲ್ಲ ವರ್ಗದವರು ಒಟ್ಟಾಗಿ ಸೇರಿಕೊಂಡು ಆಚರಿಸುವ ಹಬ್ಬ ಸುತ್ತಮುತ್ತಲೆಲ್ಲಾ ಪ್ರಸಿದ್ಧಿಯಾಗಿದೆ. ಗ್ರಾಮದ ಹಬ್ಬಕ್ಕೆಂದೇ ದೂರದೂರದಿಂದ ನೆಂಟರು, ಬಂಧುಬಳಗದವರು ಪಟ್ಟಣಕ್ಕೆ ಆಗಮಿಸುತ್ತಿದ್ದು, ಎಲ್ಲರ ಮನೆಗಳು ಹಬ್ಬಕ್ಕೆಂದೇ ಸುಣ್ಣಬಣ್ಣಗಳಿಂದ ಕಂಗೊಳಿಸುತ್ತಿದ್ದು, ಹಬ್ಬದ ವಾತಾವರಣ ಹರ್ಷವನ್ನುಂಟು ಮಾಡಿದೆ.

ಇತಿಹಾಸ: ವಿಜಯನಗರ ರಾಜರ ಆಳ್ವಿಕೆಯ ಕಾಲದಲ್ಲಿ ಬರಗಾಲ ಎದುರಾದಾಗ ಹೇಮಾದ್ರಂಭ ದೇವಿಯು ಚಿನ್ನದ ಮಳೆಯನ್ನು ಸುರಿಸಿದಳು ಎನ್ನುವುದು ಇತಿಹಾಸ. ಹೇಮಾದ್ರಂಭ ದೇವಿಯ ಮೂರ್ತಿಯು ಚಿನ್ನದ ವಿಗ್ರಹವಾಗಿದ್ದು, ಅದು ಪ್ರಸ್ತುತ ಮುಜರಾಯಿ ಇಲಾಖೆಯಲ್ಲಿದೆ. ಹಬ್ಬದ ಸಂದರ್ಭದಲ್ಲಿ ಮಾತ್ರವೇ ದೇವಿಯ ಮೂರ್ತಿಯನ್ನು ಊರಿಗೆ ತಂದು ವಿಶೇಷ ಪೂಜೆಗಳನ್ನು, ಉತ್ಸವವನ್ನು ಮಾಡಲಾಗುತ್ತದೆ.

ಜಾತ್ರೆಯ ಪ್ರಮುಖ ಕಾರ್ಯಗಳು: 22ರ ಗುರುವಾರ ಮಾಘಶುದ್ಧ ತ್ರಯೋದಶಿಯಂದು ಆದಿ ಜಾಂಬವ ಜನಾಂಗದಿಂದ ಹಸಿರು ಚಪ್ಪರದ ಸೇವಾರ್ಥ ನಡೆಯಲಿದ್ದು, ಅನ್ನಡಿಕೆ ಬಂದಿ ಯಳಂಗಾರ್ ರವರಿಂದ ಮತ್ತು ರಾತ್ರಿ ಅಂಕುರಾರ್ಪಣೆ ಬಿ.ಕೆ. ಕೇಶವಮೂರ್ತಿಯವರಿಂದ ನಡೆಯಲಿದೆ.

23ರ ಶುಕ್ರವಾರ ಮಾಘಶುದ್ಧ ಚತುರ್ದಶಿಯಂದು ಅಭಿಷೇಕ, ಅರ್ಚನೆ ಹರಿಜನ ಬಾಂಧವರಿಂದ ಅನ್ನ ನೈವೇದ್ಯಕ್ಕೆ ಆಹ್ವಾನದ ಕಾರ್ಯ ಜರುಗಲಿದೆ

24ರ ಶನಿವಾರ ಮಾಘಶುದ್ಧ ಪೌರ್ಣಮಿಯಂದು ಅಭಿಷೇಕ, ಮಹಾಮಂಗಳಾರತಿ, ನಾಯಕರ ದೇವಿ ತೋಪಿನ ಮಡುವಿನಲ್ಲಿ ಅವಭೃತ ಸ್ನಾನ ಮತ್ತು ಹರಿಜನ ಬಾಂಧವರಿಂದ ಅನ್ನ ನೈವೇದ್ಯ ನಡೆಯಲಿದ್ದು, ಮಧ್ಯಾಹ್ನ ಪ್ರಸಿದ್ಧ ಬಂಡೀ ಜಾತ್ರೆಯು, ರಾತ್ರಿ ಶಿವಜ್ಯೋತಿ ಪಣ ಜನಾಂಗದವರಿಂದ ಉತ್ಸವ ನಡೆಯಲಿದೆ.

25ರ ಭಾನುವಾರ ಹೇಮಾದ್ರಂಭ ದೇವಿಯ ದಿವ್ಯ ಮಹಾರಥೋತ್ಸವ ಜರುಗಲಿದ್ದು, ಒಕ್ಕಲಿಗ ಜನಾಂಗದವರಿಂದ ಪ್ರಾತಃಕಾಲ ಹೋಮ ಅಭಿಷೇಕ, ಸಂಪ್ರೋಕ್ಷಣೆ, ಕಳಸ ಪ್ರತಿಷ್ಠಾಪನೆ ಮತ್ತು ಸಾಯಂಕಾಲ ತೇರಡಿ ಉತ್ಸವವು ಬ್ರಾಹ್ಮಣರ ಸಂಘದ ವತಿಯಿಂದ ನಡೆಯಲಿದೆ. ಪೌರ ಕಾರ್ಮಿಕರಿಂದ ವಾದ್ಯವು ಮೊಳಗಲಿದೆ.

26ರ ಸೋಮವಾರದಂದು ಅಭಿಷೇಕ, ಮಹಾಮಂಗಳಾರತಿ ಮತ್ತು ಮಧ್ಯಾಹ್ನ ಮಾಕನಹಳ್ಳಿ ಗ್ರಾಮಸ್ಥರಿಂದ ನಾಯಕ ಜನಾಂಗದ ಸಹಕಾರದೊಂದಿಗೆ ತೆಪ್ಪೋತ್ಸವ ಜರುಗಲಿದೆ. ರಾತ್ರಿ ನಯನಕ್ಷತ್ರಿಯ ಜನಾಂಗದವರಿಂದ ಪಲ್ಲಕ್ಕಿ ಉತ್ಸವವು ನಡೆಯಲಿದೆ.

27ರ ಮಂಗಳವಾರ ಬ್ರಾಹ್ಮಣರ ವತಿಯಿಂದ ವೈಮಾಳಿಗೋತ್ಸವ ನಡೆಯಲಿದೆ. 28ರ ಬುಧವಾರ ಅಭಿಷೇಕ, ಅರ್ಚನೆ ಮಹಾ ಮಂಗಳಾರತಿಯ ಕಾರ್ಯಕ್ರಮವು ನಡೆಯಲಿದ್ದು, ದೇವಿಯ ಮೊಹರಿನ ಕಾರ್ಯ ನಡೆಯುವುದರೊಂದಿಗೆ ಜಾತ್ರೆಗೆ ತೆರೆಬೀಳಲಿದೆ.

ಮಾ.17ರಂದು ಮಹಿಳಾ ಪ್ರಮುಖರ ಸಮಾವೇಶ



ಡೀಡ್ ಸಂಸ್ಥೆ ಆವರಣದಲ್ಲಿ ಮಹಿಳಾ ಸಬಲೀಕರಣ ಸಮಿತಿಯ ಸಭೆ ನಡೆಯಿತು.

ಹುಣಸೂರು, ಫೆ21– ನಗರದ ಡೀಡ್ ಸಂಸ್ಥೆ ಆವರಣದಲ್ಲಿ ಮಹಿಳಾ ಸಬಲೀಕರಣ ಸಮಿತಿಯು ಸಭೆ ಸೇರಿ ವಿವಿಧ ಸಮುದಾಯಗಳ ಸಾಮಾಜಿಕ ಪರಿವರ್ತನೆಯಲ್ಲಿ ತೊಡಗಿಸಿಕೊಂಡಿರುವ ಮಹಿಳಾ ಪ್ರಮುಖರ ಸಮಾವೇಶವನ್ನು ಮಾರ್ಚ್ 17 ರಂದು ನಡೆಸಲು ನಿರ್ಧರಿಸಿದೆ ಎಂದು ದಲಿತ ಚಳವಳಿ ನವನಿರ್ಮಾಣ ವೇದಿಕೆಯ ಹರಿಹರ ಆನಂದಸ್ವಾಮಿ ತಿಳಿಸಿದರು.

ನಗರದ ಡೀಡ್ ಸಂಸ್ಥೆ ಆವರಣದಲ್ಲಿ ಮಹಿಳಾ ಸಬಲೀಕರಣ ಸಮಿತಿಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಾಸ್ತಾವಿಕವಾಗಿ ಮಾತನಾಡಿ, ತಾರತಮ್ಯವೆಸಗದೆ ಮಾನವೀಯತೆಯನ್ನು ಬೆಳೆಸುವ ಚಳವಳಿಗೆ ಪೂರಕವಾಗುವಂತೆ ಮಹಿಳಾ ಸಮಾವೇಶ ಮಾಡಬೇಕು ಎಂದರು.

ಅಲ್ಲದೆ ಕರ್ನಾಟಕದ ಸಾಂಸ್ಕೃತಿಕ ನಾಯಕ ವಿಶ್ವ ಗುರು ಬಸವಣ್ಣ ಹಾಗೂ ವಿಶ್ವಮಾನವ ಸಂದೇಶ ಸಾರಿದ ಕುವೆಂಪು ಕುರಿತು ಚರ್ಚಿಸಲು ಚಿಂತಕರು, ವಿವಿಧ ಸಮುದಾಯಗಳ ಮುಖಂಡರುಗಳನ್ನು ಒಳಗೊಂಡಂತೆ ಇನ್ನೊಂದು ಸಮಾವೇಶವನ್ನು ಏರ್ಪಡಿಸಲು ಕೂಡ ಸಭೆ ತೀರ್ಮಾನಿಸಿದೆ ಎಂದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ದಲಿತ ಸಂಘರ್ಷ ಸಮಿತಿಯ ಮಹಿಳಾ ಘಟಕದ ಸಂಘಟನಾ ಸಂಚಾಲಕಿಯಾದ ರತ್ನಮ್ಮ ಮಾತನಾಡಿ, ಮಹಿಳೆಯರಲ್ಲಿ ಮೂಢನಂಬಿಕೆಗಳನ್ನೆ ಬೆಳೆಸಿ ಅವರನ್ನು ಮನೆಗೆ ಸೀಮಿತಗೊಳ್ಳುವಂತೆ ಮಾಡಲಾಗಿದೆ ಎಂದರು.

ಚರ್ಚೆಯಲ್ಲಿ ಗ್ರಾಮ ಪಂಚಾಯಿತಿ ಸದಸ್ಯೆ ಬಲ್ಲೇನಹಳ್ಳಿ ನಿಂಗಮ್ಮ, ದಲಿತ ಸಮಿತಿಯ ಹಾಗೂ ಆಮ್ ಆದ್ಮಿ ಪಕ್ಷದ ತಾಲೂಕು ಸಂಚಾಲಕಿ ರುಕ್ಮಿಣಿ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯೆ ಹೆಮ್ಮಿಗೆ ಶಿವಮ್ಮ, ಸಂಗೀತ ಶಿಕ್ಷಕಿ ಹಾಗೂ ಗಾಯಕಿ ಅರ್ಚನ, ಗೃಹ ಉದ್ಯಮಿ ಜೀನತ್ ಉನ್ನೀಸ, ಆದಿವಾಸಿ ಮಹಿಳಾ ಮುಖಂಡರಾದ ಬೊಮ್ಮಿ ಮತ್ತು ಲಕ್ಷ್ಮಿ, ರಕ್ಷಿತಾ, ಗಾಯಕರಾದ ಸಿಂಗೇಶ್, ಶಿವಶೇಖರ್, ಶೆಟ್ಟಳ್ಳಿ ಹಾಡಿ ಪಾಪಣ್ಣ, ಪಿ.ಕೆ.ರಾಮು, ವಿಠಲ್, ಡೀಡ್ ಸಂಸ್ಥೆಯ ಪ್ರಕಾಶ್, ಡಾ.ಎಸ್.ಶ್ರೀಕಾಂತ್ ಪಾಲ್ಗೊಂಡಿದ್ದರು.

ಅಕ್ರಮ ಬಿತ್ತನೆ ಬೀಜ ದಾಸ್ತಾನು ಕೇಂದ್ರದ ಮೇಲೆ ದಾಳಿ

459 ಚೀಲ ಭತ್ತದ ಬಿತ್ತನೆ ಬೀಜ ವಶ, ಕೇರಳಕ್ಕೆ ಸಾಗಿಸಲು ಸಿದ್ಧತೆ



ಗೋದಾಮು ಕೇಂದ್ರದ ಮೇಲೆ ದಾಳಿ ನಡೆಸಿದ ಕೃಷಿ ಅಧಿಕಾರಿಗಳು ಕೇರಳ ರಾಜ್ಯಕ್ಕೆ ಸಾಗಾಟ ಮಾಡಲು ಅಕ್ರಮವಾಗಿ ಸಂಗ್ರಹಿಸಿಡಲಾಗಿದ್ದ 459 ಚೀಲ ಬಿತ್ತನೆ ಬೀಜಗಳನ್ನು ವಶಪಡಿಸಿಕೊಂಡರು.

ನಂಜನಗೂಡು, ಫೆ.21– ಕೇರಳಕ್ಕೆ ಸಾಗಿಸಲು ಸಂಗ್ರಹಿಸಿಡಲಾಗಿದ್ದ ಅಕ್ರಮ ಬಿತ್ತನೆ ಬೀಜದ ದಾಸ್ತಾನು ಕೇಂದ್ರಗಳ ಮೇಲೆ ಕೃಷಿ ಅಧಿಕಾರಿಗಳು ದಾಳಿ ನಡೆಸಿ ಸುಮಾರು 459 ಚೀಲ ಬಿತ್ತನೆ ಬೀಜಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಕೃಷಿ ಜಾಗೃತ ಕೋಶದ ಅಧಿಕಾರಿಗಳು ಮತ್ತು ಸಹಾಯಕ ಕೃಷಿ ನಿರ್ದೇಶಕ ಎಸ್.ಕೆ. ರವಿ ನೇತೃತ್ವದಲ್ಲಿ ಕೃಷಿ ಅಧಿಕಾರಿಗಳು ತಾಲೂಕಿನ ಸಿಂಧುವಳ್ಳಿ ಗ್ರಾಮದಲ್ಲಿರುವ ಕೆ.ಎ.ಆಗ್ರೋ ಸೀಡ್ಸ್ ಬಿತ್ತನೆ ಬೀಜ ಮಾರಾಟ ಕೇಂದ್ರದಲ್ಲಿ ಹಾಗೂ ನಗರದ ಎಪಿಎಂಸಿ ಆವರಣದಲ್ಲಿರುವ ಗೋದಾಮು ಕೇಂದ್ರದ ಮೇಲೆ ಏಕಕಾಲದಲ್ಲಿ ದಾಳಿ ನಡೆಸಿ ಪರವಾನಗಿಯಲ್ಲಿ ನಮೂದಿಸದೆ ಇರುವ 30 ಕೆಜಿ ತೂಕದ 230 ಚೀಲ ಜ್ಯೋತಿ ತಳಿಯ ಭತ್ತದ ಬಿತ್ತನೆ ಬೀಜ ಮತ್ತು ಯಾವುದೇ ಅಧಿಕೃತ ಲೇಬಲ್ ಇಲ್ಲದ 30 ಕೆಜಿ ತೂಕದ 110 ಜ್ಯೋತಿ ಭತ್ತದ ಬಿತ್ತನೆ ಬೀಜ ಸೇರಿದಂತೆ 340 ಚೀಲ ಬಿತ್ತನೆ ಬೀಜಗಳನ್ನು, ಮತ್ತು ಸುಮಂಜಲಿ ಸೀಡ್ಸ್, ಹಾಗೂ ಫಾರ್ಮ್ ವಾರಂಗಲ್ ಸಂಸ್ಥೆಯ 83 ಚೀಲ, ಶ್ರೀ ವೆಂಕಟೇಶ್ವರ ಸೀಡ್ಸ್ ದಾಸಪುರಂ ಸಂಸ್ಥೆಯ 36 ಚೀಲ ಸೇರಿದಂತೆ 119 ಚೀಲ ಜ್ಯೋತಿ ತಳಿಯ ಬಿತ್ತನೆ ಬೀಜಗಳು ಸೇರಿದಂತೆ ಒಟ್ಟು 459 ಚೀಲ ಅಕ್ರಮ ದಾಸ್ತಾನನ್ನು ಜಪ್ತಿ ಮಾಡಿ ವಶಕ್ಕೆ ಪಡೆದಿದ್ದಾರೆ.

ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಎಸ್.ಕೆ.ರವಿ ಮಾತನಾಡಿ, ನಿಖರ ಮಾಹಿತಿ ಮೇರೆಗೆ ನಗರದ ಎಪಿಎಂಸಿ ಆವರಣದಲ್ಲಿರುವ ಗೋದಾಮು ಮತ್ತು ಸಿಂದುವಳ್ಳಿ ಗ್ರಾಮದ ಕೆ.ಎ.ಆಗ್ರೋ ಬಿತ್ತನೆ ಬೀಜ ಮಾರಾಟ ಕೇಂದ್ರದ ಮೇಲೆ ದಾಳಿ ನಡೆಸಲಾಗಿದ್ದು ಅಲ್ಲಿ ಪರವಾನಗಿಯಲ್ಲಿ ನಮೂದಿಸದೆ ಅಕ್ರಮವಾಗಿ ದಾಸ್ತಾನು ಮಾಡಲಾಗಿದ್ದ 230 ಚೀಲ ಮತ್ತು ಯಾವುದೇ ಸಂಸ್ಥೆಯ ಲೇಬಲ್ ಇಲ್ಲದ 110 ಚೀಲ ಬಿತ್ತನೆ ಬೀಜ ಹಾಗೂ ವಾರಂಗಲ್ ಸಂಸ್ಥೆಯ ಸುಮಂಜಲಿ ಸೀಡ್ಸ್ ಹಾಗೂ ಫಾರ್ಮ್ ಕಂಪನಿಗೆ ಸೇರಿದ 83 ಚೀಲ, ವೆಂಕಟೇಶ್ವರ ಸೀಡ್ಸ್ ದಾಸಪುರಂಗೆ ಸೇರಿದ 36 ಚೀಲ ಸೇರಿದಂತೆ ಒಟ್ಟು 459 ಚೀಲ ಬಿತ್ತನೆ ಬೀಜಗಳನ್ನು ವಶಕ್ಕೆ ಪಡೆಯಲಾಗಿದೆ ಎಂದರು.

ಇವುಗಳನ್ನು ಮೇಲ್ನೋಟಕ್ಕೆ ಕೇರಳ ರಾಜ್ಯಕ್ಕೆ ಅಕ್ರಮವಾಗಿ ಸಾಗಾಟ ನಡೆಸಲು ಈ ಕೇಂದ್ರದಲ್ಲಿ ಜ್ಯೋತಿ ತಳಿಯ ಬಿತ್ತನೆ ಬೀಜಗಳನ್ನು ಸಂಗ್ರಹಿಸಿಡಲಾಗಿತ್ತು ಎಂಬುದು ಕಂಡುಬಂದಿದ್ದು ಇವುಗಳನ್ನು ವಶಕ್ಕೆ ಪಡೆಯಲಾಗಿದ್ದು ಹಿರಿಯ ಕೃಷಿ ಅಧಿಕಾರಿಗಳ ಗಮನಕ್ಕೆ ತಂದು ಅಕ್ರಮ ದಾಸ್ತಾನುದಾರರ ಮೇಲೆ ಕಾನೂನು ರೀತಿಯಲ್ಲಿ ಕ್ರಮಕೈಗೊಳ್ಳಲಾಗುವುದು ಎಂದರು.

ದಾಳಿಯಲ್ಲಿ ಮೈಸೂರು ಕೃಷಿ ಜಾಗೃತ ದಳದ ಉಪ ನಿರ್ದೇಶಕರಾದ ಭಾನು ಪ್ರಕಾಶ್, ವೆಂಕಟೇಶ್, ಹೆಚ್.ಬಿ.ದಿವಾಕರ, ಸಹಾಯಕ ಕೃಷಿ ನಿರ್ದೇಶಕ ಎಸ್.ಕೆ.ರವಿ, ಕೃಷಿ ಅಧಿಕಾರಿಗಳಾದ ಮಧುರಾ ಮತ್ತು ತಂಡದವರು ಭಾಗಿಯಾಗಿದ್ದರು.

ಫೆ.24ರಿಂದ ಆದಿಶಕ್ತಿ ಮಲೆಯಾಳದಮ್ಮನವರ ಜಾತ್ರೆ



ಕಂಚಮ್ಮಳ್ಳಿ ಗ್ರಾಮದ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆ ನಡೆಯಿತು.

ಹೆಚ್.ಡಿ.ಕೋಟೆ, ಫೆ.21– ತಾಲೂಕಿನ ಕಂಚಮ್ಮಳ್ಳಿ ಗ್ರಾಮದ ಆದಿಶಕ್ತಿ ಮಲೆಯಾಳದಮ್ಮನವರ ದೇವಸ್ಥಾನದಲ್ಲಿ ಫೆ.24, 25ರಂದು ಮಲೆಯಾಳದಮ್ಮ, ಜಗನ್ಮಾತೆ ಭದ್ರಮಹಾಕಾಳಿ ಅಮ್ಮನವರ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ಆಯೋಜಿಸಲಾಗಿದೆ.

ದೇವಸ್ಥಾನದ ಆವರಣದಲ್ಲಿ ನಡೆದ ಜಾತ್ರಾ ಮಹೋತ್ಸವ ಪೂರ್ವಭಾವಿ ಸಭೆಯಲ್ಲಿ ಶನಿದೇವರ ಗುಡ್ಡಪ್ಪ ಕುಮಾರಸ್ವಾಮಿ ಅವರು ಮಾತನಾಡಿ, ಫೆ.24 ರಂದು ರಾತ್ರಿ 10ಕ್ಕೆ ಅಮ್ಮನವರಿಗೆ ಹೋಮ, ಅಭಿಷೇಕ, ಬಿಲ್ವಾರ್ಚನೆ, ವಸ್ತ್ರಾಲಂಕಾರ, ಹೂವಿನ ಅಲಂಕಾರ, ಮಹಾಮಂಗಳಾರತಿ ನಡೆಯಲಿದೆ. 25ರಂದು ಬೆಳಗ್ಗೆ 4ಕ್ಕೆ ಅಮ್ಮನವರಿಗೆ ರುದ್ರಾಭಿಷೇಕ, ಹೂವಿನ ಅಲಂಕಾರ ಮಹಾಮಂಗಳಾರತಿ, ವೀರಗಾಸೆ ಕುಣಿತ, ವೀರಮಕ್ಕಳ ಕುಣಿತ, ಸತ್ತಿಗೆ ಮೆರವಣಿಗೆ, ಕುದುರೆ ವಾಹನ, ವಾದ್ಯಗೋಷ್ಠಿ, ಕಪಿಲ ನದಿಯಿಂದ ಪಂಚಕಳಶ, ಬಾಯಿ ಬೀಗದೊಂದಿಗೆ ಅಮ್ಮನವರ ಗಡಿಗೆಯನ್ನು ಮೆರವಣಿಗೆಯ ಮೂಲಕ ಅಮ್ಮನವರ ದೇವಸ್ಥಾನಕ್ಕೆ ತರಲಾಗುವುದು. ನಂತರ ವಿಶೇಷ ಪೂಜೆ ಇರಲಿದ್ದು, ಅನ್ನ ಸಂತರ್ಪಣೆ ನಡೆಯಲಿದೆ ಎಂದು ತಿಳಿಸಿದರು.

ನಂತರ ಮಧ್ಯಾಹ್ನ 2ಕ್ಕೆ ನಡೆಯುವ ವೇದಿಕೆ ಕಾರ್ಯಕ್ರಮದಲ್ಲಿ ದೇವರ ಗುಡ್ಡಪ್ಪ ಕುಮಾರಸ್ವಾಮಿ ಸಾನ್ನಿಧ್ಯ ವಹಿಸಲಿದ್ದು, ಶಾಸಕ ಅನಿಲ್ ಚಿಕ್ಕಮಾದು ಉದ್ಘಾಟಿಸುವರು. ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ಗ್ರಾಮ ಪಂಚಾಯಿತಿ ಅಧ್ಯಕ್ಷಕುಮಾರ್, ಕಾಂಗ್ರೆಸ್ ಮುಖಂಡರಾದ ಸುನೀಲ್ ಬೋಸ್, ನಾಗವಾಲ ನರೇಂದ್ರ ರಾಜೀವ್ ಗಾಂಧಿ ಪಂಚಾಯತ್ ರಾಜ್‌ನ ಜಿಲ್ಲಾ ಅಧ್ಯಕ್ಷ ಮಲ್ಲೇಶ್‌ಕೋಟೆ ಸೇರಿದಂತೆ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ಅವರು ಹೇಳಿದರು.

ಸಭೆಯಲ್ಲಿ ರಾಜೀವ್ ಗಾಂಧಿ ಪಂಚಾಯತ್ ರಾಜ್‌ನ ಜಿಲ್ಲಾ ಅಧ್ಯಕ್ಷ ಮಲ್ಲೇಶ್ ಕೋಟೆ, ಸವ್ವೆ ಬೆಟ್ಟನಾಯಕ, ಕಾಂಗ್ರೆಸ್ ಮುಖಂಡರಾದ ಚಾಮಲಾಪುರ ಶಿವಯ್ಯ, ಜಯಪ್ರಕಾಶ್, ಮಹೇಂದ್ರ, ಸ್ವಾಮಿ, ನಂಜನಗೂಡು ರವಿ, ಕಂಚಮ್ಮಳ್ಳಿ ಮಹದೇವಣ್ಣ, ನರಸಿಂಹ, ಉಮೇಶ್, ಯೋಗೀಶ್, ನಾರಾಯಣ್, ರಘು, ರುತ್ವಿಕ್, ರವಿ, ಪ್ರವೀಣ್, ಹರೀಶ್, ಸ್ವಾಮಿ, ಜಗದೀಶ್, ಶಿವು ಸೇರಿದಂತೆ ಕಂಚಮ್ಮಳ್ಳಿ ಗ್ರಾಮಸ್ಥರು ಹಾಜರಿದ್ದರು.

ದೇಶದ ಅಭಿವೃದ್ಧಿಗೆ ಮತ್ತೊಮ್ಮೆ ಮೋದಿ

ಮತ್ತೊಮ್ಮೆ ಮೋದಿ 2024 ಗೋಡೆ ಬರಹಕ್ಕೆ ಚಾಲನೆ



ಮಲ್ಕುಂಡಿ, ಫೆ.21– ದೇಶದ ಅಭಿವೃದ್ಧಿಗೆ ನರೇಂದ್ರ ಮೋದಿಯವರು ಮತ್ತೊಮ್ಮೆ ಪ್ರಧಾನಿಯಾಗಬೇಕಿದೆ ಎಂದು ಮಾಜಿ ಶಾಸಕ ಬಿ. ಹರ್ಷವರ್ಧನ್ ತಿಳಿಸಿದ್ದಾರೆ.

ನಂಜನಗೂಡು ವಿಧಾನಸಭಾ ಕ್ಷೇತ್ರದ ಹುಸ್ಕೂರು ಗ್ರಾಮದಲ್ಲಿ ಮತ್ತೊಮ್ಮೆ ಮೋದಿ 2024 ಗೋಡೆ ಬರಹಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನರೇಂದ್ರ ಮೋದಿಯವರು ಮತ್ತೊಮ್ಮೆ ಪ್ರಧಾನಿಯಾಗಬೇಕೆಂದು ಜನರು ಬಯಸಿದ್ದಾರೆ. ಹೀಗಾಗಿ ನಾವೆಲ್ಲರೂ ಒಗ್ಗಟ್ಟಿನಿಂದ ಮೋದಿ ಅವರ 10 ವರ್ಷಗಳ ಸಾಧನೆಯನ್ನು ಪ್ರತಿಯೊಬ್ಬರ ಮನೆಗೆ ತಲುಪಿಸುವ ಕೆಲಸವನ್ನು ಮಾಡಬೇಕಾಗಿದೆ ಎಂದರು.

ದೇಶದಲ್ಲಿ ನರೇಂದ್ರ ಮೋದಿ ಸಾಧನೆ, ವರ್ಚಸ್ಸು ಹಾಗೂ ರಾಜ್ಯದಲ್ಲಿ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರ ಮಾರ್ಗದರ್ಶನ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ನೇತೃತ್ವದಲ್ಲಿ ಲೋಕಸಭಾ ಚುನಾವಣೆ ನಡೆಯಲಿದೆ. ಈ ನಿಟ್ಟಿನಲ್ಲಿ 3ನೇ ಬಾರಿ ನರೇಂದ್ರ ಮೋದಿ ಅವರು ಪ್ರಧಾನಿಯಾಗಬೇಕೆಂದು ವಿಶ್ವವೇ ನೋಡುತ್ತಿದೆ. ಈ ದೊಡ್ಡ ಸಮರದ ರಾಜ್ಯದಲ್ಲಿ 28 ಕ್ಷೇತ್ರದಲ್ಲಿ ಬಿಜೆಪಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿ ಕಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ತಿಳಿಸಿದರು. ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ, ತಾಲೂಕು ಪ್ರಧಾನ ಕಾರ್ಯದರ್ಶಿ ವಳಗರೆ ಪುಟ್ಟಸ್ವಾಮಿ ಸೇರಿದಂತೆ ಪ್ರಮುಖರು ಹಾಜರಿದ್ದರು.

ರಥಸಪ್ತಮಿ: ಕಳಲೆಯಲ್ಲಿ ಸೂರ್ಯ ಮಂಡಲೋತ್ಸವ

ನಂಜನಗೂಡು, ಫೆ.21– ರಥಸಪ್ತಮಿ ಅಂಗವಾಗಿ ತಾಲೂಕಿನ ಕಳಲೆ ಗ್ರಾಮದಲ್ಲಿ ಶ್ರೀಲಕ್ಷ್ಮಿಕಾಂತ ದೇವಾಲಯದಲ್ಲಿ ಸೂರ್ಯ ಮಂಡಲೋತ್ಸವ ನಡೆಯಿತು.

ರಥಸಪ್ತಮಿ ಅಂಗವಾಗಿ ದೇವಾಲಯದಲ್ಲಿ ವಿಶೇಷ ಪೂಜೆ ಸೇರಿದಂತೆ ಧಾರ್ಮಿಕ ಕೈಂಕರ್ಯ ನೆರವೇರಿಸಿದ ಬಳಿಕ ಸೂರ್ಯ ದೇವರ ಉತ್ಸವ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಈ ವೇಳೆ ದೇವಾಲಯದ ಪಾರುಪತ್ತೇದಾರ ಜಯರಾಂ, ಲಕ್ಷ್ಮಿಕಾಂತಚಾರ್, ನರಸಿಂಹನ್ ಹಾಗೂ ಗ್ರಾಮದ ಯಜಮಾನರು ಇದ್ದರು.



ವರುಣ ಕ್ಷೇತ್ರದ ಗೋಣಳ್ಳಿ ಮಾರಮ್ಮ ದೇವಸ್ಥಾನದ ಜಾತ್ರಾ ಮಹೋತ್ಸವ ಫೆ.26ರಂದು ನಡೆಯಲಿದ್ದು, ಪ್ರಚಾರದ ಪೋಸ್ಟರ್‌ಗಳನ್ನು ಮಾಜಿ ಶಾಸಕರು ಹಾಗೂ ಆಶ್ರಯ ಕಮಿಟಿ ಅಧ್ಯಕ್ಷ ಡಾ. ಯತೀಂದ್ರ ಸಿದ್ದರಾಮಯ್ಯನವರು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಗೋಣಹಳ್ಳಿ ಮಾರಮ್ಮನ ದೇವಸ್ಥಾನ ಪ್ರಧಾನ ಅರ್ಚಕರಾದ ಕುಮಾರ್, ನಂಜನಗೂಡು ಶ್ರೀಕಂಠೇಶ್ವರ ದೇವಸ್ಥಾನ ಸಮಿತಿಯ ಮಾಜಿ ಅಧ್ಯಕ್ಷ ಇಂಧನ ಬಾಬು, ಗ್ರಾಮ ಪಂಚಾಯತಿ ಅಧ್ಯಕ್ಷ ಗುರುಪಾದು, ನಾರಾಯಣಿ, ಅರ್ಚಕ ದೊಡ್ಡಸ್ವಾಮಿ, ರಂಗಸ್ವಾಮಿ, ಗೋಣಳ್ಳಿ ಗ್ರಾಮಗಳ ಮುಖಂಡರು ಹಾಜರಿದ್ದರು.

ಗಾಡಿಕೂಸಣ್ಣ ನಿಧನ



ಸರಗೂರು, ಫೆ.21– ಪಟ್ಟಣ 4ನೇ ವಾರ್ಡ್ ಆದಿ ಕರ್ನಾಟಕ ಸಮಾಜದ ಮಾಜಿ ಯಜಮಾನರಾದ ಗಾಡಿ ಕೂಸಣ್ಣ (64) ಬುಧವಾರ ನಿಧನರಾಗಿದ್ದಾರೆ. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ನಾಳೆ (ಗುರುವಾರ) ಆದಿ ಕರ್ನಾಟಕ ಸಮಾಜದ ರುದ್ರಭೂಮಿಯಲ್ಲಿ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಿಡಿಓ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸುತ್ತಿರುವ ಗ್ರಾಪಂ ಸದಸ್ಯನ ವಿರುದ್ಧ ಮಾನನಷ್ಟ ಮೊಕದ್ದಮೆ

ತುಂಬಲ ಗ್ರಾಮ ಪಂಚಾಯಿತಿ ಅಧ್ಯಕ್ಷ ರಾಮನಂಜಯ್ಯ ಎಚ್ಚರಿಕೆ



ತಿ.ನರಸೀಪುರದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ತುಂಬಲ ಗ್ರಾ.ಪಂ.ಅಧ್ಯಕ್ಷ ರಾಮನಂಜಯ್ಯ ಮಾತನಾಡಿದರು.

ತಿ.ನರಸೀಪುರ, ಫೆ.21– ತಾಲೂಕಿನ ತುಂಬಲ ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಯವರ ಮೇಲೆ ಸುಳ್ಳು ಆಪಾದನೆ ಮಾಡಿ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸುತ್ತಿರುವ ಪಂಚಾಯ್ತಿ ಸದಸ್ಯ ಎಸ್.ಬಸವರಾಜು ಹಾಗೂ ಸದಸ್ಯರೊಬ್ಬರ ಸಂಬಂಧಿ ಸುರೇಶ್ ಅವರ ಮೇಲೆ ಮಾನನಷ್ಟ ಮೊಕದ್ದಮೆ ದಾಖಲಿಸಬೇಕಾಗುತ್ತದೆ ಎಂದು ಗ್ರಾ.ಪಂ.ಅಧ್ಯಕ್ಷ ರಾಮನಂಜಯ್ಯ ಎಚ್ಚರಿಕೆ ನೀಡಿದ್ದಾರೆ.

ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಪಂ ಅಭಿವೃದ್ಧಿ ಅಧಿಕಾರಿ ಎಸ್.ಧನಂಜಯ ಅವರ ಮೇಲೆ ಸದಸ್ಯ ಎಸ್.ಬಸವರಾಜು ಹಾಗೂ ಸದಸ್ಯೆ ರತ್ನಮ್ಮ ಅವರ ಮೈದುನ ಸುರೇಶ್ ಅವರುಗಳು ಇಲ್ಲಸಲ್ಲದ ಆರೋಪ ಮಾಡುತ್ತಾ ಗ್ರಾಪಂ ಕೆಲಸ ಕಾರ್ಯಗಳಿಗೆ ಅಡ್ಡಿಪಡಿಸುತ್ತಿದ್ದಾರೆ. ಸಾಲದೆಂಬಂತೆ ಯಾವುದೇ ಅಕ್ರಮ, ಭ್ರಷ್ಟಾಚಾರ ಮಾಡದೇ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಪಿಡಿಓ ಅವರನ್ನು ಅಮಾನತು ಮಾಡುವಂತೆ ಒತ್ತಾಯಿಸಿ ಮೈಸೂರಿನ ಜಿಪಂ ಕಚೇರಿ ಮುಂದೆ ಮುಷ್ಕರ ಕೈಗೊಂಡಿರುವುದು ಖಂಡನೀಯ ಎಂದು ಕಿಡಿಕಾರಿದರು.

ಅನುಷ್ಠಾನಗೊಳ್ಳದ ಕಾಮಗಾರಿಗಳ ಮಾಹಿತಿಯನ್ನು ಅಂತರ್ಜಾಲದ ಮೂಲಕ ಪಡೆದು ಸುಳ್ಳು ಆರೋಪದಲ್ಲಿ ನಿರತರಾಗಿರುವ ಈ ಇಬ್ಬರ ಮೇಲೆ ಮಾನನಷ್ಟ ಮೊಕದ್ದಮೆ ಹಾಕಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ ರಾಮನಂಜಯ್ಯ, 15 ನೇ ಹಣಕಾಸು ಯೋಜನೆಯಲ್ಲಿ ಯಾವುದೇ ಅವ್ಯವಹಾರ ಆಗದೇ ಇದ್ದರೂ ಸಹ ಅನವಶ್ಯಕವಾಗಿ ತೊಂದರೆ ನೀಡುತ್ತಿದ್ದಾರೆ. ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ಚರಂಡಿ ನೈರ್ಮಲ್ಯ ಕಾಮಗಾರಿ ಮಾಡಿದ್ದರೂ, ಸದರಿ ಕಾಮಗಾರಿಗಳಿಗೆ ಬೂದು ನೀರು ನಿರ್ವಹಣೆ ಕಾಮಗಾರಿ ಹೆಸರಿನಲ್ಲಿ ಅಕ್ರಮವಾಗಿದೆ ಎಂದು ಆರೋಪ ಮಾಡಿದ್ದಾರೆ. ಇವರು ಗ್ರಾಪಂನ ಯಾವುದೇ ಸಭೆ ಹಾಗೂ ಕಾರ್ಯಕ್ರಮಗಳಿಗೆ ಭಾಗವಹಿಸದೇ ಕ್ರಿಯಾ ಯೋಜನೆಯಲ್ಲಿರುವ ಕಾಮಗಾರಿಗಳನ್ನು ಪೂರ್ಣ ವಾಗಿ ಅನುಷ್ಠಾನ ಮಾಡದೇ ಬಿಲ್ ಪಾವತಿ ಮಾಡಲು ಒತ್ತಾಯಿಸುತ್ತಿದ್ದಾರೆ ಎಂದು ಆರೋಪಿಸಿದರು.

ಪಂಚಾಯ್ತಿ ಮಾಜಿ ಉಪಾಧ್ಯಕ್ಷ ಶೇಖರ್ ಮಾತನಾಡಿ, ಪಂಚಾಯ್ತಿಯಲ್ಲಿ ಎಲ್ಲ ಕೆಲಸಗಳು ಸಮರ್ಪಕವಾಗಿ ನಡೆದಿವೆ. ಆದರೆ ಬಸವರಾಜು ಮತ್ತು ಸುರೇಶ್ ಅಂತರ್ಜಾಲದಲ್ಲಿ ಸುಳ್ಳು ಮಾಹಿತಿ ಪಡೆದು ಪಿಡಿಓರಿಗೆ ಬೆದರಿಕೆ ಹಾಕಿ ಹಣಕ್ಕಾಗಿ ಬೇಡಿಕೆ ಒಡ್ಡುವ ಕೆಲಸ ಮಾಡುತ್ತಿದ್ದಾರೆ.ಪಂಚಾಯ್ತಿಯು ಸಿಎಂ ಸಿದ್ದರಾಮಯ್ಯ ಅವರ ತವರು ಕ್ಷೇತ್ರವಾಗಿದ್ದು ಅವರ ಹೆಸರಿಗೆ ಕಳಂಕ ತರಲು ಹೊರಟಿದ್ದಾರೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಗ್ರಾಪಂ ಉಪಾಧ್ಯಕ್ಷೆ ಸರಸ್ವತಿ, ಸದಸ್ಯರಾದ ಎಂ.ಕಂಬಯ್ಯ, ಸತೀಶ್, ಪದ್ಮ ಸುಲೋಚನ, ಮಣಿಯಮ್ಮ, ಅನಿತಾ ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
5ಡಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
5ಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಒಂದು ಸರಳ ಪ್ರೇಮಕಥೆ (ಕ)	4 ಪ್ರದರ್ಶನಗಳು
ರಾಜಕಮಲ್	
ಸೈರನ್ (ತ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
5ಡಿ (ಕ)	2 ಪ್ರದರ್ಶನಗಳು
ಕೆಟಿಎಂ (ಕ)	2 ಪ್ರದರ್ಶನಗಳು
ತಿಬ್ಬಾದೇವಿ	
5ಡಿ (ಕ)	4 ಪ್ರದರ್ಶನಗಳು
ಪ್ರಭಾ	
ಇ–ಮೇಲ್ (ಕ)	2 ಪ್ರದರ್ಶನಗಳು
ಲೇಡಿಸ್ ಬಾರ್ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಶಾಖಾಹಾರಿ (ಕ): ಬೆ.10.15ಕ್ಕೆ, ಕೆಟಿಎಂ (ಕ): ಮ.1.10ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಸಂ.4.15ಕ್ಕೆ, ಅಬ್ಬಬ್ಬ (ಕ): ರಾ.7.05ಕ್ಕೆ, ಭ್ರಮಯುಗಂ (ಮ): ರಾ.10ಕ್ಕೆ.
ಸ್ಕ್ರೀನ್ 2	ತುಂಡು (ಮ): ಬೆ.10.50ಕ್ಕೆ, ಬಾಬ್ ಮಾರ್ಲೆ: ಒನ್ ಲವ್ (ಇಂ): ಮ.1.40ಕ್ಕೆ, ರಾ.10.10ಕ್ಕೆ, ಕುಚ್ ಖಟ್ಟಾ ಹೋ ಜಾಯ್ (ಹಿಂ): ಸಂ.4.20ಕ್ಕೆ, ಪ್ರೇಮಲು (ಮ): ರಾ.7ಕ್ಕೆ.
ಸ್ಕ್ರೀನ್ 3	ಮಂಡ್ಯ ಹೈದ (ಕ): ಬೆ.10.15ಕ್ಕೆ, ಸೈರನ್ (ತ): ಮ.1.15ಕ್ಕೆ, ಮೇಡಮ್ ವೆಬ್ (ಇಂ): ಸಂ.4.35ಕ್ಕೆ, ರಾ.10ಕ್ಕೆ, ಭ್ರಮಯುಗಂ (ಮ): ರಾ.7.10ಕ್ಕೆ.
ಸ್ಕ್ರೀನ್ 4	ಸಾರಾಂಶ (ಕ): ರಾ.10.20ಕ್ಕೆ, ಉಪಾಧ್ಯಕ್ಷ (ಕ): ಮ.1.05ಕ್ಕೆ, ಫೈಟರ್ (ಹಿಂ): ಸಂ.4.10ಕ್ಕೆ, ಒಂದು ಸರಳ ಪ್ರೇಮಕಥೆ (ಕ): ರಾ.7.20ಕ್ಕೆ, ಊರು ಪೇರು ಭೈರವಕೋಣ (ತೆ): ರಾ.10.15ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ಉಪಾಧ್ಯಕ್ಷ (ಕ): ಬೆ.10.05ಕ್ಕೆ, ಮೇಡಮ್ ವೆಬ್ (ಇಂ): ಮ.1.20ಕ್ಕೆ, ರಾ.7.05ಕ್ಕೆ, ರಾ.9.40ಕ್ಕೆ, ಊರು ಪೇರು ಭೈರವಕೋಣ (ತೆ): ಮ.3.55ಕ್ಕೆ.
ಸ್ಕ್ರೀನ್ 2	ಮೇಡಮ್ ವೆಬ್ (ಇಂ): ಬೆ.9.55ಕ್ಕೆ, ಸೈರನ್ 108 (ತ): ಸಂ.4ಕ್ಕೆ, ರಾ.10.30ಕ್ಕೆ, ಉಪಾಧ್ಯಕ್ಷ (ಕ): ರಾ.7.15ಕ್ಕೆ.
ಸ್ಕ್ರೀನ್ 3	ಸೈರನ್ 108 (ತ): ಮ.12.15ಕ್ಕೆ, ಬಾಬ್ ಮಾರ್ಲೆ: ಒನ್ ಲವ್ (ಇಂ): ಸಂ.4.10ಕ್ಕೆ, ಪ್ರೇಮಲು (ಮ): ಸಂ.6.45ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಒಂದು ಸರಳ ಪ್ರೇಮಕಥೆ (ಕ): ಬೆ.10.05ಕ್ಕೆ, ಸಂ.4.20ಕ್ಕೆ, ಅಬ್ಬಬ್ಬ (ಕ): ಮ.1.15ಕ್ಕೆ, ತುಂಡು (ಮ): ರಾ.7.30ಕ್ಕೆ, ಭ್ರಮಯುಗಂ (ಮ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಫೈಟರ್ (2ಡಿ)(ಹಿಂ): ಸಂ.6.35ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.9.30ಕ್ಕೆ, ಮ.3.55ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ, ಉಪಾಧ್ಯಕ್ಷ (ಕ): ಮ.3.25ಕ್ಕೆ, ಅನ್ವೇಷಿಪಿನ್ ಕಂಡೆತುಂ (ಮ): ಸಂ.4.05ಕ್ಕೆ, ಸಾರಾಂಶ (ಕ): ಮ.1.15ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಮ.12.15ಕ್ಕೆ, ಸೈರನ್ 108 (ತ): ಬೆ.10.10ಕ್ಕೆ, ಸಂ.4.20ಕ್ಕೆ, ರಾ.10.30ಕ್ಕೆ, ಮೇಡಮ್ ವೆಬ್ (ಇಂ): ಬೆ.10.50ಕ್ಕೆ, ಮ.1.25ಕ್ಕೆ, ಸಂ.4.35ಕ್ಕೆ, ರಾ.7.10ಕ್ಕೆ, ರಾ.9.45ಕ್ಕೆ, ಪ್ರೇಮಲು (ಮ): ಮ.12.40ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, ಭ್ರಮಯುಗಂ (ಮ): ರಾ.10ಕ್ಕೆ, ಅಬ್ಬಬ್ಬ (ಕ): ಮ.2.55ಕ್ಕೆ, ವಾರನಂ ಆಯಿರಂ (ತ): ಸಂ.6ಕ್ಕೆ, ರವಿಕೆ ಪ್ರಸಂಗ (ಕ): ರಾ.9.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಶ್ರೀಕೃಷ್ಣ ಗಾನಸಭಾದಲ್ಲಿ ಪಿಟೀಲು ಚೌಡಯ್ಯನವರ ಜಯಂತಿ

ಶ್ರೀಕೃಷ್ಣನ ವ್ಯಕ್ತಿತ್ವವು ಬಹು ಆಯಾಮದಿಂದ ಕೂಡಿದೆ

ಸಂಗೀತ ಕಛೇರಿಯಲ್ಲಿ ಪಿಟೀಲಿಗೆ ಮುಖ್ಯ ಸ್ಥಾನ ಕಲ್ಪಿಸಿದವರು ಪಿಟೀಲು ಚೌಡಯ್ಯ; ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡ ಬಣ್ಣನೆ

ಮೈಸೂರು,ಫೆ.21(ಪಿಎಂ)– ಶ್ರೀಕೃಷ್ಣನ ವ್ಯಕ್ತಿತ್ವವು ಸಂಗೀತ, ಸಾಹಿತ್ಯ, ಕಲೆ ಮತ್ತು ಆಧ್ಯಾತ್ಮ ಸೇರಿದಂತೆ ಬಹು ಆಯಾಮಗಳಿಂದ ಕೂಡಿದೆ ಎಂದು ಕುವೆಂಪು ವಿವಿ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡ ಹೇಳಿದರು.

ಮೈಸೂರಿನ ಗೋಕುಲಂನ 3ನೇ ಹಂತದಲ್ಲಿರುವ ಶ್ರೀಕೃಷ್ಣ ಗಾನಸಭಾದ ಆಳ್ವಾರ್ ಕಲಾಭವನದಲ್ಲಿ ಗಾನಸಭಾದ 22ನೇ ವಾರ್ಷಿಕೋತ್ಸವದ ಪ್ರಯುಕ್ತ ಬುಧವಾರ ಹಮ್ಮಿಕೊಂಡಿದ್ದ ಪಿಟೀಲು ಚೌಡಯ್ಯನವರ ಜಯಂತಿ ಹಾಗೂ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರ ಸನ್ಮಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

'ಶ್ರೀಕೃಷ್ಣ ಗಾನಸಭಾ' ಎಂಬುದು ಸುಂದರವಾದ ಹೆಸರು. ಶ್ರೀಕೃಷ್ಣನ ಜೀವನ ಚರಿತ್ರೆ ನೋಡಿದರೆ, ಆತ ಬಾಲ್ಯದಿಂದಲೇ ಮುರಳಿ ಗಾನ ಲೋಲಾನಾಗಿದ್ದ. ಅವನು ಕೊಳಲು ನುಡಿಸುತ್ತಿದ್ದರೆ ಎಲ್ಲಾ ಪ್ರಾಣಿಗಳು ಮೇವು ಬಿಟ್ಟು ನಿಲ್ಲುತ್ತಿದ್ದವಂತೆ. ಅದೇ ರೀತಿ ನೃತ್ಯ ಪಟುವೂ ಆಗಿದ್ದ. ಶ್ರೀಕೃಷ್ಣನ ವ್ಯಕ್ತಿತ್ವ ನೋಡಿದರೆ, ಅನೇಕ ಆಯಾಮಗಳು ಕಂಡು ಬರುತ್ತವೆ. ಸಂಗೀತ–ಸಾಹಿತ್ಯ, ಕಲೆ ಮತ್ತು ಆಧ್ಯಾತ್ಮ ಸೇರಿದಂತೆ ಬಹುಮುಖ ಆಯಾಮ ಕಾಣಬಹುದು. ಶ್ರೀರಾಮನಲ್ಲೂ ಶ್ರೀಕೃಷ್ಣನಲ್ಲಿರುವಷ್ಟು ಆಯಾಮಗಳು ಕಾಣಿಸುವುದಿಲ್ಲ. ಈ ಸಭಾಂಗಣಕ್ಕೆ ಬರುತ್ತಿದ್ದಂತೆ ಶ್ರೀಕೃಷ್ಣನ ಚಿತ್ರ ನೋಡಿ ಸಂತೋಷವಾಯಿತು. ಟಿವಿಯಲ್ಲಿ ಬಾಲರಾಮನ ನೋಡಿದ ಸಂತಸದ ನೆನಪೂ ಉಂಟಾಯಿತು ಎಂದು ತಿಳಿಸಿದರು. ಡಾ.ಕೆ.ಬಿ.ಗಣಪತಿಯವರಿಗೆ ಸನ್ಮಾನಿಸಿರುವುದು ಅತ್ಯಂತ ಸ್ತುತ್ಯಾರ್ಹ ಕಾರ್ಯ. ಉದ್ಘಾಟನೆ ವೇಳೆ ದೀಪದ ಬತ್ತಿ ಹಚ್ಚಿ ಜ್ಯೋತಿ ಬೆಳಗಿಸುವಾಗ ನನಗೆ 30 ವರ್ಷಗಳ ಹಿಂದೆ ಜೆಸಿ ಕಾಲೇಜಿನಲ್ಲಿ ನಾನು ಸೇವೆ ಸಲ್ಲಿಸುತ್ತಿದ್ದ ದಿನಗಳು ನೆನಪಾದವು. ನಾನು ಪ್ರಾಂಶುಪಾಲನಾಗಿದ್ದ ಸಂದರ್ಭ. ಆಗ ಕಾಲೇಜಿನ ಹೊರಾವರಣದಲ್ಲಿ ಸಮಾರಂಭ ಮಾಡುವಾಗ ಹಚ್ಚಿದ್ದ ದೀಪ ಕೆಡುತ್ತಿದ್ದ ಹಿನ್ನೆಲೆಯಲ್ಲಿ ವಿದ್ಯುತ್ ಬಲ್ಬ್ ಅಳವಡಿಸುವ ತಂತ್ರ ಅಳವಡಿಸಲಾಗಿತ್ತು. ಇದು ನನ್ನದೇ ಸಲಹೆಯಾಗಿತ್ತು. ಕಾರ್ಯಕ್ರಮದ ವೇಳೆಯಲ್ಲೇ ದೀಪ ಕೆಟ್ಟು ಹೋಗುವುದು ಶುಭವಲ್ಲ. ಹಾಗಾಗಿ ಈ ರೀತಿಯ ಉಪಾಯ ಮಾಡಿದ್ದೆವು. ಪ್ರಾಯಶಃ ಸಂತ ಜ್ಞಾನೇಶ್ವರರು ಈ ರೀತಿಯ ಬಲ್ಬ್ ಬಳಕೆ ಕಂಡಿದ್ದರೆ ಒಪ್ಪುತ್ತಿರಲಿಲ್ಲವೇನೋ. ಒಂದು ಜ್ಯೋತಿಯಿಂದ ಮತ್ತೊಂದು ಜ್ಯೋತಿ ಹಚ್ಚುತ್ತಾ ಹೋಬೇಕೆಂಬುದು ಅವರ ಸಂದೇಶ. ವಿದ್ಯುತ್ ಬಲ್ಬ್‌ನಿಂದ ಮತ್ತೊಂದು ಬಲ್ಬ್ ಹತ್ತಿಸಲು ಸಾಧ್ಯವಿಲ್ಲ. ಹಾಗಾಗಿ ಸಂತ ಜ್ಞಾನೇಶ್ವರ ಅದನ್ನು ಒಪ್ಪುತ್ತಿರಲಿಲ್ಲ ಎಂದರು.

ಪಿಟೀಲು ಚೌಡಯ್ಯ ಅವರ ಸಂಗೀತ ಸಾಧನೆ ಅಪಾರವಾದುದು. ಅವರು ತಮ್ಮ ಕಠಿಣ ಶ್ರಮದಿಂದ ಪಿಟಿಲು ವಾದನದಲ್ಲಿ ವಿಶಿಷ್ಟ ಕಲೆ ಕರಗತ ಮಾಡಿಕೊಂಡಿದ್ದರು. ಪಿಟೀಲಿನ ನಾಲ್ಕು ತಂತಿಗೆ ಇನ್ನೂ ಮೂರು ತಂತಿ ಅಳವಡಿಸುವುದು ಸೇರಿದಂತೆ ಅನೇಕ ರೀತಿಯ ಹೊಸ ಪ್ರಯೋಗಗಳಿಗೂ ನಾಂದಿ ಹಾಡಿ ಯಶಸ್ವಿಯಾದರು. ಸಂಗೀತ ಕಛೇರಿಯಲ್ಲಿ ಕೇವಲ ಪಕ್ಕವಾದ್ಯಕ್ಕೆ ಸೀಮಿತ ಎನ್ನುವಂತಿದ್ದ ಪಿಟೀಲಿಗೆ ಮುಖ್ಯ ಸ್ಥಾನ ಕಲ್ಪಿಸುವ ಮಹತ್ಕಾರ್ಯ ಮಾಡಿದರು. ಆ ಮೂಲಕ ಸಂಗೀತ ಕಛೇರಿಯಲ್ಲಿ ಪಿಟೀಲು ವಾದನವನ್ನೇ ಪ್ರಧಾನವಾಗಿ ನುಡಿಸುವ ಪದ್ಧತಿಗೆ ಮುನ್ನುಡಿ ಬರೆದರು ಎಂದು ಸ್ಮರಿಸಿದರು.

ದ್ವಂದ್ವ ಪಿಟೀಲು ವಾದನ: ಶ್ರೀಕೃಷ್ಣ ಗಾನಸಭಾದ 22ನೇ ವಾರ್ಷಿಕೋತ್ಸದ ಪ್ರಯುಕ್ತ ಸಂಗೀತ, ತ್ಯಾಗರಾಜ ಮತ್ತು ಪುರಂದರದಾಸರ ಆರಾಧನಾ ಮಹೋತ್ಸವ ಮತ್ತು ಸಂಗೀತ ಕಾರ್ಯಕ್ರಮವನ್ನು ಫೆ.24ರವರೆಗೆ ಸಭಾದಲ್ಲಿ ಆಯೋಜಿಸಲಾಗಿದೆ. ಇದರ ಭಾಗವಾಗಿ ಇಂದು ಪಿಟೀಲು ಚೌಡಯ್ಯನವರ ಜಯಂತಿ ಮತ್ತು ದ್ವಂದ್ವ ಪಿಟೀಲು ವಾದನ ನಡೆಯಿತು. ವಿದ್ವಾನ್ ವಿಠಲ್ ರಾಮಮೂರ್ತಿ ಮತ್ತು ವಿದ್ವಾನ್ ಶ್ರೀಹರಿ ವಿಠಲ್ ತಮ್ಮ ದ್ವಂದ್ವ ಪಿಟೀಲು ವಾದನದ ಮೂಲಕ ಸಭಿಕರು ತಲೆದೂಗು ವಂತೆ ಮಾಡಿದರು. ಪಕ್ಕವಾದ್ಯದಲ್ಲಿ ವಿದ್ವಾನ್ ಎ.ರಾದೇಶ್ (ಮೃದಂಗ) ಮತ್ತು ವಿದ್ವಾನ್ ಎಂ.ಆರ್. ಮಂಜುನಾಥ್ (ಘಟಂ) ಸಹಕಾರ ನೀಡಿದರು. ಶ್ರೀಕೃಷ್ಣ ಗಾನಸಭಾದ ಅಧ್ಯಕ್ಷ ಬಿ.ಎಸ್.ಶ್ರೀಧರರಾಜ ಅರಸು ಅಧ್ಯಕ್ಷತೆ ವಹಿಸಿದ್ದರು. ಕಲಾ ಪೋಷಕ ಹೀಮಾಂಶು, ಡಾ.ಕೆ.ಬಿ. ಗಣಪತಿ ಅವರ ಧರ್ಮಪತ್ನಿ ರ‍್ಯಾಲಿ ಗಣಪತಿ, ಗಾನಸಭಾದ ಜಂಟಿ ಕಾರ್ಯದರ್ಶಿ ಡಾ.ಎಂ.ಆರ್.ಭಾರತಿ, ಕಾರ್ಯದರ್ಶಿ ಜೆ.ಮಹೇಶ್, ಸದಸ್ಯರಾದ ಪ್ರಭು, ಕೃಷ್ಣಮೂರ್ತಿ, ಗಾಯಕಿ ನಮ್ರತಾ ಮತ್ತಿತರರು ಹಾಜರಿದ್ದರು.



ಮೈಸೂರಿನ ಶ್ರೀಕೃಷ್ಣ ಗಾನಸಭಾದ ಆಳ್ವಾರ್ ಕಲಾಭವನದಲ್ಲಿ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರಿಗೆ ಶ್ರೀಕೃಷ್ಣ ಗಾನಸಭಾ ವತಿಯಿಂದ 'ಕಲಾ ಪೋಷಕ ರತ್ನ' ಬಿರುದು ನೀಡಿ ಸನ್ಮಾನಿಸಲಾಯಿತು. (ಎಡದಿಂದ) ಗಾನಸಭಾದ ಜಂಟಿ ಕಾರ್ಯದರ್ಶಿ ಡಾ.ಎಂ.ಆರ್.ಭಾರತಿ, ಅಧ್ಯಕ್ಷ ಬಿ.ಎಸ್.ಶ್ರೀಧರರಾಜ ಅರಸು, ಕಾರ್ಯದರ್ಶಿ ಜೆ.ಮಹೇಶ್, ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡ, ಸದಸ್ಯ ಪ್ರಭು, ಕಲಾ ಪೋಷಕ ಹೀಮಾಂಶು, ಪಿಟೀಲು ವಾದಕ ವಿದ್ವಾನ್ ವಿಠಲ್ ರಾಮಮೂರ್ತಿ, ಗಾಯಕಿ ನಮ್ರತಾ, ಗಾನಸಭಾದ ಸದಸ್ಯ ಕೃಷ್ಣಮೂರ್ತಿ ಅವರನ್ನು ಚಿತ್ರದಲ್ಲಿ ಕಾಣಬಹುದು.

ಡಾ.ಕೆ.ಬಿ.ಗಣಪತಿ ಅವರಿಗೆ 'ಕಲಾ ಪೋಷಕ ರತ್ನ' ಬಿರುದು ಪ್ರದಾನ

ಗುರುವಿನ ಸ್ಥಾನ ಮಹತ್ವದ್ದು; ಡಾ.ಕೆ.ಬಿ.ಗಣಪತಿ

ಮೈಸೂರು,ಫೆ.21(ಪಿಎಂ)– 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರಿಗೆ ಶ್ರೀಕೃಷ್ಣ ಗಾನಸಭಾ ವತಿಯಿಂದ 'ಕಲಾ ಪೋಷಕ ರತ್ನ' ಬಿರುದು ನೀಡಿ ಸನ್ಮಾನಿಸಲಾಯಿತು.

ಶ್ರೀಕೃಷ್ಣ ಗಾನಸಭಾದ ಆಳ್ವಾರ್ ಕಲಾಭವನದಲ್ಲಿ ಗಾನಸಭಾದ 22ನೇ ವಾರ್ಷಿಕೋತ್ಸವದ ಪ್ರಯುಕ್ತ ಬುಧವಾರ ಹಮ್ಮಿಕೊಂಡಿದ್ದ ಪಿಟೀಲು ಚೌಡಯ್ಯನವರ ಜಯಂತಿಯಲ್ಲಿ ಡಾ.ಕೆ.ಬಿ.ಗಣಪತಿ ಅವರಿಗೆ 'ಕಲಾ ಪೋಷಕ ರತ್ನ' ಬಿರುದು ನೀಡಿ ಗೌರವಿಸಲಾಯಿತು.

ಬಳಿಕ ಮಾತನಾಡಿದ ಡಾ.ಕೆ.ಬಿ.ಗಣಪತಿ ಅವರು, ಮೈಸೂರು ವಿವಿಯಿಂದ ಗೌರವ ಡಾಕ್ಟರೇಟ್ ನೀಡಿದ ಈ ಸಂದರ್ಭದಲ್ಲಿ ನನ್ನನ್ನು ಅತ್ಯಂತ ಹೃದಯವಂತಿಕೆಯಿಂದ ಗೌರವಿಸಿರುವುದು ಬಹಳ ಸಂತಸ ಉಂಟು ಮಾಡಿದೆ. ಇಂದಿನ ಸನ್ಮಾನಕ್ಕೆ ನಾನು ಆಭಾರಿಯಾಗಿದ್ದೇನೆ ಎಂದರು.

ನನಗೆ ಈ ಜಾಗ (ಗಾನಸಭಾದ ಸ್ಥಳ) ಮತ್ತು ದೇವಸ್ಥಾನ ಮೊದಲಿನಿಂದಲೂ ಪರಿಚಯ. ಜಾನಕಿ ಆಳ್ವಾರ್ ಎಂಬ ದೊಡ್ಡ ವ್ಯಕ್ತಿತ್ವದವರು ಇಲ್ಲಿದ್ದರು. ಅವರದು ದೊಡ್ಡ ಮನಸ್ಸಿನ ವ್ಯಕ್ತಿತ್ವ ಮಾತ್ರವಲ್ಲ, ಆರ್ಥಿಕವಾಗಿಯೂ ಸ್ಥಿತಿವಂತರು. ಆ ಎರಡರ ಸಮ್ಮಿಲನದಿಂದಲೇ ಈ ಸಂಸ್ಥೆಯನ್ನು ಕಟ್ಟಿದರು. ಒಳ್ಳೆಯ ಕಾರ್ಯಗಳಿಗೆ ನೆರವಾಗುವ ಉದಾರತೆ ಹಣವಿರುವ ಎಲ್ಲರಲ್ಲಿಯೂ ಬರುವುದಿಲ್ಲ ಎಂದು ಸ್ಮರಿಸಿದರು.


ಗಾನಸಭಾದ ಅಧ್ಯಕ್ಷ ಶ್ರೀಧರರಾಜ ಅರಸು ಅವರು ಮೈಸೂರು ನಗರದಲ್ಲಿ ವಿಶೇಷವಾದ ವ್ಯಕ್ತಿತ್ವದವರು. ಅಂತಹ ಅನೇಕರಿದ್ದು ಅದರಲ್ಲಿ ಇವರೂ ಒಬ್ಬರು. ಇವರು ಮೈಸೂರಿನ ಜೂನಿಯರ್ ಮಹಾರಾಜ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದರು. ಸಿನಿಮಾ ತಾರೆಯರಿಗೆ ಅಭಿಮಾನಿಗಳು ಇರುವುದನ್ನು ನೋಡುತ್ತೇವೆ. ಆದರೆ ಕಾಲೇಜಿನ ಪ್ರಾಂಶುಪಾಲರಿಗೆ ಅಷ್ಟೊಂದು ಅಭಿಮಾನಿಗಳು ಇರುವುದನ್ನು ಕಂಡಿದ್ದು ಇವರ ವಿಚಾರದಲ್ಲೇ ಎಂದು ಹರ್ಷ ವ್ಯಕ್ತಪಡಿಸಿದರು.

ನನ್ನ ತಂದೆ ಕೂಡ ಒಂದು ಶಾಲೆಯ ಮುಖ್ಯ ಶಿಕ್ಷಕರಾಗಿದ್ದರು. ಆಗಿನ ಕಾಲದಲ್ಲಿ ಅವರು ಬೆತ್ತ ಹಿಡಿದು ಪಾಠ ಮಾಡುತ್ತಿದ್ದರು. ಈಗಿನ ಕಾಲದಲ್ಲಿ ಕೇವಲ ಡಸ್ಟರ್ ಹಿಡಿದುಕೊಂಡು ಪಾಠ ಮಾಡಬೇಕು. ಬೆತ್ತ ಹಿಡಿದರೆ ವಿದ್ಯಾರ್ಥಿಗಳ ಪೋಷಕರು ಮುತ್ತಿಗೆ ಹಾಕುತ್ತಾರೆ. ಶ್ರೀಧರರಾಜ ಅರಸು ಅವರು ಪ್ರಾಂಶುಪಾಲರಾಗಿದ್ದಾಗ ವಿದ್ಯಾರ್ಥಿಗಳು ಹಾಗೂ ಬೋಧಕ ವರ್ಗದವರೂ ಅವರ ಮೇಲೆ ಅತೀವ ಅಭಿಮಾನ ವ್ಯಕ್ತಪಡಿಸುತ್ತಿದ್ದರು. ನನ್ನ ಶ್ರೀಮತಿಯವರೂ ಅವರ ಕಾಲೇಜಿನಲ್ಲೇ ಪ್ರಾಧ್ಯಾಪಕರಾಗಿದ್ದರು. ಅವರೂ ಶ್ರೀಧರರಾಜ ಅರಸು ಅವರ ಅಭಿಮಾನಿಗಳು. ಹಾಗಾಗಿ ಇಂದಿನ ಸನ್ಮಾನದ ಆಹ್ವಾನ ಕೊಟ್ಟಾಗ ಬಾರದೇ ಇರಲು ಸಾಧ್ಯವೇ ಇರಲಿಲ್ಲ ಎಂದರು. ಶ್ರೀಧರರಾಜ ಅರಸು ಅವರು ವೃತ್ತಿಯಿಂದ ನಿವೃತ್ತಿಯಾಗಿದ್ದಾರೆ. ಹಳೇ ಕಾಲದಲ್ಲಿ ಉಪಾಧ್ಯಾಯರು ನಿವೃತ್ತಿಯಾದರೆ ಮನೆಯಲ್ಲಿ ಉಚಿತವಾಗಿ ಟ್ಯೂಷನ್ ಕೊಡುತ್ತಿದ್ದರು. ಈಗ ಟ್ಯೂಷನ್ ಎಂಬುದು ವಾಣಿಜ್ಯೀಕರಣಗೊಂಡಿದೆ. ಆದ್ದರಿಂದ ನಿವೃತ್ತಿಯಾದವರು ಸೇವೆ ಮಾಡಲು ಅವಕಾಶವಿಲ್ಲವಾಗಿದೆ. ಹೀಗಾಗಿ ಇವರು ಆಧ್ಯಾತ್ಮದ ಕಡೆಗೆ ಮುಖ ಮಾಡಿದ್ದಾರೆ. ಇಲ್ಲಿನ ಕೃಷ್ಣ ದೇವಸ್ಥಾನದ ಜೊತೆಗೆ ಗಾನಸಭಾ ನಡೆಸುತ್ತಾರೆ. ಇವರು ಶಿಕ್ಷಣ ನೀಡುವ ಗುರುಗಳಾಗಿದ್ದರು. ಈಗ ಆಧ್ಯಾತ್ಮಿಕ ಗುರುಗಳಾಗಿದ್ದಾರೆ. ಗುರುವಿನ ಸ್ಥಾನ ಮಹತ್ವದ್ದು. ಹಾಗಾಗಿಯೇ ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕ್ತಿ ಎನ್ನಲಾಗುತ್ತದೆ ಎಂದು ತಿಳಿಸಿದರು. ಡಾ.ಕೆ.ಚಿದಾನಂದ ಗೌಡ ಅವರದು ನನಗೆ ಬಹಳ ವರ್ಷಗಳ ಪರಿಚಯ. ಅವರದು ಅಪ್ರತಿಮ ವ್ಯಕ್ತಿತ್ವ. ಅವರು ಅತ್ಯಂತ ವಿದ್ವತ್ ಹೊಂದಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿನ ಅವರ ಸಾಧನೆ ಅಪಾರವಾದುದು ಎಂದು ನುಡಿದರು.



ಮೈಸೂರಿನ ಶ್ರೀಕೃಷ್ಣ ಗಾನಸಭಾದ ಆಳ್ವಾರ್ ಕಲಾಭವನದಲ್ಲಿ ಬುಧವಾರ ವಿದ್ವಾನ್ ವಿಠಲ್ ರಾಮಮೂರ್ತಿ ಮತ್ತು ವಿದ್ವಾನ್ ಶ್ರೀಹರಿ ವಿಠಲ್ ದ್ವಂದ್ವ ಪಿಟೀಲು ವಾದನದ ಸಂಗೀತ ಕಛೇರಿ ನಡೆಸಿಕೊಟ್ಟರು.

ಕಳೆದ ಬಜೆಟ್‌ನಲ್ಲಿ ಅಲ್ಪಸಂಖ್ಯಾತ ಇಲಾಖೆಗೆ ನೀಡಿದ್ದು 2,105 ಕೋಟಿ, ಖರ್ಚಾಗಿದ್ದು ಕೇವಲ 432 ಕೋಟಿ!



ಬೆಂಗಳೂರು: ಕಾಂಗ್ರೆಸ್ ಸರ್ಕಾರ 2023–24ರಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಅಲ್ಪಸಂಖ್ಯಾತ ಇಲಾಖೆಗೆ ನೀಡಿದ ಅನುದಾನ 2105 ಕೋಟಿ. ಆದರೆ, ಖರ್ಚಾಗಿದ್ದು ಕೇವಲ 432 ಕೋಟಿ ಎಂದು ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಗಮನ ಸೆಳೆದರು.

ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಭಾಷಣದಲ್ಲಿ ಮಾತನಾಡಿದ ಅವರು, ಇಲಾಖಾವಾರು ಕಳೆದ ಬಜೆಟ್‌ನಲ್ಲಿ ಕೊಟ್ಟ ಅನುದಾನ ಹಾಗೂ ಖರ್ಚಾದ ವೆಚ್ಚದ ಬಗ್ಗೆ ಮಾಹಿತಿ ನೀಡಿದರು.

ಕಳೆದ ಬಜೆಟ್‌ನಲ್ಲಿ ಅಲ್ಪಸಂಖ್ಯಾತ ಇಲಾಖೆಗೆ 2105 ಕೋಟಿ ಅನುದಾನ ನೀಡಲಾಗಿತ್ತು. ಆದರೆ 432 ಕೋಟಿ ಮಾತ್ರ ಖರ್ಚಾಗಿದೆ. ನಗರಾಭಿವೃದ್ಧಿ 22706 ಕೋಟಿ ಪೈಕಿ ಶೇ.44ರಷ್ಟು ಖರ್ಚಾಗಿದೆ. ಆಹಾರ ಇಲಾಖೆಗೆ ನೀಡಲಾಗಿದ್ದ 10716 ಕೋಟಿ ಪೈಕಿ ಶೇ.41ರಷ್ಟು ಖರ್ಚಾಗಿದೆ. ಪ್ರವಾಸೋದ್ಯಮ ಇಲಾಖೆಗೆ 381 ಕೋಟಿ ಅನುದಾನ ಕೊಡಲಾಗಿತ್ತು, ಈ ಪೈಕಿ ಬಿಡುಗಡೆ ಆಗಿದ್ದು 187 ಕೋಟಿ, ಆದರೆ ಖರ್ಚಾಗಿದ್ದು 102 ಕೋಟಿ ಎಂದು ವಿವರಿಸಿದರು. ಹಿಂದುಳಿದ ವರ್ಗಕ್ಕೆ 3072 ಕೋಟಿ ಅನುದಾನ ನೀಡಲಾಗಿದ್ದು, ಈ ಪೈಕಿ ಶೇ.38 ಮಾತ್ರ ಖರ್ಚಾಗಿದೆ. ಅನುದಾನ ಇಟ್ಟಿದ್ದನ್ನು ಖರ್ಚು ಮಾಡಲು ಸಾಧ್ಯವಾಗಿಲ್ಲ ಎಂದು ತಿಳಿಸಿದರು. ಎಸ್‌ಸಿ, ಎಸ್‌ಟಿ ಇಲಾಖೆಗೆ ನೀಡಲಾಗಿದ್ದ ಅನುದಾನದಲ್ಲಿ ಶೇ.49 ಖರ್ಚಾಗಿದೆ. ಎಸ್‌ಇಪಿಟಿಎಸ್‌ಪಿಗೆ 39,000 ಕೋಟಿ ಇಡಲಾಗಿದೆ ಆದರೆ, ಶೇ.50 ರಷ್ಟು ಕೂಡ ಖರ್ಚಾಗಿಲ. ಆರ್‌ಡಿಪಿಆರ್ ಶೇ.44, ಜಲಸಂಪನ್ಮೂಲ ಶೇ.53, ಕೃಷಿ ಶೇ.52, ಆರೋಗ್ಯ ಶೇ.55, ಉನ್ನತ ಶಿಕ್ಷಣ ಶೇ.60 ವೈದ್ಯಕೀಯ ಶಿಕ್ಷಣ ಶೇ.58, ಬೃಹತ್ ಕೈಗಾರಿಕಾ ಶೇ.69, ಲೋಕೋಪಯೋಗಿ ಶೇ.59ರಷ್ಟು ಖರ್ಚಾಗಿದೆ ಎಂದು ಮಾಹಿತಿಯನ್ನು ನೀಡಿದರು.

ರೈತರ ಸಹಾಯಕ್ಕೆ ನೀವು ಬರಬೇಕಾಗಿದೆ: ಬಜೆಟ್ ಭಾಷಣದ ಸಂದರ್ಭದಲ್ಲಿ ರೈತರ ಸಹಾಯಕ್ಕೆ ನೀವು ಬರಬೇಕಾಗಿದೆ ಎಂದು ಮಾಜಿ ಸಿಎಂ ಬಸವರಾಜ ಬೊಮ್ಮಾಯಿಗೆ ಲಕ್ಷ್ಮಣ ಸವದಿ ಆಗ್ರಹಿಸಿದರು. ನಿಮ್ಮ ಪ್ರಭಾವ ಕೇಂದ್ರದಲ್ಲಿದೆ. ನೀವು ಹೇಳೋ ಕೆಲಸ ಕೇಂದ್ರ ಮಾಡುತ್ತದೆ. ಕೇಂದ್ರ ಎಥೆನಾಲ್ ಪಾಲಿಸಿ ತಂದಿದೆ, ಇದನ್ನು ಸರಳೀಕರಣ ಮಾಡಿ ಅಂತ ಕೇಂದ್ರಕ್ಕೆ ಹೇಳಿ. ಇಲ್ಲದಿದ್ದರೆ ಈ ಸಮಸ್ಯೆಯಿಂದ ಸಕ್ಕರೆ ಕಾರ್ಖಾನೆ ಮಾಲೀಕರು, ರೈತರು ಬೀದಿಗೆ ಬರ್ತಾರೆ ಎಂದರು.

ವಿದ್ಯುತ್ ದೀಪದ ಬೆಳಕಲ್ಲಿ ಭೋದಿವೃಕ್ಷದೊಳಗೆ ಬೆಳಗಿದ ಸಂವಿಧಾನ



ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಸಮಾಜ ಕಲ್ಯಾಣ ಇಲಾಖೆ ವತಿಯಿಂದ 3000ಕ್ಕೂ ಹೆಚ್ಚು ವಿದ್ಯುತ್ ದೀಪಗಳ ಮೂಲಕ ಭೋದಿವೃಕ್ಷ ವಿನ್ಯಾಸಗೊಳಿಸಿ ಸಂವಿಧಾನ ಜಾಗೃತಿ ಮೂಡಿಸಲಾಯಿತು.

ಮೈಸೂರು, ಫೆ21(ಎಂಕೆ)–ದೀಪಗಳ ಸಾಲಿನಲ್ಲಿ ಬೆಳಗಿದ ಭೋದಿವೃಕ್ಷದೊಳಗೆ 'ಭಾರತ ಸಂವಿಧಾನ'ವೆಂಬ ಸಾಲು, 'ಡಾ.ಬಿ.ಆರ್.ಅಂಬೇಡ್ಕರ್' ಅವರ ಭಾವಚಿತ್ರ ವಿನ್ಯಾಸಗೊಳಿಸುವ ಮೂಲಕ ಸಂವಿಧಾನ ಜಾಗೃತಿ ಮೂಡಿಸಲಾಯಿತು.

ಮೈಸೂರಿನ ಅರಮನೆ ಉತ್ತರದ್ವಾರದಲ್ಲಿರುವ ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮದ ಅಂಗವಾಗಿ 3000ಕ್ಕೂ ಹೆಚ್ಚು ವಿದ್ಯುತ್ ದೀಪಗಳ ಮೂಲಕ ಭೋದಿವೃಕ್ಷ ವಿನ್ಯಾಸಗೊಳಿಸಿ, ಸಾರ್ವಜನಿಕರಲ್ಲಿ ಸಂವಿಧಾನ, ಸಂವಿಧಾನ ಪೀಠಿಕೆ ಹಾಗೂ ಅಂಬೇಡ್ಕರ್ ಕೊಡುಗೆಯನ್ನು ಮನದಟ್ಟು ಮಾಡಿಕೊಡಲಾಯಿತು.

ವರಕೋಡು ಮೊರಾರ್ಜಿ ದೇಸಾಯಿ ಶಾಲೆ ಶಿಕ್ಷಕ ಮುರಳಿ ನೇತೃತ್ವದಲ್ಲಿ 20ಕ್ಕೂ ಹೆಚ್ಚು ದೈಹಿಕ ಶಿಕ್ಷಕರು, ಕಲಾ ಶಿಕ್ಷಕರು ಭೋದಿವೃಕ್ಷ (ಭಾರತ ಸಂವಿಧಾನ ಮತ್ತು ಅಂಬೇಡ್ಕರ್ ಅವರ ಭಾವಚಿತ್ರ ಒಳಗೊಂಡಂತೆ), ಸಂವಿಧಾನ ಜಾಥಾ ಹಾಗೂ ಸಮಾಜಕ ಕಲ್ಯಾಣ ಇಲಾಖೆ ಎಂದು ಚಿತ್ರಿಸಿ, ವಿನ್ಯಾಸಕ್ಕೆ ಅನುಗುಣವಾಗಿ ವಿದ್ಯುತ್ ದೀಪಗಳನ್ನು ಜೋಡಿಸಿ ಸಂವಿಧಾನ ಜಾಗೃತಿ ಮೂಡಿಸಿದರು. ಬಳಿಕ ಇಲಾಖೆ ಸಿಬ್ಬಂದಿ ಹಾಗೂ ಸಾರ್ವಜನಿಕರೊಡಗೂಡಿ ಸಂವಿಧಾನ ಪೀಠಿಕೆಯನ್ನು ಬೋಧಿಸಲಾಯಿತು.

ನಂತರ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ ಮಾತನಾಡಿ, ಸರ್ಕಾರ ನಿರ್ದೇಶನದಂತೆ ಜ.26 ರಿಂದ ಫೆ.26ರವರೆಗೆ ಭಾರತ ಸಂವಿಧಾನ ಕುರಿತು ವಿವಿಧ ಬಗೆಯ ಕಾರ್ಯಕ್ರಮ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಕಳೆದ 15 ದಿನಗಳಿಂದ ಮೈಸೂರು ನಗರದಲ್ಲೇ ನಿರಂತರವಾಗಿ ಅರಿವು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಅದರಂತೆಯೇ ಭೋದಿವೃಕ್ಷ, ಅದರೊಳಗೆ ಭಾರತ ಸಂವಿಧಾನ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರ ಬಿಡಿಸಿ, ಜಾಗೃತಿ ಜಾಥಾ ಬರಹದ ಮೂಲಕ ಅರಮನೆ ಹಾಗೂ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಬರುವ ಎಲ್ಲರಿಗೂ ಜಾಗೃತಿ ಮೂಡಿಸುತ್ತಿದ್ದೇವೆ ಎಂದು ಹೇಳಿದರು. ಸಂಜೆ 5 ಗಂಟೆಯಿಂದಲೇ ನಮ್ಮೊಂದಿಗೆ ಸಾಕಷ್ಟು ಸಾರ್ವಜನಿಕರು ಕೂಡ ಭಾಗಿಯಾಗಿದ್ದು, ಹಲವರು ಭೋದಿವೃಕ್ಷದ ವಿನ್ಯಾಸದ ಬಳಿ ನಿಂತು ಫೋಟೊ ಕ್ಲಿಕ್ಕಿಸಿಕೊಳ್ಳುತ್ತಿದ್ದಾರೆ. ಪ್ರತಿಯೊಬ್ಬರಿಗೂ ಸಂವಿಧಾನವನ್ನು ಓದಬೇಕು. ಕಾನೂನು ಅರಿವು ನಿಮ್ಮಲ್ಲಿರಬೇಕಾದರೆ ಸಂವಿಧಾನವನ್ನು ಓದಿ. ನಿಮ್ಮ ಮೂಲಭೂತ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ತಿಳಿದುಕೊಳ್ಳಿ ಎಂದು ತಿಳುವಳಿಕೆ ನೀಡುತ್ತಿದ್ದೇವೆ ಎಂದರು.

ಚಿತ್ರೀಕರಣಕ್ಕೆ ಪೊಲೀಸರ ತಡೆ!: ವಿದ್ಯುತ್ ದೀಪಗಳಿಂದ ಭೋದಿವೃಕ್ಷದ ವಿನ್ಯಾಸದ ಮೂಲಕ ಹಮ್ಮಿಕೊಂಡಿದ್ದ 'ಭಾರತ ಸಂವಿಧಾನ' ಜಾಗೃತಿ ಜಾಥಾ ಕಾರ್ಯಕ್ರಮದ ಚಿತ್ರೀಕರಣಕ್ಕೆ ಪೊಲೀಸರು ಅವಕಾಶ ನೀಡಲಿಲ್ಲ. ಡ್ರೋಣ್ ಕ್ಯಾಮರಾ ಮೂಲಕ ಚಿತ್ರೀಕರಣಕ್ಕೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಮುಂದಾಗಿದ್ದರು. ಇನ್ನೇನು ಚಿತ್ರೀಕರಣ ನಡೆಸಬೇಕು ಎನ್ನುವಷ್ಟರಲ್ಲಿ ಡ್ರೋಣ್ ಹಾರಾಡುವುದನ್ನು ಗಮನಿಸಿದ ಪೊಲೀಸರು ಕೂಡಲೇ ನಿಲ್ಲಿಸುವಂತೆ ಸೂಚನೆ ನೀಡಿದರಲ್ಲದೆ ಅರಮನೆ ಸಮೀಪ ಡ್ರೋಣ್ ಕ್ಯಾಮರಾ ಬಳಸುವಂತಿಲ್ಲ ಎಂದರು. ಪೊಲೀಸರ ಮಾತಿಗೆ ಪ್ರತಿಕ್ರಿಯಿಸಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಡ್ರೋಣ್ ಚಿತ್ರೀಕರಣ ನಿಲ್ಲಿಸಿ, ವಾಹನವೊಂದರ ಮೇಲೆ ನಿಂತು ಫೋಟೊ ತೆಗೆದುಕೊಳ್ಳಲು ಅವಕಾಶ ಮಾಡಿಕೊಟ್ಟರು.